بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

## ಅಲ್ಲಾಹನ ಉಪದೇಶ — ಶಆಇರುಲ್ಲಾಹ್ (ಪವಿತ್ರ ಕುರುಹುಗಳ) ಮಹತ್ವ

وَاصۡبِرۡ نَفۡسَکَ مَعَ الَّذِیۡنَ یَدۡعُوۡنَ رَبَّہُمۡ بِالۡغَدٰوۃِ وَالۡعَشِیِّ یُرِیۡدُوۡنَ وَجۡہَہٗ ۫ وَلَا تَعۡدُ عَیۡنٰکَ عَنۡہُمۡ تُرِیۡدُ زِیۡنَۃَ الۡحَیٰوۃِ الدُّنۡیَا

(ಅಲ್‌ಕಹಫ್ : 29)

ಅಂದರೆ: ತಮ್ಮ ಪ್ರಭುವಿನ ಪ್ರೀತಿಯನ್ನು ಬಯಸುತ್ತಾ ಮುಂಜಾವ ಮತ್ತು ಮುಸ್ಸಂಜೆ ಅವನೊಡನೆ ಪ್ರಾರ್ಥಿಸುವವರೊಂದಿಗೆ ನೀನು ಸಂಬಂಧವಿರಿಸಿಕೋ, ಇಹಲೋಕ ಜೀವಿತದ ವೈಭವವನ್ನು ಬಯಸಿ ನಿನ್ನ ಕಣ್ಣುಗಳು ಅವರಿಂದ ಅಗಲಿ ಹೋಗದಿರಲಿ.

ಸಂಪುಟ: 07, ಸಂಚಿಕೆ: 43–44, 22–29 ಅಕ್ಟೋಬರ್ 2026, 22–29 ಅಖಾ 1405 ಹಿಜರಿ ಶಮ್ಸಿ, 10–17 ಜಮಾದಿ ಅಲ್ ಅವ್ವಲ್ 1448 ಹಿಜರಿ ಖಮರಿ. (www.akhbarbadr.in)

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ — ಪವಿತ್ರ ಖುರ್‌ಆನಿನ ಬೋಧನೆ ಮತ್ತು ಅಧ್ಯಾಯನದ ಮಜ್ಲಿಸ್

عَنْ أَبِي هُرَيْرَةَ رَضِيَ اللهُ عَنْهُ قَالَ: قَالَ رَسُولُ اللهِ ﷺ: مَا اجْتَمَعَ قَوْمٌ فِي بَيْتٍ مِنْ بُيُوتِ اللهِ، يَتْلُونَ كِتَابَ اللهِ، وَيَتَدَارَسُونَهُ بَيْنَهُمْ، إِلَّا نَزَلَتْ عَلَيْهِمُ السَّكِينَةُ، وَغَشِيَتْهُمُ الرَّحْمَةُ، وَحَفَّتْهُمُ الْمَلَائِكَةُ، وَذَكَرَهُمُ اللهُ فِيمَنْ عِنْدَهُ.

ಹರ್ಝ್‌ರತ್ ಅಬೂ ಹುರೈರಾ ರಝಿಯಲ್ಲಾಹು ಅನ್ಹು ವರದಿ ಮಾಡುತ್ತಾರೆ: ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಹೀಗೆ ಹೇಳಿದರು:

"ಅಲ್ಲಾಹನ ಮನೆಗಳಲ್ಲಿ ಯಾವುದಾದರೂ ಒಂದು ಮನೆಯಲ್ಲಿ ಜನರು ಒಟ್ಟುಗೂಡಿ, ಅಲ್ಲಾಹನ ಗ್ರಂಥವಾದ ಖುರ್‌ಆನ್ ಅನ್ನು ಪಠಿಸುತ್ತಾ ಮತ್ತು ಪರಸ್ಪರ ಅದರ ಅಧ್ಯಯನ ಹಾಗೂ ಬೋಧನೆಯಲ್ಲಿ ತೊಡಗಿದ್ದರೆ, ಅವರ ಮೇಲೆ ಸಕೀನತ್ (ಮನಃಶಾಂತಿ) ಅವತರಿಸುತ್ತದೆ; ಅಲ್ಲಾಹನ ಕರುಣೆ ಅವರನ್ನು ಆವರಿಸುತ್ತದೆ; ದೇವದೂತರು ಅವರನ್ನು ಸುತ್ತುವರಿಯುತ್ತಾರೆ; ಮತ್ತು ಅಲ್ಲಾಹನು ತನ್ನ ಸನ್ನಿಧಿಯಲ್ಲಿರುವವರ ನಡುವೆ ಅವರನ್ನು ಸ್ಮರಿಸುತ್ತಾನೆ."

(ಸಹೀಹ್ ಮುಸ್ಲಿಮ್, ಕಿತಾಬುಝ್ಝಿಕ್ರ್ ವದ್ದುಆ ವತ್ತೌಬತಿ ವಲಿಸ್ತಿಗ್ಫಾರ್, ಕುರ್‌ಆನ್ ಪಠಣ ಮತ್ತು ಝಿಕ್ರ್‌ಗಾಗಿ ಒಟ್ಟುಗೂಡುವುದರ ಶ್ರೇಷ್ಠತೆಯ ಅಧ್ಯಾಯ, ಹದೀಸ್ ಸಂಖ್ಯೆ 2699)



## ಹರ್ಝ್‌ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ — ಧಾರ್ಮಿಕ ಮಜ್ಲಿಸ್‌ಗಳಲ್ಲಿ ಈಮಾನ್‌ನ ಸಂರಕ್ಷಣೆ ಮತ್ತು ಸತ್ಯವನ್ನು ಹೇಳುವ ಅಗತ್ಯತೆ

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಹೇಳುತ್ತಾರೆ:

"ನಮ್ಮ ಮರ್ಝ್‌ಹಬ್ (ನಿಲುವು) ಹೀಗಿದೆ ಮತ್ತು ಇದೇ ಒಬ್ಬ ಮುಮಿನ್‌ನ ಮಾರ್ಗವಾಗಿರಬೇಕು: ಅವನು ಮಾತನಾಡಿದರೆ ತನ್ನ ಮಾತನ್ನು ಪೂರ್ಣವಾಗಿ ಸ್ಪಷ್ಟಪಡಿಸಬೇಕು; ಇಲ್ಲವಾದರೆ ಮೌನವಾಗಿರಬೇಕು. ಯಾವುದಾದರೂ ಒಂದು ಮಜ್ಲಿಸ್‌ನಲ್ಲಿ (ಸಭೆಯಲ್ಲಿ) ಅಲ್ಲಾಹನ ಮತ್ತು ಅವನ ಪ್ರವಾದಿಯವರ ಕುರಿತು ಅಪಹಾಸ್ಯ ಮತ್ತು ಹಾಸ್ಯ ಮಾಡಲಾಗುತ್ತಿರುವುದನ್ನು ನೋಡಿದಾಗ, ಅಲ್ಲಿಂದ ಹೊರಟುಬಿಡಬೇಕು, ಹಾಗೆ ಮಾಡಿದರೆ ಅವರಲ್ಲಿ ಒಬ್ಬನೆಂದು ಪರಿಗಣಿಸಲ್ಪಡುವುದಿಲ್ಲ. ಅಥವಾ ಅಲ್ಲಿಯೇ ಉಳಿದು ಸಂಪೂರ್ಣವಾಗಿ ಸ್ಪಷ್ಟವಾಗಿ ಉತ್ತರ ನೀಡಬೇಕು. ಎರಡು ಮಾರ್ಗಗಳಿವೆ: ಉತ್ತರ ನೀಡುವುದು ಅಥವಾ ಮೌನವಾಗಿರುವುದು. ಮೂರನೆಯ ಮಾರ್ಗವು ನಿಫಾಕ್ (ಕಪಟತನ)ವಾಗಿದೆ, ಅಂದರೆ ಆ ಮಜ್ಲಿಸ್‌ನಲ್ಲಿ ಕುಳಿತುಕೊಂಡೇ ಇರುವುದು ಮತ್ತು ಅವರು ಹೇಳುವುದಕ್ಕೆ 'ಹೌದು' ಎಂದು ಸಮ್ಮತಿಸುತ್ತಾ ಹೋಗುವುದು; ಆದರೆ ಅತೀ ಮೃದುವಾದ ಧ್ವನಿಯಲ್ಲಿ, ಮರೆಯಾಗಿಯೇ ತನ್ನ ಅಕೀದೆಯನ್ನು (ನಂಬಿಕೆಯನ್ನು) ವ್ಯಕ್ತಪಡಿಸುವುದು." **(ಮಲ್ಫೂಝಾತ್, ಸಂಪುಟ 5, ಪುಟ 449; ಬದರ್, 14 ಮಾರ್ಚ್ 1908)**

## ತಫ್ಸೀರ್ ಕಬೀರ್‌ನಿಂದ ಉಲ್ಲೇಖ — ಧಾರ್ಮಿಕ ಸಭೆಗಳ ಮಹತ್ವ


ಹರ್ಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಹೇಳುತ್ತಾರೆ:

"ಕೆಲವು ಸ್ನೇಹಿತರ ಬಗ್ಗೆ ನನಗೆ ವಿಷಾದವಿದೆ. ಅವರ ಸಂಖ್ಯೆ ಬಹಳ ಕಡಿಮೆಯಾದರೂ, ತಿಳಿಹೇಳಿದ ನಂತರವೂ ಅವರು ಮಜ್ಲಿಸ್‌ನಿಂದ ಎದ್ದು ಹೊರಗೆ ಹೋಗಿ ಅಲೆದಾಡುತ್ತಿರುತ್ತಾರೆ. ಪ್ರತಿಯೊಂದು ಜಮಾಅತ್‌ನಲ್ಲಿಯೂ ಕೆಲವರು ಕೇವಲ ಪ್ರದರ್ಶನಕ್ಕಾಗಿ ಬರುವ ಸದಸ್ಯರು ಇರುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ಅವರು ಮಜ್ಲಿಸ್‌ನಲ್ಲಿ ತಮ್ಮ ಹಾಜರಾತಿಯನ್ನು ಪ್ರದರ್ಶಿಸಿದ ನಂತರ ಸ್ಥಳವನ್ನು ಬಿಟ್ಟು ಹೋಗುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿಯೂ ಇಂತಹ ಪ್ರದರ್ಶನಪ್ರಿಯ ಜನರು ರಸೂಲ್ ಕರೀಮ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಅವರ ಕಾಲದಲ್ಲಿಯೂ ಇದ್ದರು ಎಂದು ತಿಳಿದುಬರುತ್ತದೆ. ಮಜ್ಲಿಸ್ ಏರ್ಪಟ್ಟಾಗ ಅವರು ಕೂಡ ಬಂದು ಸೇರುತ್ತಿದ್ದರು. ಮಾತುಕತೆ ಪ್ರಾರಂಭವಾಗುವ ಮೊದಲು ಎಲ್ಲರ ಮೇಲೂ ದೃಷ್ಟಿ ಬೀಳುತ್ತಿತ್ತು. ಸಹಾಬಾಗಳು ಅವರನ್ನು ನೋಡುತ್ತಿದ್ದರು. ಆದರೆ ಕಾರ್ಯ ಪ್ರಾರಂಭವಾದಾಗ ಅವರು ಯಾರ ಗಮನಕ್ಕೂ ಬೀಳದಂತೆ ನಿಧಾನವಾಗಿ ಅಲ್ಲಿಂದ ಜಾರಿಕೊಳ್ಳಲು ಪ್ರಾರಂಭಿಸುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಇಂತಹ ಜನರ ಕುರಿತು ಹೇಳುತ್ತಾನೆ: **ಖಿದ್ ಯಅ್‌ಲಮುಲ್ಲಾಹುಲ್ಲಝೀನ ಯತಸಲ್ಲಲೂನ ಮಿನ್‌ಕುಮ್ ಲಿವಾಝ್–** 'ನಿಮ್ಮೊಳಗಿಂದ ಇತರರ ಗಮನಕ್ಕೆ ಬಾರದಂತೆ ಮಜ್ಲಿಸ್‌ನಿಂದ ಜಾರಿಕೊಂಡು ಹೋಗುವವರನ್ನು ಅಲ್ಲಾಹನು ಚೆನ್ನಾಗಿ ತಿಳಿದಿದ್ದಾನೆ.' ಇಂತಹ ಪ್ರದರ್ಶನಪ್ರಿಯ ಸದಸ್ಯರು ಇಲ್ಲಿಯೂ ಇರಬಹುದು. ಆದರೆ ಅನೇಕ ಜನರು ಈ ವಿಷಯದ ಮಹತ್ವವನ್ನು ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ತಮ್ಮ ಈ ಕೃತ್ಯವು ಎಂತಹುದಾಗಿದೆ ಎಂಬುದನ್ನೂ ಅವರಿಗೆ ತಿಳಿದಿರುವುದಿಲ್ಲ. ಹದೀಸ್‌ಗಳಲ್ಲಿ ಬರುತ್ತದೆ: ಒಂದು ಸಂದರ್ಭದಲ್ಲಿ ರಸೂಲ್ ಕರೀಮ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಅವರು ಭಾಷಣ ಮಾಡುತ್ತಿದ್ದರು. ಆಗ ಅವರು ಹೇಳಿದರು: ಸರ್ವಶಕ್ತನಾದ ಅಲ್ಲಾಹನು ನನಗೆ ತಿಳಿಸಿದ್ದಾನೆ, ಈ ಮಜ್ಲಿಸ್‌ಗೆ ಒಬ್ಬ ವ್ಯಕ್ತಿ ಬಂದನು. ಅವನು ಮಜ್ಲಿಸ್ ಜನರಿಂದ ತುಂಬಿರುವುದನ್ನು ಕಂಡನು. ಅವನಿಗೆ ಧ್ವನಿಯು ಕಷ್ಟಪಟ್ಟು ತಲುಪುತ್ತಿತ್ತು. ಆದರೆ ಇದು ಅಲ್ಲಾಹನ ಝಿಕ್ರ್ ನಡೆಯುತ್ತಿರುವ ಮಜ್ಲಿಸ್, ಇಲ್ಲಿಂದ ಹೋಗಬಾರದು ಎಂದು ಭಾವಿಸಿ, ನಾಚಿಕೆಯಿಂದ ಅಲ್ಲಿಯೇ ಕುಳಿತುಕೊಂಡನು. ಅಲ್ಲಾಹನು ಹೇಳಿದನು: 'ನಾನು ಕೂಡ ಅವನ ಪಾಪಗಳ

*(ಪುಟ ಸಂಖ್ಯೆ–16 ರಲ್ಲಿ ಮುಂದುವರಿಸಲಾಗಿದೆ)*

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**



# ಖುತ್‌ಬ ಜುಮುಅ

## ಕೃತಜ್ಞತೆಯ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರ ಪ್ರಾಯೋಗಿಕ ಮಾದರಿ ಮತ್ತು ಅವರ ಬೋಧನೆಗಳು

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **28–08–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರ ಧ್ವಜವನ್ನು ಲೋಕದೆಲ್ಲೆಡೆ ಹಾರಿಸಲು ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ಪ್ರಯತ್ನಗಳು ಸ್ಪಷ್ಟವಾಗಿ ಕಾಣುವ ಸಂಗತಿಯಾಗಿದೆ. ಆದರೆ ತಮ್ಮ ಈ ಉದ್ದೇಶವನ್ನು ಪೂರೈಸಲು ಯಾವುದೇ ರೀತಿಯಲ್ಲಿ ಸಹಾಯ ಮಾಡಿದ ತಮ್ಮ ಸಹಾಯಕರ ಬಗ್ಗೆಯೂ ಅವರು ಅತ್ಯಂತ ಕೃತಜ್ಞರಾಗಿದ್ದರು. ಅದರಂತೆ ಹಝ್ರತ್ ಮಸೀಹ್ ಮೌಊದ್(ಅ) 4 ಅಕ್ಟೋಬರ್ 1899ರ ಒಂದು ಪ್ರಕಟಣೆಯಲ್ಲಿ ಹೀಗೆ ಹೇಳಿದರು: "ದೇವನ ಪ್ರತಿಯೊಂದು ಸಮುದಾಯಕ್ಕೂ ತಮ್ಮ ಆರಂಭಿಕ ಹಂತದಲ್ಲಿ ಚಂದಾದ ಅವಶ್ಯಕತೆಯಿರುತ್ತದೆ ಎಂಬುದು ದೈವಿಕ ಸಂಪ್ರದಾಯವಾಗಿದೆ. ನಮ್ಮ ನಬಿ(ಸ) ಕೂಡ ಅನೇಕ ಬಾರಿ ಸಹಾಬಿಯರಿಂದ ಚಂದಾಗಳನ್ನು ಆವಶ್ಯಪಟ್ಟಾಗ ಹಝ್ರತ್ ಅಬೂಬಕರ್(ರ) ಎಲ್ಲರಿಗಿಂತ ಮುಂದಿದ್ದರು. ಆದ್ದರಿಂದ ಧೈರ್ಯದಿಂದ ಸಹಾಯ ಮಾಡಲು ತಡಮಾಡದೇ ಮುಂದೆ ಬರಬೇಕು." ಆ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಲಂಗರ್‌ಖಾನಾಕ್ಕಾಗಿ ಮನವಿ ಮಾಡಿದ್ದರು, ಏಕೆಂದರೆ ಇದು ಕೂಡ ಒಂದು ಉದ್ದೇಶವಾಗಿತ್ತು. ಇಸ್ಲಾಮಿನ ಬಗ್ಗೆ ಮಾಹಿತಿ ಪಡೆಯಲು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ವಾದವನ್ನು ಕೇಳಲು ಅತಿಥಿಗಳು ಬರುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಸಾರ ಈ ಲಂಗರ್‌ಖಾನಾಕ್ಕಾಗಿ ಸಹಾಯ ಮಾಡಬೇಕು. ಸಾಧ್ಯವಾದರೆ, ನಾವು ಲಂಗರ್‌ಖಾನಾದ ಭಾರೀ ಜವಾಬ್ದಾರಿಯಿಂದ ಮುಕ್ತರಾಗಿ ನಮ್ಮ ಕೆಲಸದಲ್ಲಿ ನೆಮ್ಮದಿಯಿಂದ ತೊಡಗಿಕೊಳ್ಳಲಿಕ್ಕಾಗಿ ಒಂದು ವ್ಯವಸ್ಥೆ ಇರಬೇಕು ಎಂದು ನಾನು ಬಯಸುತ್ತೇನೆ." ಅಂದರೆ, ಇಸ್ಲಾಮಿನ ಪ್ರಚಾರದ ಅವರ ಕಾರ್ಯ, ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಜಗತ್ತಿಗೆ ತಲುಪಿಸುವ ಕಾರ್ಯದತ್ತ ಅವರ ಗಮನ ಇನ್ನಷ್ಟು ಹೆಚ್ಚಾಗಬೇಕು ಮತ್ತು ಈ ಉದ್ದೇಶಕ್ಕಾಗಿ ಬರುವ ಅತಿಥಿಗಳಿಗಾಗಿ ಒಂದು ಪ್ರತ್ಯೇಕ ವ್ಯವಸ್ಥೆ ಇರಬೇಕು ಎಂದು ಅವರು ಬಯಸಿದ್ದರು. ಹೇಗಿದ್ದರೂ, ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನೆಮ್ಮದಿಯಿಂದ ನಾವು ನಮ್ಮ ಕೆಲಸದಲ್ಲಿ ನಿರತರಾಗಲು ಮತ್ತು ನಮ್ಮ ಸಮಯ ವ್ಯರ್ಥವಾಗದಿರಲಿಕ್ಕಾಗಿ ನಮ್ಮ ಸಹಾಯಕ್ಕೆ ಬರುವವರು ಕೊನೆಗೆ ದೇವನ ಸಹಾಯವನ್ನು ಪಡೆಯುವರು."

"ಈ ಸಹಾಯ ಮತ್ತು ಶ್ರಮದಲ್ಲಿ ಮೊದಲ ಸ್ಥಾನದಲ್ಲಿ ನಮ್ಮ ಪರಿಪೂರ್ಣ ನಿಷ್ಠಾವಂತ ಮೌಲ್ವಿ ಹಕೀಮ್ ನೂರುದ್ದೀನ್ ಸಾಹಿಬ್(ರ) ಇದ್ದಾರೆ ಎಂಬುದನ್ನು ಬರೆಯದೆ ಇರಲು ಸಾಧ್ಯವಿಲ್ಲ. ಅವರು ಕೇವಲ ಆರ್ಥಿಕ ಸಹಾಯ ಮಾಡಿದ್ದಲ್ಲದೆ, ಲೌಕಿಕವಾದ ಎಲ್ಲ ಸಂಬಂಧಗಳನ್ನು ಕಡಿದುಕೊಂಡು, ಫಕೀರರ ಉಡುಪನ್ನು ಧರಿಸಿ, ತಮ್ಮ ತಾಯ್ನಾಡಿನಿಂದ ವಲಸೆ ಬಂದು ಕೊನೆಯ ವರೆಗೂ ಖಾದಿಯಾನಿನಲ್ಲಿ ನೆಲೆಸಿದರು ಮತ್ತು ಸದಾ ಹಾಜರಿರುವರು. ಇಸ್ಲಾಮಿನ ಸಂದೇಶವನ್ನು ತಲುಪಿಸಲು ನಾನು ಬಯಸಿದರೆ ಅವರನ್ನು ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ಕಳುಹಿಸಬಲ್ಲೆ. ನನ್ನ ಪ್ರಕಾರ ಇವರೇ ಬರಾಹೀನೆ ಅಹ್ಮದಿಯಾದಲ್ಲಿ "ಅಸ್‌ಹಾಬುಸ್ಸುಫ್ಫಾ ವಮಾ ಅದ್‌ರಾಕ ಮಾ ಅಸ್‌ಹಾಬುಸ್ಸುಫ್ಫಾ" ಎಂದು ದಿವ್ಯವಾಣಿಯಲ್ಲಿ ಉಲ್ಲೇಖಿಸಲಾದ ಜನರಾಗಿದ್ದಾರೆ. ಅಂದರೆ, ಸುಫ್ಫಾದವರು, ಸುಫ್ಫಾದವರು ಯಾರೆಂದು ನಿನಗೇನು ಗೊತ್ತು?"

"ಗೌರವಾನ್ವಿತರಾದ ಇವರ ನಂತರ ಎರಡನೇ ಸ್ಥಾನದಲ್ಲಿ ಮೌಲ್ವಿ ಅಬ್ದುಲ್‌ಕರೀಮ್ ಸಾಹಿಬ್ ಸಿಯಾಲ್ಕೋಟಿ ಇದ್ದಾರೆ. ಅವರಿಗೆ ಅಲ್ಲಾಹನು ಮೊದಲೇ ಲೌಕಿಕ ಹುದ್ದೆಗಳು ಮತ್ತು ಸ್ಥಾನಮಾನದ ಆಸೆಯನ್ನು ನೀಡಿರಲಿಲ್ಲ, ಆದರೆ ಈಗಂತೂ ಅವರು ಲೌಕಿಕ ಆಲೋಚನೆಗಳನ್ನು ಸಂಪೂರ್ಣವಾಗಿ ತೊರೆದು ಈ ಬಾಗಿಲಿನಲ್ಲಿ ಕುಳಿತಿದ್ದಾರೆ ಮತ್ತು ಹಗಲು–ರಾತ್ರಿ ತಮ್ಮ ಸಾಮರ್ಥ್ಯಕ್ಕೂ ಮೀರಿ ದೀನಿನ ಸೇವೆ ಮಾಡುತ್ತಿದ್ದಾರೆ; ಜುಮುಅ ನಮಾಝ್‌ನಲ್ಲಿ ಪವಿತ್ರ ಖುರ್‌ಆನಿನ ಅನೇಕ ಸತ್ಯಗಳು ಮತ್ತು ಜ್ಞಾನಗಳನ್ನು ವಿವರಿಸುತ್ತಾರೆ ಹಾಗೂ ಮುಸ್ಲಿಮರಿಗೆ ಪ್ರಯೋಜನವನ್ನು ತಲುಪಿಸುತ್ತಿದ್ದಾರೆ. ಮೌಲ್ವಿ ಹಕೀಮ್ ನೂರುದ್ದೀನ್ ಸಾಹಿಬ್‌ರ ಊರಿನವರಾದ ಹಕೀಮ್ ಫಝ್ಲುದೀನ್ ಸಹ ಇದ್ದಾರೆ, ಅವರು ಕೂಡ ಹೆಚ್ಚಾಗಿ ಇಲ್ಲೇ ವಾಸಿಸುತ್ತಾ ಸೇವೆಗಳಲ್ಲಿ ನಿರತರಾಗಿದ್ದಾರೆ." ನಮ್ಮ ನಿಷ್ಠಾವಂತ ಸ್ನೇಹಿತ ಡಾಕ್ಟರ್ ಬೋಡೆ ಖಾನ್ ಸಾಹಿಬ್ ನಿಧನರಾದರು, ಆದರೆ ಖುಷಿಯ ವಿಚಾರವೇನೆಂದರೆ, ನಾಲ್ವರು ನಿಷ್ಠಾವಂತ ವೈದ್ಯರು, ಅಂದರೆ ಖಲೀಫಾ ರಶೀದುದ್ದೀನ್ ಸಾಹಿಬ್ ಲಾಹೋರಿ, ಡಾಕ್ಟರ್ ಮಿರ್ಝಾ ಯಅ್‌ಕೂಬ್ ಬೇಗ್ ಸಾಹಿಬ್ ಕಲಾನೌರಿ, ಡಾಕ್ಟರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್ ಮತ್ತು ಡಾಕ್ಟರ್ ಅಬ್ದುಲ್ ಹಕೀಮ್ ಖಾನ್ ಸಾಹಿಬ್ ನಮ್ಮ ಜಮಾಅತ್‌ನಲ್ಲಿ ಇದ್ದಾರೆ.

ಅದೇ ರೀತಿ, ಅತ್ಯಂತ ನಿಷ್ಠಾವಂತಿಕೆಯಿಂದ ಇಲ್ಲಿಯೇ ವಾಸಿಸಲು ನಿರ್ಧರಿಸಿದ ಕೆಲವರಿದ್ದಾರೆ. ಅವರಲ್ಲಿ ಮಿರ್ಝಾ ಖುದಾ ಬಕ್ಷ್ ಸಾಹಿಬ್ ಮತ್ತು ಸಾಹಿಬ್‌ಝಾದಾ ಸಿರಾಜುಲ್ ಹಕ್ ಸಾಹಿಬ್ ತಮ್ಮ ತಾಯ್ನಾಡಿನಿಂದ ವಲಸೆ ಬಂದು ಖಾದಿಯಾನಿಗೆ ಬಂದಿದ್ದಾರೆ, ಇತರ ಹಲವರೂ ಇದ್ದಾರೆ. ಈ ಎಲ್ಲರ ವಲಸೆಯು ಅವರಿಗೆ ಅನುಗ್ರಹೀತವಾಗಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಮೌಲ್ವಿ ಹಕೀಮ್ ನೂರುದ್ದೀನ್ ಸಾಹಿಬ್ ಅಂತೂ ನಮ್ಮ ಜಮಾಅತ್‌ನ ಒಂದು ಬೆಳಗುವ ದೀಪವಾಗಿದ್ದಾರೆ, ಪ್ರತಿದಿನ ಪವಿತ್ರ ಖುರ್‌ಆನ್ ಮತ್ತು ಹದೀಸ್‌ನ ಪಾಠವನ್ನು ನೀಡುತ್ತಾರೆ. ಪವಿತ್ರ ಖುರ್‌ಆನಿನ ಸತ್ಯಗಳು ಮತ್ತು ಜ್ಞಾನವನ್ನು ಎಷ್ಟೊಂದು ವಿವರಿಸುತ್ತಾರೆಂದರೆ, ಇದು ದೇವನ ಸಹಾಯವಲ್ಲದಿದ್ದರೆ ಬೇರೇನು? ಹಝ್ರತ್ ಮೌಲ್ವಿ ಸಾಹಿಬ್ ಮತ್ತು ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಇಬ್ಬರೂ ತಮ್ಮ ಜೀವನವನ್ನು ಖಾದಿಯಾನಿನಲ್ಲೇ ಕಳೆಯಬೇಕೆಂದು ಮತ್ತು ಖಾದಿಯಾನಿನಲ್ಲೇ ಮರಣಹೊಂದಬೇಕೆಂದು ಹೃತ್ಪೂರ್ವಕವಾಗಿ ಬಯಸುತ್ತಾರೆ. ನಮ್ಮ ಜಮಾಅತ್‌ನಲ್ಲಿ ವ್ಯಾಪಾರ–ವಹಿವಾಟಿನಲ್ಲಿ ತೊಡಗಿರುವ ನಿಷ್ಠಾವಂತರ ಗುಂಪಿನಲ್ಲಿ, ಸೇಠ್ ಅಬ್ದುರ್ರಹ್ಮಾನ್ ಸಾಹಿಬ್ ಪ್ರಶಂಸೆಗೆ ಅರ್ಹರಾಗಿದ್ದಾರೆ ಮತ್ತು ಅವರು ಪುಣ್ಯ ಸಂಪಾದಿಸುವ ಅನೇಕ ಅವಕಾಶಗಳನ್ನು ಪಡೆದಿದ್ದಾರೆ. ಅವರು ಎಷ್ಟೊಂದು ಉತ್ಸಾಹಭರಿತ ಪ್ರೇಮಿಯಾಗಿದ್ದಾರೆಂದರೆ, ಅಷ್ಟು ದೂರವಿದ್ದರೂ ಹತ್ತಿರವಾಗಿದ್ದಾರೆ ಮತ್ತು ನಮ್ಮ ಜಮಾಅತ್‌ನ ಲಂಗರ್‌ಖಾನಾಗೆ ಬಹಳಷ್ಟು ಸಹಾಯ ಮಾಡುತ್ತಾರೆ. ಅವರ ಪ್ರಾಮಾಣಿಕತೆ ಮತ್ತು ನಿರಂತರ ಸೇವೆಗಳು, ಪ್ರೀತಿ, ನಂಬಿಕೆ ಮತ್ತು ವಿಶ್ವಾಸದಿಂದ ತುಂಬಿವೆ ಮತ್ತು ಇಡೀ ಜಮಾಅತ್‌ನ ಸ್ಥಿತಿವಂತ ಜನರಿಗೆ ಒಂದು ಮಾದರಿಯಾಗಿವೆ, ಏಕೆಂದರೆ ಅಂತಹವರು ಕೆಲವರೇ ಇದ್ದಾರೆ. 'ಸೇಠ್ ಸಾಹಿಬ್ ತಿಂಗಳಿಗೆ ನೂರು ರೂಪಾಯಿಗಳನ್ನು ತಪ್ಪದೆ ಕಳುಹಿಸುತ್ತಾರೆ ಮತ್ತು ಹಲವು ಬಾರಿ ಐನೂರು ರೂಪಾಯಿಗಳ ವರೆಗೂ ಕೇವಲ ತಮ್ಮ ಪ್ರೀತಿ ಮತ್ತು ನಿಷ್ಠೆಯ ಉತ್ಸಾಹದಿಂದ ಕಳುಹಿಸುತ್ತಲೇ ಬಂದಿದ್ದಾರೆ'. ಧರ್ಮದ ಪ್ರಚಾರಕ್ಕಾಗಿ ಮತ್ತು ಅತಿಥಿಗಳ ಆರೈಕೆಗಾಗಿ ಅವರು ಕಳುಹಿಸುತ್ತಿದ್ದ ಈ ಮೊತ್ತವು ಆ ಕಾಲದಲ್ಲಿ ಬಹಳ ದೊಡ್ಡ ಮೊತ್ತವಾಗಿತ್ತು, ಮತ್ತು ಮಾಸಿಕ ನೂರು ರೂಪಾಯಿಗಳ ಸಹಾಯವು ಇದಕ್ಕಿಂತ ಭಿನ್ನವಾಗಿತ್ತು.

ಅದೇ ರೀತಿ, ಲಾಹೋರ್‌ನ ವ್ಯಾಪಾರಿ ಶೇಖ್ ರಹಮತುಲ್ಲಾ ಸಾಹಿಬ್. ಲಾಹೋರ್‌ನ ಸೇಠ್ ಸಾಹಿಬ್ ಆಗಿದ್ದಾರೆ. ಶೇಖ್ ಸಾಹಿಬ್ ಹೃದಯಪೂರ್ವಕವಾಗಿ ನಮ್ಮ ಪ್ರೇಮಿಯಾಗಿದ್ದಾರೆ ಮತ್ತು ನನ್ನ ಮೇಲೆ ಹೂಡಲಾಗಿದ್ದ ಕ್ರಿಮಿನಲ್ ಮೊಕದ್ದಮೆಗಳಲ್ಲಿ ತಮ್ಮ ಬಹಳಷ್ಟು ಹಣದಿಂದ ನನಗೆ ಸಹಾಯ ಮಾಡಿದರು ಮತ್ತು ಪ್ರೀತಿಯ ಉತ್ಸಾಹದಿಂದ ಹುಚ್ಚನಂತೆ ಅಲೆದಾಡುತ್ತಾ ನನ್ನ ಬಗ್ಗೆ ಸಹಾನುಭೂತಿ ತೋರಿದರು ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಈಗ ಅವರು ನಮ್ಮ ಕೆಲಸಕ್ಕಾಗಿ ನೂರಾರು ರೂಪಾಯಿಗಳನ್ನು ಖರ್ಚು ಮಾಡಿ ಲಂಡನ್‌ನಲ್ಲಿ ಕುಳಿತಿದ್ದಾರೆ, ಅಲ್ಲಾಹನು ಅವರನ್ನು ಶೀಘ್ರವಾಗಿ ಕ್ಷೇಮವಾಗಿ ಹಿಂದಿರುಗಿಸಲಿ. ಇದು ಅವರು ಲಂಡನ್‌ಗೆ ಹೋಗಿದ್ದ ಸಮಯದ ಮಾತಾಗಿದೆ. ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ)ರ ಬಗ್ಗೆಯೂ ಪ್ರಸ್ತಾಪಿಸುವುದು ಯೋಗ್ಯವಾಗಿದೆ, ಅವರು ಪ್ರೀತಿ ಮತ್ತು ನಿಷ್ಠೆಯಲ್ಲಿ ಬಹಳಷ್ಟು ಪ್ರಗತಿ ಹೊಂದಿದ್ದಾರೆ ಮತ್ತು ಅವರು ಶೀಘ್ರದಲ್ಲೇ ಪ್ರೀತಿ ಮತ್ತು ನಿಷ್ಠೆಯ ಉನ್ನತ ಸ್ಥಾನವನ್ನು ತಲುಪುತ್ತಾರೆ ಎಂದು ಸ್ಪಷ್ಟವಾದ ಒಳನೋಟ ಸಾಕ್ಷಿಯಾಗಿದೆ. ಅವರು ಸದಾ ಸಾಧ್ಯವಾದಷ್ಟು ಆರ್ಥಿಕ ಸಹಾಯದಲ್ಲೂ ನೆರವಾಗಿದ್ದಾರೆ ಮತ್ತು ಭವಿಷ್ಯದಲ್ಲೂ ಇದಕ್ಕಿಂತ ಹೆಚ್ಚಾಗಿ ದೇವನ ಹಾದಿಯಲ್ಲಿ ತಮ್ಮ ಸಂಪತ್ತನ್ನು ತ್ಯಾಗ ಮಾಡುತ್ತಾರೆ ಎಂಬ ವಿಶ್ವಾಸವಿದೆ. ಅಲ್ಲಾಹನು ಪ್ರತಿಯೊಬ್ಬನ ಕಾರ್ಯಗಳನ್ನೂ ನೋಡುತ್ತಾನೆ ಮತ್ತು ನನಗೆ ಹೇಳುವ ಹಾಗೂ

ಬರೆಯುವ ಅಗತ್ಯವಿಲ್ಲ. ಅದೇ ರೀತಿ, ಅನೇಕ ನಿಷ್ಠಾವಂತರಿದ್ದಾರೆ, ಆದರೆ ಎಲ್ಲರ ಹೆಸರನ್ನು ಬರೆದರೆ ಇದು ಬಹಳ ದೊಡ್ಡ ಲೇಖನವಾಗುವುದು. ನಾನು ಅವರೆಲ್ಲರಿಗಾಗಿ ಪ್ರಾರ್ಥಿಸುತ್ತೇನೆ, ದೇವನು ಅವರಿಗೆ ಇಹಲೋಕ ಮತ್ತು ಪರಲೋಕದ ಸಂತೋಷವನ್ನು ಕರುಣಿಸಲಿ. ಅವರು ದೇವನಿಗಾಗಿ ಏನು ಮಾಡುತ್ತಿದ್ದಾರೋ ಅಥವಾ ಭವಿಷ್ಯದಲ್ಲಿ ಏನು ಮಾಡುತ್ತಾರೋ, ಅದೆಲ್ಲವೂ ದೇವನ ಕಣ್ಣ ಮುಂದಿದೆ. (ಮಜ್‌ಮುಅ ಇಶ್ತಿಹಾರಾತ್, ಸಂಪುಟ–2, ಪುಟ–542–546, 2019)

ಇವು ಹಝ್ರತ್ ಪೈಗಂಬರ್(ಸ) ಅವರ ಸತ್ಯವಂತ ದಾಸರಾದ ಮಸೀಹ್ ಮೌಊದ್(ಅ) ತಮ್ಮ ಸಹಾಯಕರ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸಿದ ವಿಧಾನಗಳಾಗಿದ್ದವು. ಹಝ್ರತ್ ಮಸೀಹ್ ಮೌಊದ್(ಅ) ಸಣ್ಣಪುಟ್ಟ ಸೇವೆ ಮಾಡುವವರಿಗೂ ಕೃತಜ್ಞತೆ ಅರ್ಪಿಸುತ್ತಿದ್ದರು. ಅದರಂತೆ ಹಝ್ರತ್ ಮುನ್ಷಿ ಮೆಹಬೂಬ್ ಆಲಂ ಸಾಹಿಬ್ ವಿವರಿಸುತ್ತಾರೆ: ನಮ್ಮ ಬೀದಿಯಲ್ಲಿ (ಖ್ವಾಜಾ ಕಮಾಲುದ್ದೀನ್ ಸಾಹಿಬ್‌ರ ಬೀದಿಯಲ್ಲಿ) ಒಬ್ಬ ಅಹ್ಮದಿಯೇತರನಿದ್ದ, ಅವನು ಫಾಲೂದಾ ಮಾರುತ್ತಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ಖ್ವಾಜಾ ಕಮಾಲುದ್ದೀನ್ ಸಾಹಿಬ್‌ರ ಮನೆಗೆ ಹೋದಾಗ, ಆ ಫಾಲೂದಾ ಮಾಡುವವನು ನನ್ನೊಡನೆ ಹೀಗೆ ಹೇಳಿದನು: ಹಝ್ರತ್ ಮಸೀಹ್ ಮೌಊದ್(ಅ)ರಿಂದ ಅನುಮತಿ ಪಡೆದುಕೊಟ್ಟರೆ, ನಾನು ಅವರಿಗೆ ಫಾಲೂದಾ ನೀಡಲು ಬಯಸುತ್ತೇನೆ. ಅದರಂತೆ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಯಲ್ಲಿ ಹೇಳಿದೆನು, ಹಝ್ರತ್ ಮಸೀಹ್ ಮೌಊದ್(ಅ) ಒಪ್ಪಿಕೊಂಡರು. ಆದ್ದರಿಂದ ಅವನು ಎಲ್ಲ ಸಾಮಗ್ರಿಗಳನ್ನು ತೆಗೆದುಕೊಂಡು ಅಲ್ಲಿಗೆ ಬಂದನು. ಹಝ್ರತ್ ಮಸೀಹ್ ಮೌಊದ್(ಅ) ಖ್ವಾಜಾ ಕಮಾಲುದ್ದೀನ್‌ರ ಅಂಗಳದಲ್ಲಿ ಮಂಚದ ಮೇಲೆ ಕುಳಿತಿದ್ದರು. ನಾನು ಅವನನ್ನು ಪರಿಚಯಿಸಿದೆ, ಅವನೊಡನೆ ಹಝ್ರತ್ ಮಸೀಹ್ ಮೌಊದ್(ಅ) ಫಾಲೂದಾ ಮಾಡಲು ಹೇಳಿದರು. ಅದರಂತೆ ಅವನು ಹೊರಗೆ ಕುಳಿತನು ಮತ್ತು ಒಂದು ಬಟ್ಟಲು ಫಾಲೂದಾ ಮಾಡಿ ಅವರಿಗೆ ನೀಡಿದನು. ಹಝ್ರತ್ ಮಸೀಹ್ ಮೌಊದ್(ಅ) ಅದನ್ನು ಸೇವಿಸಿದರು ಮತ್ತು 'ಬಹಳ ಚೆನ್ನಾಗಿದೆ' ಎಂದು ಪ್ರಶಂಸಿಸಿದರು. ಆಮೇಲೆ ಅವನು ಒಳಗೆ ಹತ್ತು ಇಪ್ಪತ್ತು ಬಟ್ಟಲುಗಳನ್ನು ಕಳುಹಿಸಿದನು ಮತ್ತು ಎಲ್ಲರಿಗೂ ನೀಡಿದನು. ಆಗ ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಕೊಡಲು ಎರಡು ರೂಪಾಯಿಗಳನ್ನು ತೆಗೆದು ನನಗೆ ನೀಡಿದರು. ಆ ಕಾಲದಲ್ಲಿ ಅದರ ಬೆಲೆ ಬಹಳಷ್ಟಿತ್ತು. ನಾನು ಆ ಎರಡು ರೂಪಾಯಿಗಳನ್ನು ತೆಗೆದುಕೊಂಡು ಅವನ ಬಳಿಗೆ ಹೋದೆ. ಅವನು ಅದನ್ನು ತೆಗೆದುಕೊಳ್ಳಲು ನಿರಾಕರಿಸಿದನು ಮತ್ತು ನನ್ನನ್ನು ಹಝ್ರತ್ ಸಾಹಿಬ್‌ರ ಸನ್ನಿಧಿಗೆ ಕರೆದುಕೊಂಡು ಹೋಗು ಎಂದು ಹೇಳಿದನು. ಅದರಂತೆ ನಾನು ಅವನನ್ನು ಹಝ್ರತ್ ಸಾಹಿಬ್‌ರ ಸನ್ನಿಧಿಗೆ ಕರೆದೊಯ್ದೆ. ಅವನು ಹಝ್ರತ್ ಮಸೀಹ್ ಮೌಊದ್(ಅ)ರ ಮುಂದೆ ಕೈಮುಗಿದು ಹೀಗೆ ಹೇಳಿದನು: 'ನನಗೆ ಎರಡು ರೂಪಾಯಿಗಳ ಅಗತ್ಯವಿಲ್ಲ. ನಾನು ಉಡುಗೊರೆಯಾಗಿ ಫಾಲೂದಾ ನೀಡಿದ್ದೆ.' ಅವನ ಒತ್ತಾಯದ ಮೇರೆಗೆ ಹಝ್ರತ್ ಸಾಹಿಬ್ ಆ ಹಣವನ್ನು ನೀಡಲಿಲ್ಲ, ಆದರೆ ಅವನಿಗಾಗಿ ಪ್ರಾರ್ಥಿಸಿದರು ಮತ್ತು ಜಝಾಕಮುಲ್ಲಾಹು ಅಹ್ಸನಲ್ ಜಝಾ ಎಂದು ಹೇಳಿದರು. ಅವರು ಹೇಳುತ್ತಾರೆ, ಆ ಹುಡುಗನಿಗಾಗಿ ಮಾಡಿದ ಪ್ರಾರ್ಥನೆಯಿಂದಾಗಿ, ಇಂದು ಅವನ ಮಕ್ಕಳು ಉನ್ನತ ಹುದ್ದೆಗಳಲ್ಲಿದ್ದಾರೆ.

(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–278–279)

ಹಝ್ರತ್ ಇಬ್ರಾಹೀಂ ಬಕಾಪುರಿ ಸಾಹಿಬ್(ರ) ವಿವರಿಸುತ್ತಾರೆ: ಒಮ್ಮೆ ಸಿಯಾಲ್ಕೋಟ್ ಜಮಾಅತ್‌ನ ಕೆಲವು ಸಹೋದರರು–ಅವರಲ್ಲಿ ದಿವಂಗತ ಹಝ್ರತ್ ಮೀರ್ ಹಾಮಿದ್ ಶಾಹ್ ಸಾಹಿಬ್, ದಿವಂಗತ ಚೌಧರಿ ನಸ್ರುಲ್ಲಾ ಖಾನ್ ಸಾಹಿಬ್ ಮತ್ತು ಈ ದಾಸನೂ ಸೇರಿದ್ದ–ಸ್ವಲ್ಪ ಹಣವನ್ನು ಉಡುಗೊರೆಯಾಗಿ ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಗೆ ತಂದರು. ಹಝ್ರತ್ ಮಸೀಹ್ ಮೌಊದ್(ಅ) ಹಣವನ್ನು ಕಟ್ಟಿದ್ದ ಕರವಸ್ತ್ರವನ್ನು ತೆಗೆದುಕೊಂಡು, ಮೊದಲು ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು, ನಂತರ ಜಝಾಕುಮುಲ್ಲಾಹ್ ಎಂದರು. ಇದರಿಂದ ನಮ್ಮ ಈಮಾನ್ ಮತ್ತಷ್ಟು ಹೆಚ್ಚಾಯಿತು ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ) ಮೊದಲು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು, ಅನಂತರ ನಮಗಾಗಿ ದುಆ ಮಾಡಿದರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–54)

ನಾನು ಈ ಮೊದಲೂ ಒಮ್ಮೆ ವಿವರಿಸಿದ್ದೇನೆ, 'ಮೊದಲು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿ, ನಂತರ ಮನುಷ್ಯರಿಗೆ ಕೃತಜ್ಞತೆ ಸಲ್ಲಿಸಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು. (ಹಯಾತೆ ಖುದ್ಸಿ, ಪುಟ–134)

ಝುಲ್ಫಿಕಾರ್ ಅಲಿ ಖಾನ್ ಗೌಹರ್ ಸಾಹಿಬ್ ಒಂದು ಘಟನೆಯನ್ನು ವಿವರಿಸುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಬೈತುದ್ದುಆದ ಕೆಳಗಿನ ಕೊಠಡಿಯಿಂದ ಬೆಳಿಗ್ಗೆ ಹತ್ತು ಗಂಟೆ ಸುಮಾರಿಗೆ ಹೊರಬಂದರು. ಬೈತುದ್ದುಆದ ಪಕ್ಕದಲ್ಲೇ ಒಂದು ಕೊಠಡಿಯಿತ್ತು, ಅದರ ಒಂದು ಬಾಗಿಲು ಅಂಗಳಕ್ಕೂ ಮತ್ತು ಇನ್ನೊಂದು ಬಾಗಿಲು ನನ್ನ ಕೊಠಡಿಗೂ ಇತ್ತು. ಗಡ್ಡ ಮತ್ತು ತಲೆಕೂದಲಿಗೆ ಬಣ್ಣ ಹಚ್ಚಿದ್ದರು, ಮೆಹಂದಿ ಹಚ್ಚಿದ್ದರು. ಆ ಕಾಲದಲ್ಲಿ ಮೆಹಂದಿ ಹಚ್ಚುತ್ತಿದ್ದರು, ಹಝ್ರತ್ ಮಸೀಹ್ ಮೌಊದ್(ಅ) ಸಹ ಹಚ್ಚುತ್ತಿದ್ದರು. ಅವರು ಹೊರಗೆ ಬಂದರು. ಹತ್ತಿರದಲ್ಲೇ ವಾಸಿಸುತ್ತಿದ್ದ ಕಾರಣ ಆ ಕೊಠಡಿಯಲ್ಲಿ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನ–ನಿರ್ಗಮನಕ್ಕಾಗಿ ಕಾಯುತ್ತಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಬೈತುದ್ದುಆದಿಂದ ಹೊರಬಂದು ಮಂಚದ ಮೇಲೆ ಕುಳಿತುಕೊಂಡರು. 'ನಮಗಾಗಿ ಸ್ವಲ್ಪ ಊಟ ತರಲು ಮೌಲ್ವಿ ಸಯ್ಯದ್ ಸರ್ವರ್ ಶಾಹ್ ಸಾಹಿಬ್‌ರೊಡನೆ ಹೇಳಿರಿ ಎಂದು ನನ್ನೊಡನೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಆ ಕಾಲದಲ್ಲಿ ಅತಿಥಿಗಳು ಬರುವಾಗ ಊಟ ಒಟ್ಟಿಗೆ ತಯಾರಾಗುತ್ತಿತ್ತು ಮತ್ತು ಸರ್ವರ್ ಶಾಹ್ ಸಾಹಿಬ್‌ರಿಗೆ ಆ ಜವಾಬ್ದಾರಿಯಿತ್ತು. ಅವರು ಹೇಳುತ್ತಾರೆ, ನಾನು ಹೋಗಿ ಸಂದೇಶ ತಲುಪಿಸಿದೆ, ಆದರೆ ಅದೇ ಸಮಯಕ್ಕೆ ನಾವೆಲ್ಲರೂ ಊಟ ಮುಗಿಸಿದ್ದೆವು. ಕೇವಲ ಹತ್ತು ನಿಮಿಷಗಳು ಕಳೆದಿದ್ದವಷ್ಟೇ, ಆದರೆ ಸ್ವಲ್ಪವೂ ಊಟ ಉಳಿದಿರಲಿಲ್ಲ. ಹತ್ತು ನಿಮಿಷಗಳಲ್ಲೇ ಎಲ್ಲವೂ ಮುಗಿದುಹೋಗಿತ್ತು. ಊಟ ಇರಲಿಲ್ಲ, ಜನರು ಊಟ ಮಾಡಿದ್ದರು. ಅವರು ಹೇಳುತ್ತಾರೆ, ನಾನು ಸಂದೇಶ ತಲುಪಿಸಿದಾಗ ಮೌಲ್ವಿ ಸರ್ವರ್ ಶಾಹ್ ಸಾಹಿಬ್‌ರ ಮುಖ ಬಿಳಿಚಿಕೊಂಡಿತು. ಏನೇ ಆಗಲಿ, ಅವರು ಒಂದು ಸಣ್ಣ ಬಟ್ಟಲಿನಲ್ಲಿ ಹಾಲು, ಮೂರು ರಸ್ಕ್ ಮತ್ತು ಸಕ್ಕರೆ ತೆಗೆದುಕೊಂಡು ಬಂದರು. ಅವರ ಮುಖ ಬಾಡಿತ್ತು, ಹಝ್ರತ್ ಮಸೀಹ್ ಮೌಊದ್(ಅ) ಊಟ ಕೇಳಿದ್ದಾರೆ ಆದರೆ ಊಟವಿಲ್ಲವಲ್ಲ ಎಂದು ಅವರು ಬಹಳ ದುಃಖಿತರಾಗಿದ್ದರು. ಅವರು ಹೇಳಿದರು: 'ಹುಝೂರ್, ಈ ಸಮಯದಲ್ಲಿ ಬೇರೇನೂ ಉಳಿದಿಲ್ಲ.' ಝುಲ್ಫಿಕಾರ್ ಅಲಿ ಖಾನ್ ಸಾಹಿಬ್ ಹೇಳುತ್ತಾರೆ, 'ಇದೇನು ವ್ಯವಸ್ಥೆ, ಹಝ್ರತ್ ಮಸೀಹ್ ಮೌಊದ್(ಅ)ರಿಗಾಗಿ ಊಟವನ್ನು ಇರಿಸಿಲ್ಲ ಎಂಬುದನ್ನು ಕೇಳಿ ನನಗೂ ಬಹಳ ಆಶ್ಚರ್ಯವಾಯಿತು.' ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ಕೃತಜ್ಞತೆಯಿಂದ, ಅದು ಅವರ ಮುಖದಲ್ಲಿ ಕಾಣಿಸುತ್ತಿತ್ತು. ಅದು ಕೇವಲ ಬಾಹ್ಯವಾಗಿರಲಿಲ್ಲ, ಕೃತಕವಾಗಿರಲಿಲ್ಲ, ಬದಲಾಗಿ ಕೃತಜ್ಞತೆಯ ಭಾವನೆಯಾಗಿತ್ತು ಮತ್ತು ಅದು ಅವರ ಮುಖದಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಆ ಎರಡು ರಸ್ಕ್‌ಗಳನ್ನು ತೆಗೆದು ಸಕ್ಕರೆ ಬೆರೆಸಿ ತಿಂದು ನೀರು ಕುಡಿದರು. ಅವರು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ತಾಳ್ಮೆ, ಕೃತಜ್ಞತೆ ಮತ್ತು ಸ್ಥಾನಮಾನವು ಜಗತ್ತಿಗೆ ತಿಳಿಯಲಿ ಎಂದೇ ಅಲ್ಲಾಹನು ಈ ಮರೆವನ್ನು ಉಂಟುಮಾಡಿದ್ದನು ಎಂದು ಆ ಸಮಯದಲ್ಲಿ ನನಗೆ ಅನ್ನಿಸಿತು.

(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–3, ಪುಟ–54)

ಸಹಾಬಿಯರು ಸಣ್ಣಪುಟ್ಟ ವಿಷಯಗಳನ್ನೂ ಗಮನಿಸುತ್ತಿದ್ದರು.

7 ಆಗಸ್ಟ್ 1900ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ನವಾಬ್ ಮುಹಮ್ಮದ್ ಅಲಿ ಸಾಹಿಬ್(ರ)ರಿಗೆ ಕೃತಜ್ಞತೆಯ ಪತ್ರವನ್ನು ಬರೆಯುತ್ತಾ ಹೀಗೆ ಹೇಳಿದರು (ಅವರು ಬಟ್ಟೆಯ ಉಡುಗೊರೆಯೊಂದನ್ನು ಕಳುಹಿಸಿದ್ದರು): "ನೀವು ಅತ್ಯಂತ ಪ್ರೀತಿ ಮತ್ತು ನಿಷ್ಠೆಯಿಂದ ಕಳುಹಿಸಿದ ಅತ್ಯಂತ ಸುಂದರವಾದ ಮತ್ತು ಅತ್ಯುತ್ತಮವಾದ ಬಟ್ಟೆಯ ಉಡುಗೊರೆ ನನಗೆ ತಲುಪಿದೆ. ನಾನು ಅದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಪ್ರತಿಯೊಂದು ಬಟ್ಟೆಯನ್ನೂ ನೋಡಿದಾಗ, ನೀವು ಅದನ್ನು ಎಷ್ಟೊಂದು ಶ್ರಮ ಮತ್ತು ಪ್ರೀತಿಯಿಂದ ಸಿದ್ಧಪಡಿಸಿದ್ದೀರಿ ಎಂಬುದು ತಿಳಿಯುತ್ತದೆ. ಬಟ್ಟೆಯ ಪ್ರತಿಯಾಗಿ ಅಲ್ಲಾಹನು ತನ್ನ ಅಪಾರ ಕೃಪೆ ಹಾಗೂ ಅನುಗ್ರಹವನ್ನು ದಯಪಾಲಿಸಲಿ ಮತ್ತು ತಖ್ವಿದ ಉಡುಪಿನೊಂದಿಗೆ ಸಂಪೂರ್ಣವಾಗಿ ದೇವಮಿತ್ರರ ಮತ್ತು ಸಜ್ಜನರ ಬಣ್ಣದಿಂದ ಅನುಗ್ರಹೀತಗೊಳಿಸಲಿ."

(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–2, ಪುಟ–686–687)

ಈಗ ನೋಡಿ, ಬಾಹ್ಯ ಉಡುಪನ್ನು ನೀಡಿದಾಗ, ಕೃತಜ್ಞತೆ ಸಲ್ಲಿಸುವುದರ ಜೊತೆಗೆ, "ಅಲ್ಲಾಹನು ತಖ್ವಾದ ಉಡುಪಿನೊಂದಿಗೆ ಸಂಪೂರ್ಣವಾಗಿ ನಿಮ್ಮನ್ನು ಸಜ್ಜನರ ಬಣ್ಣದಿಂದ ಅನುಗ್ರಹೀತಗೊಳಿಸಲಿ" ಎಂದು ಪ್ರಾರ್ಥಿಸಿದರು.

ಒಂದು ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮುನ್ಷಿ ಅಹ್ಮದ್ ಜಾನ್ ಸಾಹಿಬ್‌ರಿಗೆ ಹೀಗೆ ಬರೆಯುತ್ತಾರೆ: "ಗೌರವಾನ್ವಿತ ಮುನ್ಷಿ ಅಹ್ಮದ್ ಜಾನ್ ಸಾಹಿಬ್, ಅಲ್ಲಾಹನು ನಿಮ್ಮನ್ನು ರಕ್ಷಿಸಲಿ ಮತ್ತು ಉತ್ತಮ ಪ್ರತಿಫಲವನ್ನು ಕರುಣಿಸಲಿ. ಅಸ್ಸಲಾಮು ಅಲೈಕುಮ್. ನಿಮ್ಮ ಪತ್ರ ತಲುಪಿತು. ನನಗಾಗಿ, ತನ್ನ ಅಸ್ತಿತ್ವದಿಂದ ನನಗೆ ಗೌರವ ಮತ್ತು ಹೆಮ್ಮೆಯನ್ನು ತರುವಂತಹ ಪ್ರೀತಿಯ ಸ್ನೇಹಿತರನ್ನು ಒದಗಿಸಿದ ಆ ಕರುಣಾಮಯಿ ದೇವನ ಉಪಕಾರಗಳಿಗೆ ಕೃತಜ್ಞತೆ ಸಲ್ಲಿಸಲು ಸಾಧ್ಯವಿಲ್ಲ. ದೇವನು ನಿಮ್ಮನ್ನು ಸಂತೋಷ ಮತ್ತು ನೆಮ್ಮದಿಯಿಂದಿರಿಸಲಿ ಮತ್ತು ನಿಮ್ಮ ಈ ಹೃತ್ಪೂರ್ವಕ ಕಾಳಜಿಗಳಿಗೆ ಪ್ರತಿಫಲವನ್ನು ಕರುಣಿಸಲಿ. ನಾನು ಅತ್ಯಂತ ನಗಣ್ಯ, ನಿಷ್ಪ್ರಯೋಜಕ ಮತ್ತು ಕೀಳಾಗಿದ್ದಾನೆ, ನನ್ನ ಯಾವುದೇ ಅರ್ಹತೆಯಿಲ್ಲದಿದ್ದರೂ ಈ ಕರುಣಾಮಯಿ ದೇವನು ನನ್ನ ಮೇಲೆ ಅಪಾರ ಕೃಪೆಗಳ ಮಳೆಯನ್ನು ಸುರಿಸುತ್ತಿರುವುದು ಅವನ ಕರುಣೆ ಮತ್ತು ಉಪಕಾರವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರ

ಸ್ಥಾನಮಾನವನ್ನು ನೋಡಿ ಮತ್ತು ಅವರ ವಿನಯವನ್ನು ನೋಡಿ. "ನಾನು ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡುತ್ತೇನೆ, ಆದರೆ ಅಲ್ಲಾಹನು ಉಪಕಾರದ ಮೇಲೆ ಉಪಕಾರ ಮಾಡುತ್ತಾನೆ. ನಾನು ಮಾಡುವ ಅನ್ಯಾಯಗಳ ಮೇಲೆ ಅನ್ಯಾಯಗಳನ್ನು ಅಲ್ಲಾಹನು ನೋಡುತ್ತಾನೆ, ಆದರೂ ಅನುಗ್ರಹಗಳ ಮೇಲೆ ಅನುಗ್ರಹಗಳನ್ನು ಮಾಡುತ್ತಾನೆ. ವಾಸ್ತವದಲ್ಲಿ ಅವನು ಅತ್ಯಂತ ದಯಾಮಯಿ ಮತ್ತು ಕರುಣಾಮಯಿಯಾಗಿದ್ದಾನೆ, ಅವನ ಕೃತಜ್ಞತೆ ಸಲ್ಲಿಸಲು ನಾನು ಎಂತಹ ನಾಲಿಗೆಯನ್ನು ತರಲಿ. ಈ ದಾಸನು ಶೂನ್ಯ, ಕೀಳು, ಶಕ್ತಿಹೀನ ಮತ್ತು ಸಂಪೂರ್ಣವಾಗಿ ಬಡವನಾಗಿದ್ದಾನೆ. ಅವನು ನನ್ನನ್ನು ಧೂಳಿನಿಂದ ಎತ್ತಿದನು ಮತ್ತು ನಾನು ಸಂಪೂರ್ಣವಾಗಿ ಅನರ್ಹನಾಗಿದ್ದರೂ ನನ್ನ ತಪ್ಪುಗಳನ್ನು ಮುಚ್ಚಿಹಾಕಿದನು. ನನ್ನ ದೌರ್ಬಲ್ಯವನ್ನು ನೋಡಿ ನನಗೆ ಶಕ್ತಿ ನೀಡಿದನು ಮತ್ತು ನನ್ನ ಅಜ್ಞಾನವನ್ನು ನೋಡಿ ನನಗೆ ಜ್ಞಾನವನ್ನು ಕರುಣಿಸಿದನು. ನನ್ನ ಮೇಲೆ ಎಷ್ಟೊಂದು ಕೃಪೆ ತೋರಿದನೆಂದರೆ, ನಾನು ಅವುಗಳನ್ನು ಲೆಕ್ಕಹಾಕಲು ಸಾಧ್ಯವಿಲ್ಲ, ಅವನ ಕೃಪೆಗಳ ಒಂದು ಅಭಿವ್ಯಕ್ತಿಯೆಂದರೆ, ನಿಮ್ಮಂತಹ ಹಿರಿಯ ಸಹೋದರರ ಹೃದಯಗಳಲ್ಲಿ ನನ್ನ ಮೇಲಿನ ಪ್ರೀತಿಯನ್ನು ಹಾಕಿದ್ದಾನೆ. ಆದ್ದರಿಂದ ಅವನ ಉಪಕಾರಗಳೇ ಈ ಪ್ರೀತಿಯನ್ನು ಹೆಚ್ಚಿಸುತ್ತವೆ ಮತ್ತು ಈ ಹಾದಿಯಲ್ಲಿರುವ ಎಲ್ಲರ ಮೇಲೂ ಅವನು ಕೃಪೆ ತೋರುತ್ತಾನೆ." ಈ ಪತ್ರವನ್ನು ಬರೆದ ನಂತರ, ಯಾವುದೋ ಹಿರಿಯರ ಈ ಕವಿತೆ ದಿವ್ಯವಾಣಿಯಾಗಿ ಅವತೀರ್ಣವಾಯಿತು.

"ಹರ್ಗಿಝ್ ನಮೀರದ್ ಆನ್ ಕಿ ದಿಲಶ್ ಝಿಂದಾ ಶುದ್ ಬ ಇಷ್ಕ್

ಸಬತ್ ಅಸ್ತ್ ಬರ್ ಜರೀದೇ ಆಲಮ್ ದವಾಮ್ ಮಾ"

(ಅಂದರೆ, ಪ್ರೀತಿಯಿಂದ ಯಾರ ಹೃದಯವು ಜೀವಂತವಾಗಿದೆಯೋ ಆ ವ್ಯಕ್ತಿ ಎಂದಿಗೂ ಸಾಯುವುದಿಲ್ಲ. ಲೋಕದ ಇತಿಹಾಸದ ಮೇಲೆ ನಮ್ಮ ಶಾಶ್ವತ ಜೀವನವು ಅಚ್ಚೊತ್ತಿದೆ). (ಮಕ್ತೂಬಾತೆ ಅಹ್ಮದ್, ಸಂಪುಟ–3, ಪುಟ–25–26)

ಅದೇ ರೀತಿ, ಹರ್ಝ್.ರತ್ ಖಾಝಿ ಝುಹೂರುದ್ದೀನ್ ಅಕ್ಮಲ್ ಸಾಹಿಬ್‌ರಿಗೆ ಬರೆದ ಪತ್ರವೊಂದರಲ್ಲಿ ಹೀಗೆ ಬರೆಯುತ್ತಾರೆ. "ನಿಮ್ಮ ಮೂರು ಪುಸ್ತಕಗಳು ಉಡುಗೊರೆಯಾಗಿ ನನಗೆ ತಲುಪಿವೆ. ಜಝಾಕಮುಲ್ಲಾಹು ಖೈರನ್. ನಾನು ಮೂರನ್ನೂ ಸ್ವಲ್ಪ ಸ್ವಲ್ಪ ನೋಡಿದ್ದೇನೆ. ಉತ್ತಮ ಮತ್ತು ತಾರ್ಕಿಕ ವಿವರಣೆಯಿದೆ. ದೇವನು ಉತ್ತಮ ಪ್ರತಿಫಲವನ್ನು ಕರುಣಿಸಲಿ. ಆಮೀನ್. ನೀವು ಪ್ರತಿ ಸೂಕ್ತ ಸಂದರ್ಭದಲ್ಲೂ ಇದರ ಪ್ರಚಾರ ಮಾಡಬೇಕು, ಇದರಿಂದ ದ್ವಿಗುಣ ಪುಣ್ಯ ಲಭಿಸುವುದು." (ಮಕ್ತೂಬಾತೆ ಅಹ್ಮದ್, ಸಂಪುಟ–5, ಪುಟ–245)

ಅದೇ ರೀತಿ ಒಂದು ಪತ್ರದಲ್ಲಿ ಹರ್ಝ್.ರತ್ ಡಾಕ್ಟರ್ ಖಲೀಫಾ ರಶೀದುದ್ದೀನ್ ಸಾಹಿಬ್(ರ)ರಿಗೆ ಹೀಗೆ ಬರೆದರು: "ನನ್ನ ಪ್ರೀತಿಯ ಸಹೋದರ ಡಾಕ್ಟರ್ ಖಲೀಫಾ ರಶೀದುದ್ದೀನ್ ಸಾಹಿಬ್, (ಹರ್ಝ್.ರತ್ ಖಲೀಫಾ ರಶೀದುದ್ದೀನ್ ಸಾಹಿಬ್ ಹರ್ಝ್.ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಮಾವ, ಹರ್ಝ್.ರತ್ ಉಮ್ಮೆ ನಾಸಿರ್‌ರ ತಂದೆಯಾಗಿದ್ದರು). "ನನ್ನ ಪ್ರೀತಿಯ ಸಹೋದರ ಡಾಕ್ಟರ್ ಖಲೀಫಾ ರಶೀದುದ್ದೀನ್ ಸಾಹಿಬ್, ಅಸ್ಸಲಾಮು ಅಲೈಕುಮ್. ನಿಮ್ಮ ಕಡೆಯಿಂದ ಕಳುಹಿಸಲಾದ 50 ರೂಪಾಯಿಗಳು ನನಗೆ ತಲುಪಿವೆ. ದುಷ್ಟ ಮತ್ಸರಿಗಳು ನ್ಯಾಯಾಲಯದಲ್ಲಿ ನನ್ನ ಮೇಲೆ ಮೊಕದ್ದಮೆ ಹೂಡಿರುವ ಇಂತಹ ಸೂಕ್ಷ್ಮ ಮತ್ತು ಅಗತ್ಯದ ಸಮಯದಲ್ಲಿ ನಿಮ್ಮ ನಿರಂತರ ಆರ್ಥಿಕ ಸಹಾಯವು ಕೃತಜ್ಞತೆಗೆ ಅರ್ಹವಾಗಿದೆ. ಜಝಾಕಮುಲ್ಲಾಹು ಖೈರಲ್ ಜಝಾ. ಈಗ ಮೊಕದ್ದಮೆಯ ದಿನಾಂಕ 24 ಫೆಬ್ರವರಿ 1899 ಆಗಿದೆ ಎಂದು ಹರ್ಝ್.ರತ್ ಮಸೀಹ್ ಮೌಊದ್(ಅ) ಹೇಳಿದರು. ಪ್ರಾಯಶಃ ಭಾನುವಾರದ ದಿನ. ಪ್ರಾಯಶಃ ಭಾನುವಾರದಂದು ಈದ್ ಆಗಿರಬಹುದು ಮತ್ತು ಮರುದಿನ ಸೋಮವಾರ ಪಠಾಣ್‌ಕೋಟ್‌ನಲ್ಲಿ ಮೊಕದ್ದಮೆಗಾಗಿ ಹೋಗಬೇಕಾಗಬಹುದು. ಈಗ ನಾನು ನಿರ್ಧರಿಸಿದ್ದೇನೆ, 'ನಾನು ಸ್ವಲ್ಪ ಸಮಯದವರೆಗೆ ನಿಮಗಾಗಿ ಪ್ರಾರ್ಥಿಸುತ್ತಿರುತ್ತೇನೆ. ಅಲ್ಲಾಹನು ದೂರ ಮತ್ತು ಅಗಲಿಕೆಯಿಂದ ನಿಮ್ಮನ್ನು ಕ್ಷೇಮವಾಗಿ ಪಾರುಮಾಡಿ ನೆಮ್ಮದಿ ಕರುಣಿಸಲಿ.' ಏಕೆಂದರೆ ಅವರ ಪೋಸ್ಟಿಂಗ್ ಯಾವುದೋ ದೂರದ ಪ್ರದೇಶದಲ್ಲಿತ್ತು. ಅವರು ಅಲ್ಲಿಂದ ಬರಲು ಬಯಸುತ್ತಿದ್ದರು. (ಮಕ್ತೂಬಾತೆ ಅಹ್ಮದ್, ಸಂಪುಟ–4, ಪುಟ–214)

ಅದೇ ರೀತಿ ಹರ್ಝ್.ರತ್ ಮಸೀಹ್ ಮೌಊದ್(ಅ) ಹರ್ಝ್.ರತ್ ಸಾಹಿಬ್‌ಝಾದಾ ಸಿರಾಜುಲ್ ಹಕ್ ಸಾಹಿಬ್‌ರಿಗೆ ತಮ್ಮ ಪತ್ರದಲ್ಲಿ ಬರೆಯುತ್ತಾರೆ: "ಗೌರವಾನ್ವಿತ ಸಹೋದರ ಸಾಹಿಬ್‌ಝಾದಾ ಸಿರಾಜುಲ್ ಹಕ್ ಸಾಹಿಬ್‌ರಿಗೆ. ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು. ನಿಮ್ಮ ಪತ್ರ ತಲುಪಿತು. ನೀವು ಉಡುಗೊರೆಯಾಗಿ ನೀಡಿದ ರುಮಾಲು ಮತ್ತು ಅತ್ತರ್. (ಸಣ್ಣ ವಸ್ತು, ಅದಕ್ಕೂ ಪತ್ರ ಬರೆದು ಕೃತಜ್ಞತೆ ಸಲ್ಲಿಸುತ್ತಿದ್ದಾರೆ). ಈ ಸ್ನೇಹಪರ ಉಡುಗೊರೆಗಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಜಝಾಕಮುಲ್ಲಾಹು ಖೈರಲ್ ಜಝಾ ವ ಅಹ್ಸನ ಅಲೈಕುಮ್ ಫಿದ್ದೀನ್ ವಲ್ ಉಖ್ಬಾ. ದೇವನು ನಿಮ್ಮನ್ನು ಬಹಳ ಸಂತೋಷದಿಂದಿರಿಸಲಿ ಮತ್ತು ಇಹಲೋಕ ಹಾಗೂ ಪರಲೋಕದ ಕಷ್ಟಗಳಿಂದ ರಕ್ಷಿಸಲಿ." (ಮಕ್ತೂಬಾತೆ ಅಹ್ಮದ್, ಸಂಪುಟ–3, ಪುಟ–110)

ಕೃತಜ್ಞತೆಯೊಂದಿಗೆ, ಹರ್ಝ್.ರತ್ ಮಸೀಹ್ ಮೌಊದ್(ಅ) ಪ್ರತಿಯೊಬ್ಬರಿಗೂ ಅವರ ಧಾರ್ಮಿಕ ಪ್ರಗತಿಗಾಗಿಯೂ ಪ್ರಾರ್ಥಿಸುತ್ತಿದ್ದರು.

ಸೈಯದ್ ಮಹಮೂದ್ ಆಲಂ ಸಾಹಿಬ್ ವಿವರಿಸುತ್ತಾರೆ: "ಹರ್ಝ್.ರತ್ ಮೌಲವಿ ನೂರುದ್ದೀನ್ ಸಾಹಿಬ್ ಹೇಳುತ್ತಿದ್ದರು, ಅರಬಿ ಭಾಷೆಯಲ್ಲಿ ಈದುಲ್–ಅರ್ಝಾದ ಖುತ್ಬಾವನ್ನು ಓದಿದ ಬಗ್ಗೆ ಹರ್ಝ್.ರತ್ ಮಸೀಹ್ ಮೌಊದ್(ಅ)ರೊಡನೆ ಕೇಳಿದಾಗ ಅವರು ಹೀಗೆ ಹೇಳಿದರು: 'ದೇವದೂತರು ನನ್ನ ಮುಂದೆ ದಪ್ಪ ಅಕ್ಷರಗಳಲ್ಲಿ ಬರೆದಿದ್ದ ಹಲಗೆಯನ್ನು ತರುತ್ತಿದ್ದರು ಮತ್ತು ನಾನು ಅದನ್ನು ನೋಡಿ ಓದುತ್ತಿದ್ದೆ. ಒಂದು ಹಲಗೆ ಬರುತ್ತಿತ್ತು, ನಾನು ಅದನ್ನು ಓದಿ ಮುಗಿಸಿದಾಗ, ಮತ್ತೊಂದು ಬರುತ್ತಿತ್ತು ಮತ್ತು ಮೊದಲನೆಯದು ಹೋಗುತ್ತಿತ್ತು, ಹೀಗೆ ಹಲಗೆಗಳ ಸರಮಾಲೆಯೇ ನಡೆಯಿತು. ಬರೆಯುವವನು ಮತ್ತೆ ಕೇಳಿದರೆ, ಏಕೆಂದರೆ ಇಬ್ಬರನ್ನು ಬರೆಯಲು ಹರ್ಝ್.ರತ್ ಮಸೀಹ್ ಮೌಊದ್(ಅ) ಕೂರಿಸಿದ್ದರು. ಹೋಗಿದ್ದ ಹಲಗೆ ಮತ್ತೆ ಹಿಂತಿರುಗಿ ಬರುತ್ತಿತ್ತು ಮತ್ತು ಅದನ್ನು ನೋಡಿ ನಾನು ಹೇಳುತ್ತಿದ್ದೆ.' ಈ ಖುತ್ಬಾ ಮುಗಿದಾಗ, ಹರ್ಝ್.ರತ್ ಮಸೀಹ್ ಮೌಊದ್(ಅ) ಕೃತಜ್ಞತೆಯ ಸಜ್ದ ಮಾಡಿದ್ದರು. ಅವರೊಂದಿಗೆ ಹಾಜರಿದ್ದ ಎಲ್ಲರೂ ಕೃತಜ್ಞತೆಯ ಸಜ್ದ ಮಾಡಿದರು. ಸಜ್ದದಿಂದ ತಲೆ ಎತ್ತಿ ಹರ್ಝ್.ರತ್ ಮಸೀಹ್ ಮೌಊದ್(ಅ) ಹೇಳಿದರು: 'ಈಗ ತಾನೇ ನಾನು ಕೆಂಪು ಅಕ್ಷರಗಳಲ್ಲಿ "ಮುಬಾರಕ್" ಎಂದು ಬರೆದಿರುವುದನ್ನು ನೋಡಿದೆ. ಇದು ಅಂಗೀಕಾರದ ಸಂಕೇತವಾಗಿದೆ.'

(ತರ್ಝ್.ಕಿರಃ, ಪುಟ–334–335, ಅಡಿಟಿಪ್ಪಣಿ, 2023)

ಹರ್ಝ್.ರತ್ ಮಿಯಾನ್ ಫಿರೋಝ್ ದೀನ್ ಸಾಹಿಬ್ ವಿವರಿಸುತ್ತಾರೆ: ಹರ್ಝ್.ರತ್ ಮಸೀಹ್ ಮೌಊದ್(ಅ) ಸಿಯಾಲ್ಕೋಟ್‌ನ ಉಪನ್ಯಾಸವನ್ನು ಮೀರ್ ಹುಸಾಮುದ್ದೀನ್ ಸಾಹಿಬ್‌ರ ಮನೆಯ ಛಾವಣಿಯ ಮೇಲೆ ಬರೆದಿದ್ದರು. ನಾಲ್ಕು ಮಸಿಬುಡ್ಡಿಗಳನ್ನು ನಾಲ್ಕು ಗೋಡೆಗಳ ಮೇಲಿಡಲಾಗಿತ್ತು ಮತ್ತು ನಡೆಯುತ್ತಾ ನಡೆಯುತ್ತಾ ಬರೆಯುತ್ತಿದ್ದರು. "ಅಸರ್ ಸಮಯವಾಗಿತ್ತು, ಹುಝೂರ್ ನಡೆಯುತ್ತಲೇ ಬರೆಯುತ್ತಿದ್ದರು ಮತ್ತು ಆಗೊಮ್ಮೆ ಈಗೊಮ್ಮೆ ಸಜ್ದದಲ್ಲಿ ಮಾಡುತ್ತಿದ್ದರು (ಅಂದರೆ ಆ ಸಮಯದಲ್ಲಿ ಅಲ್ಲಾಹನು ಯಾವುದಾದರೂ ವಿಶೇಷ ವಿಷಯವನ್ನು ತಿಳಿಸುತ್ತಿರಬಹುದು, ಹಾಗಾಗಿ ಕೃತಜ್ಞತೆಯ ಸಜ್ದ ಮಾಡುತ್ತಿದ್ದರು) ಈ ಸಂಪೂರ್ಣ ದೃಶ್ಯವನ್ನು ನಾವು ನಮ್ಮ ಮನೆಯ ಛಾವಣಿಯ ಮೇಲೆ ನಿಂತು ನೋಡಿದೆವು ಮತ್ತು ಈ ದೃಶ್ಯವನ್ನು ನೋಡಲು ಅನೇಕ ಜನರು ನಮ್ಮ ಮನೆಯಲ್ಲೇ ಸೇರಿದ್ದರು. ನಮ್ಮ ಮನೆ ಆ ಮನೆಗೆ ಹತ್ತಿರವಾಗಿತ್ತು ಮತ್ತು ಎತ್ತರವಾಗಿಯೂ ಇತ್ತು, ಅದರಿಂದ ಸಂಪೂರ್ಣ ದೃಶ್ಯ ಕಾಣಿಸುತ್ತಿತ್ತು, ಹರ್ಝ್.ರತ್ ಮಸೀಹ್ ಮೌಊದ್(ಅ) ಹೇಗೆ ಪುಸ್ತಕ ಬರೆಯುತ್ತಿದ್ದರು ಮತ್ತು ಜೊತೆಯಲ್ಲೇ ಹೇಗೆ ಅಲ್ಲಾಹನಿಗೆ ಕೃತಜ್ಞತೆಯನ್ನೂ ಸಲ್ಲಿಸುತ್ತಿದ್ದರು ಎಂದು." (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–375)

ಹರ್ಝ್.ರತ್ ಮಸೀಹ್ ಮೌಊದ್(ಅ)ರ ಕೃತಜ್ಞತೆಯ ಗುಣವನ್ನು ವಿವರಿಸುತ್ತಾ ಒಬ್ಬ ಸಹಾಬಿ ಹರ್ಝ್.ರತ್ ಖೈರುದ್ದೀನ್ ಸಾಹಿಬ್ ವಿವರಿಸುತ್ತಾರೆ: "ಒಮ್ಮೆ ನಮ್ಮ ಖಾದಿರಾಬಾದ್ ಗ್ರಾಮಕ್ಕೆ ಹರ್ಝ್.ರತ್ ಮಸೀಹ್ ಮೌಊದ್(ಅ) ಬಂದಾಗ, ನನ್ನ ತಾಯಿ ತಾಜ್ ಬೀಬಿ ಸಾಹಿಬಾ ಒಂದು ತಟ್ಟೆ ತುಂಬಾ ಸಕ್ಕರೆ ನೀಡಿದರು. ಹರ್ಝ್.ರತ್ ಮಸೀಹ್ ಮೌಊದ್(ಅ) ಆ ಸಕ್ಕರೆಯನ್ನು ಅಜ್ಜಿಯ ಮಡಿಲಿಗೆ ಹಾಕಿದರು (ಆ ಸಮಯದಲ್ಲಿ ಅವರ ಅಜ್ಜಿ ಕುಳಿತಿದ್ದರು, ಅವರಿಗೆ ಕೊಟ್ಟರು) ಮತ್ತು 'ಜಝಾಕಮುಲ್ಲಾಹ್' ಎಂದು ಹೇಳಿದರು ಹಾಗೂ ನಮಗಾಗಿ ದುಆ ಮಾಡಿದರು." (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–3, ಪುಟ–89)

ಸಣ್ಣಪುಟ್ಟ ವಿಷಯಗಳಿಗೂ ಕೃತಜ್ಞತೆ ಸಲ್ಲಿಸಿದರು.

ಹಾಜಿ ಮುಹಮ್ಮದ್ ದೀನ್ ಸಾಹಿಬ್ ವಿವರಿಸುತ್ತಾರೆ: "ಒಮ್ಮೆ ಹರ್ಝ್.ರತ್ ಮಸೀಹ್ ಮೌಊದ್(ಅ) ಯಾವುದೋ ಕಾರ್ಯಕ್ರಮಕ್ಕಾಗಿ ಸಿಯಾಲ್ಕೋಟ್‌ಗೆ ಬರುತ್ತಿದ್ದಾರೆ ಎಂದು ನನಗೆ ತಿಳಿಯಿತು. ನಿಗದಿತ ದಿನದಂದು ದರ್ಶನದ ಆಸೆಯಿಂದ ನಾನೂ ಅಲ್ಲಿಗೆ ತಲುಪಿದೆ. ಹರ್ಝ್.ರತ್ ಮಸೀಹ್ ಮೌಊದ್(ಅ) ಒಂದು ಮನೆಯ ಮೇಲಿನ ಅಂತಸ್ತಿನಲ್ಲಿದ್ದರು ಮತ್ತು ದರ್ಶನಕ್ಕಾಗಿ ಕಾಯುತ್ತಿದ್ದವರು ಕೆಳಗೆ ಗುಂಪಾಗಿ ನಿಂತಿದ್ದರು. ಅಷ್ಟರಲ್ಲಿ ಅವರು ಕೆಳಗೆ ಬಂದರು ಮತ್ತು ಹಾಜರಿದ್ದವರಿಗೆ ದರ್ಶನದ ಭಾಗ್ಯವನ್ನು ಕರುಣಿಸಿದರು. ಒಬ್ಬ ಮುದುಕ ಹರ್ಝ್.ರತ್ ಮಸೀಹ್ ಮೌಊದ್(ಅ)ರನ್ನು ಭೇಟಿಯಾದಾಗ ಜೋರಾಗಿ ಅಳಲಾರಂಭಿಸಿದ. ಹರ್ಝ್.ರತ್ ಮಸೀಹ್ ಮೌಊದ್(ಅ) ಸಮಾಧಾನ ಪಡಿಸುತ್ತಾ ವಿವರಗಳನ್ನು ಕೇಳಿದರು. ಅವರು ಹೇಳಿದರು: 'ಹುಝೂರ್, ನಾನು ಹರ್ಝ್.ರತ್ ಇಮಾಮ್ ಮಹ್‌ದಿಯ ಆಗಮನದ ವರೆಗೆ ಬದುಕಿರಲಿ ಎಂದು ಪ್ರಾರ್ಥಿಸುತ್ತಿದ್ದೆ.' ಹರ್ಝ್.ರತ್ ಮಸೀಹ್ ಮೌಊದ್(ಅ) ಹೇಳಿದರು: 'ಬಾಬಾ, ಹಾಗಾದರೆ ನಿಮ್ಮ ಪ್ರಾರ್ಥನೆಯನ್ನು ದೇವನು ಸ್ವೀಕರಿಸಿದನು.' ಇದರಿಂದ ಅವರು ಬಹಳ ಸಂತೋಷಪಟ್ಟರು ಮತ್ತು ತನ್ನೊಬ್ಬ ಮೊಮ್ಮಗನನ್ನು ಹರ್ಝ್.ರತ್ ಮಸೀಹ್ ಮೌಊದ್(ಅ)ರ ಮುಂದೆ ತಂದು, 'ಇವನ ಮೇಲೆ ನಿಮ್ಮ ಕೈಯಾಡಿಸಿ ಮತ್ತು ಇವನಿಗಾಗಿ

ಪ್ರಾರ್ಥಿಸಿ' ಎಂದು ಹೇಳಿದನು. ಹಝ್ರತ್ ಮಸೀಹ್ ಮೌಊದ್(ಅ) ಪ್ರಾರ್ಥಿಸಿದರು. ಹೋಗುವಾಗ ಆಕಸ್ಮಿಕವಾಗಿ ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಶೂ, ಅದು ಸಂಪೂರ್ಣವಾಗಿ ಸರಳವಾಗಿತ್ತು, ಕಾಲಿನಿಂದ ಕಳಚಿ ಕೆಳಗೆ ಬಿತ್ತು. ಕಾಲಿನಿಂದ ಕೆಳಗೆ ಬಿದ್ದಾಗ, ನಾನು ಅದನ್ನು ಎತ್ತಿ ತನ್ನ ಕೈಯಿಂದ ಅವರ ಕಾಲಿಗೆ ತೊಡಿಸಿದೆ. ಆಗ ಹಝ್ರತ್ ಮಸೀಹ್ ಮೌಊದ್(ಅ) ಮುಗುಳ್ನಕ್ಕು ಪ್ರೀತಿಯಿಂದ 'ಜಝಾಕಲ್ಲಾಹ್' ಎಂದು ಹೇಳಿದರು ಮತ್ತು ಬಹಳ ಕೃತಜ್ಞತೆ ಸಲ್ಲಿಸಿದರು." (ರಿವಾಯತ್ ಅಸ್‌ಹಾಬೆ ಅಹ್ಮದ್, ಸಂಪುಟ–5, ಪುಟ–334)

ಕೃತಜ್ಞತೆ ಸಲ್ಲಿಸುವ ಯಾವುದೇ ಅವಕಾಶವನ್ನೂ ಅವರು ಬಿಡುತ್ತಿರಲಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮುನ್ಷಿ ರುಸ್ತಮ್ ಅಲಿ ಸಾಹಿಬ್‌ರಿಗೆ ತಮ್ಮ ಪತ್ರವೊಂದರಲ್ಲಿ ಬರೆಯುತ್ತಾರೆ: "ಮುನ್ಷಿ ರುಸ್ತಮ್ ಅಲಿ ಸಾಹಿಬ್, ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವ ಬರಕಾತುಹು. ನೀವು ಮಿಯಾನ್ ಇಮಾಮುದ್ದೀನ್ ಸಾಹಿಬ್‌ರ ಮೂಲಕ ಕಳುಹಿಸಿದ ಐವತ್ತು ರೂಪಾಯಿಗಳು ತಲುಪಿವೆ. ನೀವು ಮತ್ತು ಚೌಧರಿ ಮುಹಮ್ಮದ್ ಬಕ್ಷ್ ಸಾಹಿಬ್ ಮಾಡಿದ ಪ್ರಯತ್ನಗಳಿಗೆ, ಕರುಣಾಮಯಿ ದೇವನು ನಿಮಗೆ ದೊಡ್ಡ ಪ್ರತಿಫಲವನ್ನು ನೀಡಲಿ ಮತ್ತು ಇಹಲೋಕ ಹಾಗೂ ಪರಲೋಕದಲ್ಲಿ ಯಶಸ್ಸನ್ನು ಕರುಣಿಸಲಿ. ಇಲ್ಲಿ ಪತ್ರ ಬರೆಯುವ ವರೆಗೆ ಎಲ್ಲ ರೀತಿಯಲ್ಲೂ ಕ್ಷೇಮವಿದೆ, ನೀವು ಮತ್ತೆ ನಿಮ್ಮ ಮಾಹಿತಿ ನೀಡಿರಿ." (ಮಕ್ತೂಬಾತೆ ಅಹ್ಮದ್, ಸಂಪುಟ–2,ಪುಟ–467–468)

ಪ್ರತಿಯೊಂದು ಸಣ್ಣ ವಿಷಯಕ್ಕೂ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತಿದ್ದರು.

ಹಝ್ರತ್ ಮಿಯಾನ್ ಮೀರನ್ ಬಕ್ಷ್ ಸಾಹಿಬ್ ವಿವರಿಸುತ್ತಾರೆ: "ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಕೈಯಲ್ಲಿ ಸುಮಾರು 1897 ಅಥವಾ 98ರಲ್ಲಿ ಬೈಅತ್ ಮಾಡಿದೆ, ಆದರೆ ನನ್ನ ತಂದೆಯವರಿಂದ ಸ್ವಲ್ಪ ಸಮಯದವರೆಗೆ ಈ ವಿಷಯವನ್ನು ಮುಚ್ಚಿಟ್ಟಿದ್ದೆ. ಕೊನೆಗೆ ಎಲ್ಲಿಯವರೆಗೆ ಮುಚ್ಚಿಡಲು ಸಾಧ್ಯ? ರಹಸ್ಯ ಬಯಲಾದಾಗ, ತಂದೆಯವರು ಮನೆಯಿಂದ ಹೊರಹಾಕಿದರು. 'ನೀನು ಅಹ್ಮದಿಯಾಗಿದ್ದೀಯಾ, ಈಗ ನನ್ನ ಮನೆಯಿಂದ ಹೊರನಡಿ' ಎಂದರು. ನಾನು ಪೋಷಕನಾದ ದೇವನ ಮೇಲೆ ಭರವಸೆ ಇಟ್ಟು ಬೇರೊಂದು ಅಂಗಡಿಯನ್ನು ಬಾಡಿಗೆಗೆ ಪಡೆದನು. ಬಡತನವಂತೂ ಇತ್ತು, ಆದರೆ ಮನಸ್ಸಿನಲ್ಲಿ ಒಂದು ಆಸೆಯಿತ್ತು: ಹೇಗಾದರೂ ಮಾಡಿ ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ಹಝ್ರತ್ ಮಸೀಹ್ ಮೌಊದ್(ಅ)ರಿಗಾಗಿ ಒಂದು ಮಲ್ಮಲ್ ಕುರ್ತಾ, ಒಂದು ಲಟ್ಟೆ (ದಪ್ಪ ಹತ್ತಿಬಟ್ಟೆ) ಸಲ್ವಾರ್, ಒಂದು ಕಪ್ಪು ಕೋಟ್ ಮತ್ತು ಒಂದು ಮಲ್ಮಲ್ ಪೇಟವನ್ನು ಖರೀದಿಸಿ ನನ್ನ ಕೈಯಾರೆ ಹೊಲಿದು ಉಡುಪನ್ನು ಸಿದ್ಧಪಡಿಸಿದೆ. ಪ್ರಯಾಣ ವೆಚ್ಚಕ್ಕಾಗಿ ಅತ್ತಿತ್ತ ಸಾಲ ಮಾಡಿ ಖಾದಿಯಾನಿಗೆ ತಲುಪಿದೆ. ಮರುದಿನ ಶುಕ್ರವಾರವಾಗಿತ್ತು, ಆದ್ದರಿಂದ ಸಾಧ್ಯವಾದರೆ ನಾನು ಈ ಉಡುಗೊರೆಯನ್ನು ಇಂದೇ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತಲುಪಿಸಿದರೆ, ಬಹುಶಃ ಅವರು ಜುಮುಅ ನಮಾಝ್‌ಗೆ ಮುಂಚಿತವಾಗಿಯೇ ಧರಿಸಿ ನನ್ನ ಮನಸ್ಸನ್ನು ಸಂತೋಷಪಡಿಸಬಹುದು ಎಂಬ ಯೋಚನೆಯಿತ್ತು. ಒಟ್ಟಿನಲ್ಲಿ ಈ ಆಲೋಚನೆಯಲ್ಲೇ ಖಾಝಿ ಝಿಯಾವುದ್ದೀನ್ ಸಾಹಿಬ್‌ರ ಅಂಗಡಿಗೆ ತಲುಪಿದೆ ಮತ್ತು ಅವರ ಮುಂದೆ ನನ್ನ ಆಸೆಯನ್ನು ವ್ಯಕ್ತಪಡಿಸಿದೆ. ಅದನ್ನು ಕೇಳಿದ ತಕ್ಷಣ ಅವರು ಹೇಳಿದರು: 'ನಡಿ ಮಿಯಾನ್, ನಾನು ನಿನ್ನನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಗೆ ಕರೆದೊಯ್ಯುತ್ತೇನೆ'. ಅದರಂತೆ ಅವರು ಅದೇ ಕ್ಷಣ ಎದ್ದು ನನ್ನನ್ನು ಅವರ ಸನ್ನಿಧಿಗೆ ಕರೆದೊಯ್ದರು. ಆ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮಂಚದ ಮೇಲೆ ಕುಳಿತು ಏನನ್ನೋ ಬರೆಯುತ್ತಿದ್ದರು ಮತ್ತು ಖ್ವಾಜಾ ಕಮಾಲುದ್ದೀನ್ ಸಾಹಿಬ್ ಮಂಚದ ಮುಂದೆ ಚಾಪೆಯ ಮೇಲೆ ಕುಳಿತಿದ್ದರು. ನಾವಿಬ್ಬರೂ ಖ್ವಾಜಾ ಸಾಹಿಬ್‌ರ ಬಳಿ ಕುಳಿತುಕೊಂಡೆವು. 'ಈಗ ನೀವೇಕೆ ಬಂದಿರಿ?' ಎಂದು ಖ್ವಾಜಾ ಸಾಹಿಬ್ ಕೇಳಿದರು. ಖಾಝಿ ಸಾಹಿಬ್ ನನ್ನ ಆಸೆಯನ್ನು ವ್ಯಕ್ತಪಡಿಸಿದರು. ಖ್ವಾಜಾ ಸಾಹಿಬ್ ಸ್ವಲ್ಪ ಹೊತ್ತು ಸುಮ್ಮನಿದ್ದು, ನಂತರ ನನ್ನ ಕಡೆಗೆ ತಿರುಗಿ, 'ಏಕೆ ಮಿಯಾನ್, ನಾನು ನಿನ್ನ ಪರವಾಗಿ ವಕಾಲತ್ತು ವಹಿಸಬೇಕೆ?' ಎಂದರು (ಖ್ವಾಜಾ ಸಾಹಿಬ್ ವಕೀಲರಾಗಿದ್ದರು, ಆ ಸಂದರ್ಭದಲ್ಲೂ ತಮ್ಮ ವೃತ್ತಿಪರ ಪದಗಳನ್ನೇ ಬಳಸಿದರು). ನಾನು ಹೇಳಿದೆ: 'ಇದು ನಿಮ್ಮ ಅತ್ಯಂತ ಕರುಣೆಯಾಗುವುದು, ವಕಾಲತ್ತು ವಹಿಸಿ' ಎಂದೆ. ಆಗ ಖ್ವಾಜಾ ಸಾಹಿಬ್ ನನ್ನಿಂದ ಆ ಬಟ್ಟೆಗಳನ್ನು ಪಡೆದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ನೀಡಿದರು ಮತ್ತು ಜೊತೆಗೆ ಹೀಗೆ ಹೇಳಿದರು: 'ಹುಝೂರ್, ಈ ಹುಡುಗನ ಆಸೆಯೇನೆಂದರೆ, ನೀವು ಈ ಬಟ್ಟೆಗಳನ್ನು ಧರಿಸಿ ಜುಮುಅ ನಮಾಝ್ ನಿರ್ವಹಿಸಬೇಕು ಎಂದಾಗಿದೆ' ಖ್ವಾಜಾ ಸಾಹಿಬ್‌ರ ಈ ಮಾತನ್ನು ಕೇಳಿ ಹಝ್ರತ್ ಮಸೀಹ್ ಮೌಊದ್(ಅ) ಬಟ್ಟೆಗಳನ್ನು ತೆಗೆದುಕೊಂಡು ಧರಿಸಲು ಪ್ರಾರಂಭಿಸಿದರು, ಆದರೆ ಕೋಟ್ ಧರಿಸಿದಾಗ ಅದು ಬಹಳ ಬಿಗಿಯಾಗಿತ್ತು. ನಾನು ಹೇಳಿದೆ, 'ಹುಝೂರ್ ಕೋಟ್ ಬಹಳ ಬಿಗಿಯಾಗಿದೆ, ನಾನು ಅದನ್ನು ಸ್ವಲ್ಪ ಸಡಿಲಗೊಳಿಸುತ್ತೇನೆ.' ಆ ಸಮಯದಲ್ಲಿ ಅಲ್ಲಿಯೇ ಧರಿಸಿರಲಿಲ್ಲ, ಒಳಗೆ ಹೋಗಿ ಧರಿಸಿ ಬಂದಿರಬೇಕು. ತಮ್ಮ ಕೆಲಸ ಬಿಟ್ಟು ಹೋಗಿ ಬಟ್ಟೆ ಧರಿಸಿ ಬಂದರು. ಹಝ್ರತ್ ಮಸೀಹ್ ಮೌಊದ್(ಅ) ಕೋಟ್ ತೆಗೆದು ನನಗೆ ನೀಡಿದರು. ನಾನು ತಕ್ಷಣ ಎದ್ದು ಮಾರುಕಟ್ಟೆಗೆ ತಂದೆ ಮತ್ತು ದರ್ಜಿಯ ಅಂಗಡಿಯಲ್ಲಿ ಕುಳಿತು ಕೋಟ್‌ನ ಬೆನ್ನಿನ ಹೊಲಿಗೆಯನ್ನು ಬಿಚ್ಚಿ ಸಡಿಲಗೊಳಿಸಿದೆ ಮತ್ತು ಮತ್ತೆ ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಗೆ ಹಾಜರಾದೆ. ಅವರು ಮತ್ತೆ ಧರಿಸಿದರು, ಆದರೆ ಈಗಲೂ ಕೋಟ್‌ನ ಗುಂಡಿಗಳು ಮುಚ್ಚುತ್ತಿರಲಿಲ್ಲ, ಆದರೆ ಹೇಗಿದ್ದರೂ ಹಝ್ರತ್ ಮಸೀಹ್ ಮೌಊದ್(ಅ) ನನ್ನ ಮನಸ್ಸನ್ನು ನೋಯಿಸದಿರಲು ಕಷ್ಟಪಟ್ಟು ಗುಂಡಿಗಳನ್ನು ಹಾಕಿಕೊಂಡರು ಮತ್ತು ಈ ಬಟ್ಟೆಗಳು ಧರಿಸಲು ಯೋಗ್ಯವಾಗಿವೆಯೋ ಇಲ್ಲವೋ ಎಂಬುದರ ಬಗ್ಗೆ ಸ್ವಲ್ಪವೂ ಯೋಚಿಸಲಿಲ್ಲ."

(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–1, ಪುಟ–368–369)

ಅವರು ಆ ಸ್ಥಿತಿಯಲ್ಲಿ ಧರಿಸಿಯೂ, ಹೊಸದಾಗಿ ಅಹ್ಮದಿಯಾಗಿದ್ದ ಮತ್ತು ಉಡುಗೊರೆ ತಂದಿದ್ದ ಆ ಹುಡುಗನ ಭಾವನೆಗಳನ್ನು ಗೌರವಿಸಿದರು ಮತ್ತು ನಂತರ ಅವನಿಗೆ ಬಹಳ ಕೃತಜ್ಞತೆಯನ್ನೂ ಸಲ್ಲಿಸಿದರು.

ಹಝ್ರತ್ ಮಿಯಾನ್ ಸೈಫುಲ್ಲಾ ಸಾಹಿಬ್ ವಿವರಿಸುತ್ತಾರೆ: "ನಾನು ಒಮ್ಮೆ ಖಾದಿಯಾನಿಗೆ ಹೋದಾಗ, ಯಾರೋ ಹಝ್ರತ್ ಮಸೀಹ್ ಮೌಊದ್(ಅ)ರ ಮುಂದೆ ಐವತ್ತು–ಅರವತ್ತು ರೂಪಾಯಿಗಳ ರಾಶಿಯನ್ನೇ ಇಟ್ಟರು. ಆದರೆ ಅವರು ಆ ಕಡೆ ಗಮನವನ್ನೂ ಹರಿಸಲಿಲ್ಲ." ಸಾಮಾನ್ಯವಾಗಿ ಜನರು ನೀಡುವಾಗ ಕೃತಜ್ಞತೆ ಸಲ್ಲಿಸುತ್ತಿದ್ದರು, ಆದರೆ ಬಹುಶಃ ಇದರಲ್ಲಿ ಯಾವುದಾದರೂ ವಿಶೇಷ ಕಾರಣವಿರಬಹುದು. "ಏನೇ ಇರಲಿ, ಅವರು ನಗದು ಹಣ ನೀಡಿದರು, ಅವರು ಗಮನ ಹರಿಸಲಿಲ್ಲ. ಅಷ್ಟರಲ್ಲಿ ಒಬ್ಬ ವೃದ್ಧೆ, ಬಹುಶಃ ಹಿಂದೂ ಆಗಿದ್ದಳು, ಅವಳ ಜೊತೆ ಒಬ್ಬ ಹುಡುಗನೂ ಇದ್ದನು. ಅವಳು ಬಟ್ಟೆಯಲ್ಲಿ ಕಟ್ಟಿದ್ದ ಬೆಲ್ಲವನ್ನು ತಂದಿದ್ದಳು. ಆ ಮಹಿಳೆ ಹೇಳಿದಳು: 'ಹುಝೂರ್, ಈ ಹುಡುಗ ನಿಮಗಾಗಿ ಬೆಲ್ಲ ತಂದಿದ್ದಾನೆ. ಹುಝೂರ್ ಅವನಿಗಾಗಿ ಪ್ರಾರ್ಥಿಸಬೇಕು'. 'ಬಹಳ ಒಳ್ಳೆಯದು' ಎಂದು ಹೇಳಿ ಹಝ್ರತ್ ಮಸೀಹ್ ಮೌಊದ್(ಅ) ಬಹಳ ಸಂತೋಷಪಟ್ಟರು ಮತ್ತು ಆ ಮಗುವಿನ ಕೈಯಿಂದ ಆ ಬೆಲ್ಲವನ್ನು ಬಟ್ಟೆಯ ಸಮೇತ ತೆಗೆದುಕೊಂಡು ಹೆಗಲ ಮೇಲೆ ಹಾಕಿಕೊಂಡರು. ಆ ಬಡ ಮಗುವಿನಿಂದ ಆ ಸಾಮಾನ್ಯ ಉಡುಗೊರೆಯನ್ನೂ ಪಡೆದು ಬಹಳ ಗೌರವಿಸಿದರು, ಕೃತಜ್ಞತೆ ಸಲ್ಲಿಸಿದರು ಮತ್ತು ಅವನಿಗಾಗಿ ಪ್ರಾರ್ಥನೆಯನ್ನೂ ಮಾಡಿದರು." (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–453)

ಹಝ್ರತ್ ಮಸೀಹ್ ಮೌಊದ್(ಅ) ಅಹ್ಮದಿಯರಿಗಾಗಿ ಬರೆದ ಪತ್ರವೊಂದರಲ್ಲಿ ಹೇಳುತ್ತಾರೆ: "ಮೊದಲನೆಯದಾಗಿ, ನನ್ನ ಹೃದಯದಲ್ಲಿ ಅಲ್ಲಾಹನ ಕೃತಜ್ಞತೆಯು ಉಕ್ಕಿಬರುತ್ತಿದೆ, ಅವನು ನನ್ನ ಜಮಾಅತಿಗೆ ನಿಜವಾದ ಭಕ್ತಿ, ಪ್ರೀತಿ ಮತ್ತು ಸಹಾನುಭೂತಿಯನ್ನು ದಯಪಾಲಿಸಿದ್ದಾನೆ. ದೇವನ ಕೃಪೆ ಅವರೊಂದಿಗೆ ಇಲ್ಲದೇ ಇರುತ್ತಿದ್ದರೆ, ಸಹಾಬಿಯರ ಹೆಜ್ಜೆಗುರುತುಗಳಲ್ಲಿ ಈ ಮಟ್ಟದ ವಿಧೇಯತೆಯನ್ನು ತೋರುವ ಮತ್ತು ತಮ್ಮ ಆರ್ಥಿಕ ತೊಂದರೆಗಳು ಹಾಗೂ ಕಡಿಮೆ ಆದಾಯದ ನಡುವೆಯೂ ತಮ್ಮ ಸಾಮರ್ಥ್ಯಕ್ಕಿಂತ ಮೀರಿ ಆರ್ಥಿಕ ಸೇವೆಯಲ್ಲಿ ತೊಡಗುವ ಸೌಭಾಗ್ಯ ಅವರಿಗೆ ಖಂಡಿತ ಸಿಗುತ್ತಿರಲಿಲ್ಲ. ದೇವನು ಅವರೆಲ್ಲರ ಸಂಪತ್ತಿನಲ್ಲಿ ಅನುಗ್ರಹ ಸುರಿಸಲಿ ಮತ್ತು ಧಾರ್ಮಿಕ ಉದ್ದೇಶಗಳನ್ನು ಪೂರೈಸಲು ಅವರು ಮಾಡುತ್ತಿರುವ ಈ ಸಹಾಯ ಮತ್ತು ಬೆಂಬಲವು ಇಹಲೋಕ ಮತ್ತು ಪರಲೋಕದಲ್ಲಿ ಅವರ ಒಳಿತಿಗೆ ಕಾರಣವಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ." (ಮಕ್ತೂಬಾತೆ ಅಹ್ಮದ್, ಸಂಪುಟ–5, ಪುಟ–365)

ನಂತರ ಉಪದೇಶಿಸುತ್ತಾ ಹೀಗೆ ಹೇಳಿದರು: "ಅಲ್ಲಾಹನು ಯಾರನ್ನು ಅನುಗ್ರಹಿಸಿದ್ದಾನೋ, ಅದರ ಕೃತಜ್ಞತೆಯೇನೆಂದರೆ, ಅವನ ಸೃಷ್ಟಿಯೊಂದಿಗೆ ದಯೆ ಮತ್ತು ಒಳಿತಿನಿಂದ ವರ್ತಿಸುವುದು ಮತ್ತು ಈ ದೈವಿಕ ಅನುಗ್ರಹದ ಕುರಿತು ಅಹಂಕಾರ ಪಡದಿರುವುದು ಹಾಗೂ ಕಾಡುಜನರಂತೆ ಬಡವರನ್ನು ತುಳಿಯದಿರುವುದು." (ಮಲ್‌ಫೂಝ್‌ಾತ್, ಸಂಪುಟ–7, ಪುಟ–314, 2022)

ಅಲ್ಲಾಹನಿಂದ ಜ್ಞಾನ ಪಡೆದು, ಜನರ ವಿಷಯಗಳ ಬಗ್ಗೆಯೂ ಕೆಲವೊಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಮೊದಲೇ ಮಾಹಿತಿ ನೀಡುತ್ತಿದ್ದರು, ಅಥವಾ ವಿರೋಧಿಗಳ ಬಗ್ಗೆ ಅಲ್ಲಾಹನಿಂದ ಜ್ಞಾನ ಪಡೆದು ಅವರಿಗೆ ಹೀಗೆ ಆಗುತ್ತದೆ ಎಂದು ಹೇಳುತ್ತಿದ್ದರು. ಆದರೆ ಕೆಲವೊಮ್ಮೆ ಅಲ್ಲಾಹನ ಯುಕ್ತಿಯಿಂದ ಅವು ಪೂರ್ಣಗೊಳ್ಳಲು ಸಮಯ ಹಿಡಿಯುತ್ತಿತ್ತು. ಇಂತಹ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ವ್ಯಾಕುಲರಾಗುತ್ತಿದ್ದರು ಮತ್ತು ಪ್ರಾರ್ಥನೆಗಳಲ್ಲಿ ಮಗ್ನರಾಗುತ್ತಿದ್ದರು, ಏಕೆಂದರೆ ವಿರೋಧಿಗಳು ಇದರಿಂದ ಗದ್ದಲ ಎಬ್ಬಿಸುತ್ತಾರೆ. ಆದರೆ ಆ ವಿಷಯ ಪೂರ್ಣಗೊಳ್ಳುವಾಗ, ಅವರು ಅತ್ಯಂತ ಕೃತಜ್ಞತೆಯಿಂದ ಅಲ್ಲಾಹನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗುತ್ತಿದ್ದರು. ಅದರಂತೆ ಹಝ್ರತ್ ಮಸೀಹ್ ಮೌಊದ್(ಅ) ಒಂದು ಘಟನೆಯನ್ನು ಪ್ರಸ್ತಾಪಿಸುತ್ತಾ ಹೀಗೆ ಹೇಳುತ್ತಾರೆ: "ಒಮ್ಮೆ ನಾನು ಶರಮ್‌ಪತ್ ಖತ್ರಿಯ ಸಹೋದರನಾದ ಬಿಸಂಬರ್ ದಾಸ್ ಎಂಬಾತನ ಬಗ್ಗೆ, ಅವನ ಮೇಲೆ ಹೂಡಲಾಗಿದ್ದ ಕ್ರಿಮಿನಲ್ ಮೊಕದ್ದಮೆಯಿಂದ ಅವನು ವಿಮುಕ್ತನಾಗುವುದಿಲ್ಲ,

ಅವನಿಗೆ ಅರ್ಧ ಶಿಕ್ಷೆ ಉಳಿಯುವುದು ಎಂದು ಭವಿಷ್ಯವಾಣಿ ನುಡಿದಿದ್ದೆ. ಅದರ ನಂತರ ಆಕಸ್ಮಿಕವಾಗಿ, ಭವಿಷ್ಯವಾಣಿಯಲ್ಲಿ ತಿಳಿಸಿದಂತೆ ಬಿಸಂಬರ್ ದಾಸ್ ಅರ್ಧ ಶಿಕ್ಷೆ ಅನುಭವಿಸಿ ಬಿಡುಗಡೆಯಾದಾಗ, ಅವನ ವಾರಸುದಾರರು ನಿರೀಕ್ಷೆಗೆ ವಿರುದ್ಧವಾಗಿ ಬಿಸಂಬರ್ ದಾಸ್ ವಿಮುಕ್ತಗೊಂಡಿದ್ದಾನೆ ಎಂದು ಸುದ್ದಿ ಹಬ್ಬಿಸಿದರು. ರಾತ್ರಿಯ ಸಮಯವಾಗಿತ್ತು ಮತ್ತು ನಾನು ನನ್ನ ದೊಡ್ಡ ಮಸೀದಿಗೆ ನಮಾಝ್ ನಿರ್ವಹಿಸಲು ಹೋಗಿದ್ದೆ. ಖಾದಿಯಾನಿನ ನಿವಾಸಿ ಅಲಿ ಮುಹಮ್ಮದ್ ಎಂಬ ಮುಲ್ಲಾ ಮಸೀದಿಗೆ ಬಂದು, ಬಿಸಂಬರ್ ದಾಸ್ ವಿಮುಕ್ತಗೊಂಡಿದ್ದಾನೆ ಮತ್ತು ಮಾರುಕಟ್ಟೆಯಲ್ಲಿ ಅವನಿಗೆ ಅಭಿನಂದನೆಗಳು ಸಲ್ಲುತ್ತಿವೆ ಎಂದು ತಿಳಿಸಿದಾಗ, ಈ ಸುದ್ದಿ ಕೇಳಿ ನನಗೆ ಬಹಳ ಆಘಾತವಾಯಿತು ಮತ್ತು ಹೃದಯದಲ್ಲಿ ವ್ಯಾಕುಲತೆ ಉಂಟಾಯಿತು: 'ನೀವು ಬಿಸಂಬರ್ ದಾಸ್ ವಿಮುಕ್ತಗೊಳ್ಳುವುದಿಲ್ಲ ಎಂದು ಭವಿಷ್ಯ ನುಡಿದಿದ್ದಿರಿ, ಈಗ ನೋಡಿ ಅವನು ಖುಲಾಸೆಗೊಂಡಿದ್ದಾನೆ' ಎಂದು ಧರ್ಮಾಂಧ ಹಿಂದೂಗಳು ಟೀಕಿಸುವರು ಎಂಬ ದುಃಖದಿಂದ ನಮಾಝಿನ ಪ್ರತಿಯೊಂದು ರಕಅತ್ ನನಗೆ ಒಂದು ವರ್ಷದಂತೆ ಭಾಸವಾಯಿತು ಮತ್ತು ನಮಾಝ್‌ನಲ್ಲಿ ಒಂದು ರಕಅತಿನ ನಂತರ ನಾನು ಸಜ್‌ದಗೆ ಹೋಗುವಾಗ, ನನ್ನ ವ್ಯಾಕುಲತೆ ಮಿತಿಮೀರಿತು. ಆಗ ಸಜ್‌ದದ ಸ್ಥಿತಿಯಲ್ಲೇ ಗಟ್ಟಿಯಾದ ಧ್ವನಿಯಲ್ಲಿ ದೇವನು ನನ್ನನ್ನು ಉದ್ದೇಶಿಸಿ ಹೀಗೆ ಹೇಳಿದನು: 'ಲಾ ತಖ಼ಫ಼್ ಇನ್ನಕ ಅಂತಲ್ ಅಅ್‌ಲಾ' (ಭಯಪಡಬೇಡ, ನೀನೇ ಮೇಲುಗೈ ಸಾಧಿಸುವೆ) ಎಂದು ಹೇಳಿದನು. ನಂತರ ಭವಿಷ್ಯವಾಣಿ ಹೇಗೆ ನೆರವೇರುವುದು ಎಂದು ನಾನು ಕಾಯುತ್ತಿದ್ದೆ, ಆದರೆ ಯಾವುದೇ ಚಿಹ್ನೆ ಕಾಣಿಸಲಿಲ್ಲ. ನಾನು ಪದೇ ಪದೇ ಶರಮ್‌ಪತ್‌ನನ್ನು, ಬಿಸಂಬರ್ ದಾಸ್ ಖುಲಾಸೆಗೊಂಡಿದ್ದಾನೆ ಎಂಬುದು ನಿಜವೇ? ಎಂದು ಕೇಳುತ್ತಿದ್ದೆ. ಅದಕ್ಕೆ ಅವನು, ಅವನು ನಿಜವಾಗಿಯೂ ಖುಲಾಸೆಗೊಂಡಿದ್ದಾನೆ ಮತ್ತು ನನಗೆ ಸುಳ್ಳು ಹೇಳುವ ಅಗತ್ಯವೇನಿದೆ? ಎಂದು ಉತ್ತರಿಸುತ್ತಿದ್ದನು. ಆ ಹಿಂದೂ ಹೀಗೆ ಹೇಳುತ್ತಿದ್ದನು. ಆ ಗ್ರಾಮದಲ್ಲಿ ಯಾರನ್ನೇ ಕೇಳಿದರೂ, ನಾವೂ ಅವನು ವಿಮುಕ್ತಗೊಂಡಿದ್ದಾನೆ ಎಂದು ಕೇಳಿದ್ದೇವೆ ಎನ್ನುತ್ತಿದ್ದರು. ಹೀಗೆಯೇ ಸುಮಾರು ಆರು ತಿಂಗಳು ಅಥವಾ ಹೆಚ್ಚು–ಕಡಿಮೆ ಸಮಯ ಕಳೆಯಿತು. ದುಷ್ಟ ಜನರು ಅಪಹಾಸ್ಯ ಮತ್ತು ಗೇಲಿ ಮಾಡುತ್ತಿದ್ದರು, ಅದು ಹಿಂದಿನಿಂದಲೂ ಅವರ ಅಭ್ಯಾಸವಾಗಿತ್ತು. ಆದರೆ ಶರಮ್‌ಪತ್ ಯಾವುದೇ ಅಪಹಾಸ್ಯ ಮತ್ತು ಗೇಲಿ ಮಾಡಲಿಲ್ಲ, ಇದರಿಂದ ಅವನು ನನ್ನೊಂದಿಗೆ ಸಜ್ಜನಿಕೆಯಿಂದ ವರ್ತಿಸಿದ್ದಾನೆ ಎಂದು ನನಗೆ ವಿಶ್ವಾಸ ಮೂಡಿತು. ಆದರೂ ನಾನು ಅವನ ಮುಂದೆ ನಾಚಿಕೆಪಡುತ್ತಿದ್ದೆ, ಏಕೆಂದರೆ ನಾನು ಅವನಿಗೆ ಅವನ ಸಹೋದರ ವಿಮುಕ್ತಗೊಳ್ಳುವುದಿಲ್ಲ ಎಂದು ಅಷ್ಟು ಖಚಿತವಾಗಿ ಹೇಳಿದ್ದೆ ಮತ್ತು ಈಗ ಈ ಪರಿಸ್ಥಿತಿ ಬಂದೊದಗಿದೆ. ಆದರೂ ನನ್ನ ದೇವನ ಮೇಲೆ ನನಗೆ ದೃಢವಾದ ನಂಬಿಕೆಯಿತ್ತು ಮತ್ತು ದೇವನು ತನ್ನ ಶಕ್ತಿಯ ದೃಶ್ಯವನ್ನು ತೋರಿಸುವನೆಂದು ನನಗೆ ವಿಶ್ವಾಸವಿತ್ತು, ಖುಲಾಸೆಗೊಂಡ ನಂತರ ಅವನು ಮತ್ತೆ ಸಿಕ್ಕಿಬೀಳುವ ಸಾಧ್ಯತೆಯೂ ಇತ್ತು. ಆದರೆ ಈ ಖುಲಾಸೆಗೊಂಡ ಸುದ್ದಿಯೇ ಒಂದು ಕಟ್ಟುಕಥೆ, ಸುಳ್ಳು ಸುದ್ದಿ ಹಬ್ಬಿಸಲಾಗಿತ್ತು ಎಂಬುದು ನನಗೆ ತಿಳಿದಿರಲಿಲ್ಲ. ಅದರ ನಂತರ ಆಕಸ್ಮಿಕವಾಗಿ, ಬೆಳಿಗ್ಗೆ ಎಂಟು ಗಂಟೆ ಸುಮಾರಿಗೆ ಬಟಾಲಾದ ಒಬ್ಬ ತಹಸೀಲ್ದಾರ್, ಅವರ ಹೆಸರು ಹಾಫಿಝ್ ಹಿದಾಯತ್ ಅಲಿ, ಪ್ರವಾಸದ ನಿಮಿತ್ತ ಖಾದಿಯಾನಿಗೆ ಬಂದರು, ಏಕೆಂದರೆ ಖಾದಿಯಾನ್ ಬಟಾಲಾ ತಹಸೀಲ್‌ಗೆ ಸೇರಿತ್ತು, ಅವರು ನಮ್ಮ ಮನೆಗೆ ಬಂದರು. ಅವರು ಇನ್ನೂ ಕುದುರೆಯಿಂದ ಇಳಿದಿರಲಿಲ್ಲ, ಅಷ್ಟರಲ್ಲಿ ಕೆಲವು ಹಿಂದೂಗಳು, ಅವರ ಸಂಪ್ರದಾಯದಂತೆ, ಅವರಿಗೆ ನಮಸ್ಕರಿಸಲು ಬಂದರು, ಅವರಲ್ಲಿ ಬಿಸಂಬರ್ ದಾಸ್ ಕೂಡ ಇದ್ದನು. ಆಗ ತಹಸೀಲ್ದಾರ್ ಬಿಸಂಬರ್ ದಾಸ್‌ನನ್ನು ನೋಡಿ ಹೇಳಿದರು: 'ಬಿಸಂಬರ್ ದಾಸ್, ನೀನು ಜೈಲಿನಿಂದ ಬಿಡುಗಡೆಯಾಗಿರುವುದಕ್ಕೆ ನಮಗೆ ಸಂತೋಷವಿದೆ, ಆದರೆ ನೀನು ವಿಮುಕ್ತನಾಗಿಲ್ಲ.' ನಾನು ಈ ಮಾತನ್ನು ಕೇಳಿದ ಕೂಡಲೇ ಕೃತಜ್ಞತೆಯ ಸಜ್‌ದ ಮಾಡಿದೆ ಮತ್ತು ತಕ್ಷಣ ಶರಮ್‌ಪತ್‌ನನ್ನು ಕರೆದು, 'ನೀನೇಕೆ ಇಷ್ಟು ದಿನ ಬಿಸಂಬರ್ ದಾಸ್ ಖುಲಾಸೆಗೊಂಡಿದ್ದಾನೆ ಎಂದು ನನ್ನ ಬಳಿ ಸುಳ್ಳು ಹೇಳಿ ನನಗೆ ವಿನಾಕಾರಣ ನೋವು ಕೊಟ್ಟೆ?' ಎಂದು ಕೇಳಿದೆ. ಅದಕ್ಕವನು ಉತ್ತರಿಸಿದ: 'ಒಂದು ಅನಿವಾರ್ಯತೆಯಿಂದಾಗಿ ಈ ಸುಳ್ಳು ಹೇಳಬೇಕಾಯಿತು, ಅದೇನೆಂದರೆ ನಮ್ಮ ಸಮಾಜದಲ್ಲಿ ಮದುವೆಯ ಸಂಬಂಧಗಳನ್ನು ಬೆಳೆಸುವಾಗ ಸಣ್ಣಪುಟ್ಟ ವಿಷಯಗಳಿಗೂ ಟೀಕೆಗಳಾಗುತ್ತವೆ, ಮತ್ತು ದುರ್ನಡತೆ ಸಾಬೀತಾದರೆ ಹುಡುಗಿಯರು ಸಿಗುವುದು ಕಷ್ಟವಾಗುತ್ತದೆ. ಹಾಗಾಗಿ ಅದೇ ಅನಿವಾರ್ಯತೆಯಿಂದಾಗಿ ನಾನು ವಾಸ್ತವಕ್ಕೆ ವಿರುದ್ಧವಾಗಿ ಹೇಳುತ್ತಿದ್ದೆ, ವಾಸ್ತವಕ್ಕೆ ವಿರುದ್ಧವಾಗಿ ಸುದ್ದಿ ಹಬ್ಬಿಸಿದೆ ಮತ್ತು ಸುಳ್ಳು ಹೇಳುತ್ತಿದ್ದೆ.'
(ಹಖೀಖತುಲ್ ವಹೀ, ರೂಹಾನಿ ಖಝಾ಼ಈನ್, ಸಂಪುಟ–22, ಪುಟ–314–315) (ಬರಾಹೀನೆ ಅಹ್ಮದಿಯಾ, ಭಾಗ–4, ರೂಹಾನಿ ಖಝಾ಼ಈನ್, ಸಂಪುಟ–1, ಪುಟ–657, ಅಡಿಟಿಪ್ಪಣಿಯ ಅಡಿಟಿಪ್ಪಣಿ ಸಂಖ್ಯೆ–4)

ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಒಂದು ನಿದರ್ಶನದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: "ಪಂಡಿತ್ ದಯಾನಂದನ ಅನುಯಾಯಿಗಳಿಗೆ ಸಂಬಂಧಿಸಿದಂತೆ ಪೂರ್ಣಗೊಂಡ ಒಂದು ಭವಿಷ್ಯವಾಣಿಯಿದೆ, ಅದರ ವಿವರಗಳನ್ನು ತಿಳಿಯುವುದು ಓದುಗರಿಗೆ ಪ್ರಯೋಜನಕಾರಿಯಾಗಿದೆ. ಹಾಗಾಗಿ ಅದನ್ನು ಬರೆಯುವುದರಿಂದ ಸ್ವಲ್ಪ ದೀರ್ಘವಾದರೂ, ಇಸ್ಲಾಮಿನ ಘನತೆಯ ಬಗ್ಗೆ ಅರಿವಿಲ್ಲದ ಆ ಜನರ ಹಿತದೃಷ್ಟಿಯಿಂದ ಬರೆಯಲಾಗುತ್ತಿದೆ. ಈ ಭವಿಷ್ಯವಾಣಿ ಪೂರ್ಣಗೊಳ್ಳುವ ಮುನ್ನ ಒಂದು ವಿಚಿತ್ರ ರೀತಿಯ ಕಷ್ಟಗಳು ಮತ್ತು ಅಸಹ್ಯಕರ ವಿಷಯಗಳು ಎದುರಾದವು." ಇಲ್ಲಿಯೂ ನಿಮ್ಮ ಭವಿಷ್ಯವಾಣಿಯ ಉದ್ದೇಶ ಇಸ್ಲಾಮಿನ ಘನತೆಯನ್ನು ತೋರಿಸುವುದೇ ಆಗಿತ್ತು. ಹಝ್ರತ್ ಪೈಗಂಬರ್(ಸ)ರ ಧ್ವಜವು ಪ್ರಪಂಚದ ಮೇಲೆ ಹಾರಾಡಬೇಕು ಎಂಬುದು. "ಕೊನೆಗೆ ಕರುಣಾಮಯಿ ದೇವನು ಆ ಎಲ್ಲ ಕಷ್ಟಗಳನ್ನು ದೂರಮಾಡಿ 10 ಸೆಪ್ಟೆಂಬರ್ 1883, ಸೋಮವಾರದಂದು ಈ ಭವಿಷ್ಯವಾಣಿಯನ್ನು ಪೂರೈಸಿದನು. 6 ಸೆಪ್ಟೆಂಬರ್ 1883, ಗುರುವಾರ ಕರುಣಾಮಯಿ ದೇವನು ಸರಿಯಾದ ಸಮಯದಲ್ಲಿ ನನ್ನ ಸಮಾಧಾನಕ್ಕಾಗಿ ತನ್ನ ಪವಿತ್ರ ವಾಕ್ಯದ ಮೂಲಕ ಇಪ್ಪತ್ತೊಂದು ರೂಪಾಯಿಗಳು ಬರಲಿವೆ ಎಂಬ ಶುಭಸುದ್ದಿ ನೀಡಿದನು. ಅದರಂತೆ ಈ ಶುಭಸುದ್ದಿಯಲ್ಲಿ ಒಂದು ಆಶ್ಚರ್ಯಕರ ವಿಷಯವೇನೆಂದರೆ, ಬರುವ ಹಣದ ಮೊತ್ತವನ್ನು ಮೊದಲೇ ತಿಳಿಸಲಾಗಿತ್ತು, ಒಂದು ನಿರ್ದಿಷ್ಟ ಮೊತ್ತವನ್ನು ಮೊದಲೇ ತಿಳಿಸುವುದು ಭವಿಷ್ಯವನ್ನು ಬಲ್ಲ ಅಲ್ಲಾಹನ ವಿಶಿಷ್ಟ ಲಕ್ಷಣವಾಗಿದೆ, ಬೇರೆ ಯಾರ ಕೆಲಸವೂ ಅಲ್ಲ." ಒಂದು ನಿರ್ದಿಷ್ಟ ಮೊತ್ತದ ಹಣ ಬರುತ್ತದೆ ಎಂದು ಮೊದಲೇ ತಿಳಿಸುವುದು ಸಾಮಾನ್ಯ ವಿಷಯವಲ್ಲ. ಎರಡನೇ ಆಶ್ಚರ್ಯಕರ ವಿಷಯವೇನೆಂದರೆ, ಈ ಮೊತ್ತವು ನಿರೀಕ್ಷಿತ ರೀತಿಯಲ್ಲಿರಲಿಲ್ಲ, ಅಂದರೆ ಮೊದಲೇ ಯಾವುದೇ ಕಲ್ಪನೆಯೂ ಇರಲಿಲ್ಲ. ಏಕೆಂದರೆ ನಿಗದಿತ ಪುಸ್ತಕಕ್ಕೂ ಈ ಮೊತ್ತಕ್ಕೂ ಯಾವುದೇ ಸಂಬಂಧವಿರಲಿಲ್ಲ. ಹಾಗಾಗಿ ಈ ಅದ್ಭುತಗಳ ಕಾರಣದಿಂದಾಗಿಯೇ ಈ ದಿವ್ಯವಾಣಿಯನ್ನು ಅದು ನಡೆಯುವ ಮುನ್ನವೇ ಕೆಲವು ಆರ್ಯರಿಗೆ ತಿಳಿಸಲಾಗಿತ್ತು. ನಂತರ 10 ಸೆಪ್ಟೆಂಬರ್ 1883ರಂದು ಮೂರನೇ ಬಾರಿ ಕಟ್ಟುನಿಟ್ಟಾಗಿ ದಿವ್ಯವಾಣಿಯಾಯಿತು, 'ಇಪ್ಪತ್ತೊಂದು ರೂಪಾಯಿಗಳು ಬಂದಿವೆ', ಈ ದಿವ್ಯವಾಣಿಯಿಂದ ಇಂದು ಈ ಭವಿಷ್ಯವಾಣಿ ಪೂರ್ಣಗೊಳ್ಳುತ್ತದೆ ಎಂದು ಅರ್ಥವಾಯಿತು. ಅದರಂತೆ ದಿವ್ಯವಾಣಿಯಾದ ನಂತರ ಬಹುಶಃ ಮೂರು ನಿಮಿಷಗಳಿಗಿಂತ ಸ್ವಲ್ಪ ಹೆಚ್ಚು ಸಮಯ ಕಳೆದಿಲ್ಲದಿರಬಹುದು, ವಝೀರ್ ಸಿಂಗ್ ಎಂಬ ರೋಗಿಯೊಬ್ಬನು ಬಂದನು ಮತ್ತು ಅವನು ಬಂದ ತಕ್ಷಣ ಒಂದು ರೂಪಾಯಿಯನ್ನು ಕಾಣಿಕೆಯಾಗಿ ನೀಡಿದನು. ಚಿಕಿತ್ಸೆ ಮಾಡುವುದು ನನ್ನ ವೃತ್ತಿಯಲ್ಲದಿದ್ದರೂ, ಆಕಸ್ಮಿಕವಾಗಿ ಯಾರಾದರೂ ರೋಗಿ ಬಂದರೆ, ಔಷಧ ನೆನಪಿದ್ದರೆ ಕೇವಲ ಪುಣ್ಯದ ಉದ್ದೇಶಕ್ಕಾಗಿ ದೇವನಿಗಾಗಿ ನೀಡಲಾಗುತ್ತಿತ್ತು, ಅವನಿಂದ ರೂಪಾಯಿಯನ್ನು ತೆಗೆದುಕೊಳ್ಳಲಾಯಿತು ಏಕೆಂದರೆ ತಕ್ಷಣವೇ ಇದು ಆ ಭವಿಷ್ಯವಾಣಿಯ ಒಂದು ಭಾಗ ಎಂದು ಹೊಳೆಯಿತು.' ನಂತರ ಅಂಚೆ ಕಚೇರಿಗೆ ಒಬ್ಬ ವಿಶ್ವಾಸಾರ್ಹ ವ್ಯಕ್ತಿಯನ್ನು ಕಳುಹಿಸಿದೆ, ಬಹುಶಃ ಎರಡನೇ ಭಾಗವು ಅಂಚೆ ಕಚೇರಿಯ ಮೂಲಕ ಪೂರ್ಣಗೊಳ್ಳಬಹುದೆಂದು. ಅಂಚೆ ಕಚೇರಿಯಿಂದ ಪೋಸ್ಟ್ ಮಾಸ್ಟರ್ (ಅವನು ಹಿಂದೂ ಆಗಿದ್ದನು), 'ನನ್ನ ಬಳಿ ಕೇವಲ ಐದು ರೂಪಾಯಿಗಳ ಮನಿ ಆರ್ಡರ್ ಮಾತ್ರ ಬಂದಿದೆ, ಅದರ ಜೊತೆ ಒಂದು ಕಾರ್ಡ್ ಕೂಡ ಇದೆ, ಅದು ಡೇರಾ ಗಾಝಿ ಖಾನ್‌ನಿಂದ ಬಂದಿದೆ. ಹಾಗಾಗಿ ಇನ್ನೂ ನನ್ನ ಬಳಿ ಹಣವಿಲ್ಲ, ಬಂದಾಗ ಕೊಡುತ್ತೇನೆ' ಎಂದು ಉತ್ತರಿಸಿದನು. ಈ ಸುದ್ದಿ ಕೇಳಿ ಬಹಳ ಆಶ್ಚರ್ಯವಾಯಿತು ಮತ್ತು ವಿವರಿಸಲಾಗದಷ್ಟು ವ್ಯಾಕುಲತೆ ಉಂಟಾಯಿತು. ಏಕೆಂದರೆ ಇಲ್ಲಿ ಅವರು ಮುಸ್ಲಿಮೇತರರ ಮುಂದೆ ಇಸ್ಲಾಮಿನ ಸತ್ಯತೆಯನ್ನು ಸಾಬೀತುಪಡಿಸಲು ಈ ಭವಿಷ್ಯವಾಣಿಯನ್ನು ವಿವರಿಸುತ್ತಿದ್ದರು. 'ನನಗೆ ಬಹಳ ವ್ಯಾಕುಲತೆ ಉಂಟಾಯಿತು, ಹಾಗಾಗಿ ನಾನು ಅದೇ ಚಿಂತೆಯಲ್ಲಿ ತಲೆತಗ್ಗಿಸಿ ಕುಳಿತಿದ್ದನು, ಐದು ಮತ್ತು ಒಂದು ಸೇರಿ ಆರಾಯಿತು, ಈಗ ಇಪ್ಪತ್ತೊಂದು ಹೇಗಾಗುವುದು, ಹೇ ದೇವನೇ, ಇದೇನಾಯಿತು? ಎಂಬ ಆಲೋಚನೆಯಲ್ಲಿದ್ದೆ. ಅದೇ ಧ್ಯಾನದಲ್ಲಿದ್ದಾಗ ಇದ್ದಕ್ಕಿದ್ದಂತೆ ಈ ದಿವ್ಯವಾಣಿಯಾಯಿತು: ಇಪ್ಪತ್ತೊಂದು ಬಂದಿವೆ, ಇದರಲ್ಲಿ ಯಾವುದೇ ಸಂದೇಹವಿಲ್ಲ. ಈ ದಿವ್ಯವಾಣಿಯಾಗಿ ಮಧ್ಯಾಹ್ನವೂ ಕಳೆದಿಲ್ಲ, ಅದೇ ದಿನ ಪೋಸ್ಟ್ ಮಾಸ್ಟರ್‌ನ ಮೊದಲ ಹೇಳಿಕೆಯ ಸುದ್ದಿಯನ್ನು ಕೇಳಿದ್ದ ಆರ್ಯನೊಬ್ಬನು ಅಂಚೆ ಕಚೇರಿಗೆ ಹೋದನು. ಪೋಸ್ಟ್ ಮಾಸ್ಟರ್ ಅವನಿಗೆ ಸ್ವಲ್ಪ ಕಷ್ಟಪಟ್ಟು, ವಾಸ್ತವದಲ್ಲಿ ಇಪ್ಪತ್ತು ರೂಪಾಯಿಗಳು ಬಂದಿವೆ, ಮೊದಲು ನನ್ನ ಬಾಯಿಂದ ಆಕಸ್ಮಿಕವಾಗಿ ಐದು ರೂಪಾಯಿಗಳು ಎಂದು ಬಂದುಬಿಟ್ಟಿತ್ತು ಎಂದು ತಿಳಿಸಿದನು. ಅದರಂತೆ ಅದೇ ಆರ್ಯನು ಇಪ್ಪತ್ತು ರೂಪಾಯಿಗಳ ಜೊತೆಗೆ ಮುನ್ಷಿ ಇಲಾಹಿ ಬಕ್ಷ್ ಸಾಹಿಬ್ ಅಕೌಂಟೆಂಟ್‌ರ ಕಡೆಯಿಂದ ಬಂದಿದ್ದ ಒಂದು ಕಾರ್ಡನ್ನು ಕೂಡ ತಂದನು. ಆ ಕಾರ್ಡ್ ಮನಿ ಆರ್ಡರ್ ಕಾಗದಕ್ಕೆ ಲಗತ್ತಿಸಿರಲಿಲ್ಲ ಎಂಬುದು ಕೂಡ ತಿಳಿಯಿತು, ಹಣ ಬಂದಿತ್ತು ಎಂಬುದೂ ತಿಳಿಯಿತು. ಮುನ್ಷಿ ಇಲಾಹಿ ಬಕ್ಷ್ ಸಾಹಿಬ್‌ರ ಅಂಚೆ ಕಚೇರಿಯ ರಸೀದಿಯ ಉಲ್ಲೇಖವಿದ್ದ ಪತ್ರದಿಂದ, ಮನಿ ಆರ್ಡರ್ 6 ಸೆಪ್ಟೆಂಬರ್ 1883 ರಂದು–ಅಂದರೆ ದಿವ್ಯವಾಣಿಯಾದ ಅದೇ ದಿನ–ಖಾದಿಯಾನಿಗೆ ತಲುಪಿತ್ತು ಎಂಬುದೂ ತಿಳಿಯಿತು. ಹೀಗೆ ಪೋಸ್ಟ್ ಮಾಸ್ಟರ್‌ನ ಎಲ್ಲ ಹೇಳಿಕೆಗಳು ಸುಳ್ಳೆಂದು ಸಾಬೀತಾಯಿತು ಮತ್ತು ಭವಿಷ್ಯವನ್ನು ಬಲ್ಲ ಅಲ್ಲಾಹನ ಎಲ್ಲ ಹೇಳಿಕೆಗಳು ಸತ್ಯವೆಂದು ಸಾಬೀತಾಯಿತು. ಹಾಗಾಗಿ ಆ

ಶುಭ ದಿನದ ನೆನಪಿಗಾಗಿ ಒಂದು ರೂಪಾಯಿಯ ಸಿಹಿತಿಂಡಿಯನ್ನು ತರಿಸಿ ಮಾರುಕಟ್ಟೆಯವರಿಗೂ ಹಂಚಲಾಯಿತು.' ಈ ಸಂತೋಷದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಆರ್ಯರಿಗೆ ಸಂತೋಷದಲ್ಲಿ ಸಿಹಿತಿಂಡಿಯನ್ನೂ ತಿನಿಸಿದರು. 'ಫಲ್‌ಹಮ್ದುಲಿಲ್ಲಾಹಿ ಅಲಾ ಆಲಾಯಿಹಿ ವ ನಅಮಾಯಿಹಿ ವ ಝಾಹಿರಿಹಾ ವ ಬಾತಿನಿಹಾ.' (ಅಲ್ಲಾಹನ ಪ್ರಕಟವಾದ ಮತ್ತು ಗುಪ್ತವಾದ ಎಲ್ಲ ಅನುಗ್ರಹಗಳು ಮತ್ತು ಒಳಿತುಗಳಿಗಾಗಿ ಎಲ್ಲ ಪ್ರಶಂಸೆಗಳು ಅಲ್ಲಾಹನಿಗೆ ಸಲ್ಲುತ್ತವೆ). ಅಲ್ಲಾಹನ ಪ್ರಕಟವಾದ ಮತ್ತು ಗುಪ್ತವಾದ ಎಲ್ಲ ಅನುಗ್ರಹಗಳಿಗೂ ಅಲ್ಲಾಹನೇ ಎಲ್ಲ ರೀತಿಯ ಪ್ರಶಂಸೆ ಮತ್ತು ಸ್ತುತಿಗೆ ಅರ್ಹನಾಗಿದ್ದಾನೆ.

(ಬರಾಹೀನೆ ಅಹ್ಮದಿಯಾ, ಭಾಗ–4, ರೂಹಾನಿ ಖಝಾಯಿನ್, ಸಂಪುಟ–1, ಪುಟ–623–626, ಅಡಿಟಿಪ್ಪಣಿ ಸಂಖ್ಯೆ–3)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನನ್ನ ದೃಷ್ಟಾಂತಗಳು ಪ್ರಕಟವಾಗದ ಯಾವ ಸಮುದಾಯ ಕೂಡ ಇಲ್ಲ, ನನ್ನ ನಿದರ್ಶನಗಳಿಗೆ ಸಾಕ್ಷಿಯಾಗದ ಯಾವ ಪಂಗಡವೂ ಇಲ್ಲ. ಈ ನಿದರ್ಶನಗಳ ಸಾಕ್ಷಿಗಳು ಹತ್ತು ಕೋಟಿ ಎಂದು ಹೇಳಿದರು ಕೂಡ ಅದರಲ್ಲಿ ಅತಿಶಯೋಕ್ತಿಯಿಲ್ಲ. ಆದರೆ ವಿರೋಧಿಗಳ ಸ್ಥಿತಿಯನ್ನು ಕಂಡು ಅಳು ಬರುತ್ತದೆ, ಏಕೆಂದರೆ ಅವರು ಯಾವುದೇ ಪ್ರಯೋಜನವನ್ನು ಪಡೆದುಕೊಳ್ಳಲಿಲ್ಲ. ಒಂದು ವೇಳೆ ಇವರಿಗೆ ತೋರಿಸಲಾದ ಈ ದೃಷ್ಟಾಂತಗಳನ್ನು ಹಝ್ರತ್ ಈಸಾ ಬಿನ್ ಮರ್ಯಮ್(ಅ)ರ ಕಾಲದಲ್ಲಿ ಯಹೂದಿಯರಿಗೆ ತೋರಿಸಿರುತ್ತಿದ್ದರೆ "ಝುರಿಬತ್ ಅಲೈಹಿಮುರ್ರಿಲ್ಲತು" (ಅವರ ಮೇಲೆ ಅಪಮಾನ ಮತ್ತು ಬಡತನದ ಮುದ್ರೆ ಒತ್ತಲಾಯಿತು) ಎಂಬುದಕ್ಕೆ ಅವರು ಗುರಿಯಾಗುತ್ತಿರಲಿಲ್ಲ. ಲೂತ್(ಅ)ರ ಜನಾಂಗವು ಈ ನಿದರ್ಶನಗಳನ್ನು ನೋಡಿದ್ದರೆ, ಭೀಕರ ಭೂಕಂಪದಿಂದಾಗಿ ನೆಲದಡಿ ಹೂತುಹೋಗುತ್ತಿರಲಿಲ್ಲ. ಆದರೆ ಕಲ್ಲುಗಳಿಗಿಂತಲೂ ಕಠಿಣವೆಂದು ಸಾಬೀತಾದ ಆ ಹೃದಯಗಳ ಬಗ್ಗೆ ದುಃಖವಾಗುತ್ತದೆ; ಪ್ರತಿಯೊಂದು ಕತ್ತಲೆಗಿಂತಲೂ ಅವರ ಹೃದಯದ ಕತ್ತಲೆ ಹೆಚ್ಚಾಯಿತು. ವಾಸ್ತವವೇನೆಂದರೆ, ಕಾಲವು ಲೌಕಿಕ ಸಾಧನಗಳಲ್ಲಿ ಹೇಗೆ ಪ್ರಗತಿ ಸಾಧಿಸಿದೆಯೋ, ಅದೇ ರೀತಿ ಸತ್ಯನಿಷೇಧ ಮತ್ತು ವಿಶ್ವಾಸಹೀನತೆಯಲ್ಲೂ ಪ್ರಗತಿ ಸಾಧಿಸಿದೆ. ಹಾಗಾಗಿ ಈ ಪ್ರಗತಿ ಹೊಂದಿದ ಕುಫ್ರ್, ತಮ್ಮ ಮೇಲೆ ಯಾವುದೇ ಸಾಮಾನ್ಯ ಶಿಕ್ಷೆ ಇಳಿಯದಿರಲಿ, ಬದಲಾಗಿ ಪ್ರಪಂಚದ ಆರಂಭದಿಂದ ಇಂದಿನವರೆಗೆ ಎಂದಿಗೂ ಇಳಿಯದಂತಹ ಶಿಕ್ಷೆ ಇಳಿಯಲಿ ಎಂದು ಬಯಸುತ್ತದೆ. ಏನೇ ಆಗಲಿ, ನಾವು ದೇವನಿಗೆ ಸಾವಿರ ಸಾವಿರ ಕೃತಜ್ಞತೆ ಸಲ್ಲಿಸುತ್ತೇವೆ, ವಿರೋಧಿಗಳು ಯಾವ ಬೆಳಕನ್ನು ಸ್ವೀಕರಿಸದೆ ಕುರುಡರಾಗುಳಿದರೋ, ಅದೇ ಬೆಳಕು ನಮ್ಮ ದೃಷ್ಟಿ ಮತ್ತು ಜ್ಞಾನದ ಹೆಚ್ಚಳಕ್ಕೆ ಕಾರಣವಾಯಿತು." (ಹಖೀಖತುಲ್ ವಹೀ, ರೂಹಾನಿ ಖಝಾಯಿನ್, ಸಂಪುಟ–22, ಪುಟ–312)

'ಹಖೀಖತುಲ್ ವಹೀ'ಯಲ್ಲಿ ಅವರು ಇದನ್ನು ಬರೆದಿದ್ದಾರೆ.

ಅಲ್ಲಾಹನು ನಮಗೆ ಕೃತಜ್ಞತೆಯ ನೈಜ ಅರಿವನ್ನು ಕರುಣಿಸುವುದರೊಂದಿಗೆ, ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸರ ಹಝ್ರತ್ ಮಸೀಹ್ ಮೌಊದ್(ಅ)ರ ಬೈಅತ್ ಮಾಡುವ ಮೂಲಕ ನಮಗೆ ನೈಜ ಬೆಳಕು, ದೃಷ್ಟಿ ಮತ್ತು ಜ್ಞಾನವನ್ನು ಸಹ ದಯಪಾಲಿಸಲಿ.

----------*****----------

*(ಪುಟ ಸಂಖ್ಯೆ 13ರ ಉಳಿದ ಭಾಗ)*

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಕನಸಿನಲ್ಲಿ ಅವರಿಗೆ ಈ ಹೆಸರನ್ನು ನೀಡಿದರು, ಅದರ ನಂತರ ಈ ಹೆಸರನ್ನು ಇಡಲಾಯಿತು. ಅವರು ತಮ್ಮ ಜೀವನದಲ್ಲಿ ಬಹಳಷ್ಟು ಕಷ್ಟಗಳನ್ನು ನೋಡಿದ್ದಾರೆ, ಆದರೆ ಎಂದಿಗೂ ಯಾವುದೇ ಕಷ್ಟವನ್ನು ವ್ಯಕ್ತಪಡಿಸಲಿಲ್ಲ ಮತ್ತು ಯಾವಾಗಲೂ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. ಕೊನೆಯ ಕಾಯಿಲೆಯಲ್ಲೂ ನಮ್ಮ ಬಗ್ಗೆ ಕಾಳಜಿ ವಹಿಸಿದರು. ನಾನು ಆಸ್ಪತ್ರೆಯಲ್ಲಿ ಅಥವಾ ಮನೆಯಲ್ಲಿ ಅವರಿಗಾಗಿ ಎಚ್ಚರವಾಗಿದ್ದರೆ, 'ಮಲಗು' ಎಂದು ಹೇಳುತ್ತಿದ್ದರು. ನಾನು ಮಲಗಿದ್ದಾಗ ಸ್ವತಃ ಎಬ್ಬಿಸುತ್ತಿರಲಿಲ್ಲ, ಬದಲಾಗಿ ನಾನು ಎಚ್ಚರಗೊಳ್ಳುವವರೆಗೆ ಕಾಯುತ್ತಿದ್ದರು, ಮತ್ತು ನಂತರ ನನಗೆ ಕೆಲಸ ಹೇಳುತ್ತಿದ್ದರು."

ನಂತರ ಮಗ ಬರೆಯುತ್ತಾನೆ: "ಅವರು ತಮ್ಮ ಸಂತೋಷವನ್ನು ತ್ಯಾಗ ಮಾಡಿ ಇತರರ ಸಂತೋಷಕ್ಕೆ ಪ್ರಾಮುಖ್ಯತೆ ನೀಡಿದರು ಮತ್ತು ವಕ್ಫ್ ಝಿಂದಗಿಯವರನ್ನು ಬಹಳ ಗೌರವಿಸುತ್ತಿದ್ದರು." ಅದೇ ರೀತಿ ಅವರ ಕಿರಿಯ ಮಗ, ಎರಡನೆಯವನಾದ ಹಾಶಿರ್, ಬರೆಯುತ್ತಾನೆ: ಅವನು ಕೂಡ ಮೊದಲ ಮಗ ಬರೆದ ಮಾತುಗಳನ್ನೇ ಪುನರಾವರ್ತಿಸುತ್ತಿದ್ದಾನೆ. "ಅಜ್ಜಿಯಂತೆ ವಿಶಾಲ ಹೃದಯವನ್ನು ಹೊಂದಿದ್ದರು ಮತ್ತು ಬಡವರ ಮೇಲೆ ಹಣ ಖರ್ಚು ಮಾಡುವಲ್ಲಿ ಎಂದಿಗೂ ಹಿಂಜರಿಯುತ್ತಿರಲಿಲ್ಲ. ನನಗೂ ಹೇಳುತ್ತಿದ್ದರು, ನೀನು ಅಧಿಕೃತವಾಗಿ ವಕ್ಫ್ ಮಾಡಿಲ್ಲದಿದ್ದರೂ, ಧರ್ಮದ ಸೇವೆ ಮಾಡು. ಮತ್ತು ನಾನು ಜರ್ಮನಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಹೇಳಿದಾಗ, ಅವರು ಬಹಳ ಸಂತೋಷಪಟ್ಟರು."

ಅಲ್ಲಾಹನು ಅಝೀಝಾಳೊಂದಿಗೆ ಕ್ಷಮೆ ಮತ್ತು ಕರುಣೆಯಿಂದ ವರ್ತಿಸಲಿ, ಸ್ಥಾನಮಾನಗಳನ್ನು ಉನ್ನತಗೊಳಿಸಲಿ.

ಮೂರನೇ ಜನಾಝಾದ ಉಲ್ಲೇಖ, ಸನ್ಮಾನ್ಯ ರಶೀದ್ ಅಹ್ಮದ್ ಅಯಾಝ್ ಸಾಹಿಬ್‌ರದ್ದು. ಅವರು ಸದರ್ ಅಂಜುಮನ್ ಅಹ್ಮದಿಯಾದ ಪೆನ್ಷನರ್ ಆಗಿದ್ದರು. ಇತ್ತೀಚೆಗೆ 86ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಕೃಪೆಯಿಂದ ಮೂಸಿ ಆಗಿದ್ದರು. ಅಗಲಿದವರಲ್ಲಿ ಪತ್ನಿಯಲ್ಲದೆ ಇಬ್ಬರು ಪುತ್ರಿಯರು ಮತ್ತು ನಾಲ್ವರು ಪುತ್ರರು ಸೇರಿದ್ದಾರೆ. ಅವರ ಒಬ್ಬ ಮಗ ತಾಹಿರ್ ಅಹ್ಮದ್ ಝಫರ್ ಸಾಹಿಬ್ ಮುರಬ್ಬಿ ಆಗಿದ್ದಾರೆ ಘಾನಾದ ಜಾಮಿಯತುಲ್ ಮುಬಶ್ಶಿರಿನ್‌ನ ಉಪ ಪ್ರಾಂಶುಪಾಲರಾಗಿದ್ದಾರೆ. ತಮ್ಮ ಜವಾಬ್ದಾರಿಗಳ ಕಾರಣದಿಂದ ಸೇವಾ ಕ್ಷೇತ್ರದಲ್ಲಿದ್ದಿದ್ದರಿಂದ ತಮ್ಮ ತಂದೆಯ ಜನಾಝಾದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೂ ತಾಳ್ಮೆ ಮತ್ತು ಧೈರ್ಯವನ್ನು ಕರುಣಿಸಲಿ. ಇದೇ ಮುರಬ್ಬಿ ಸಾಹಿಬ್ ಬರೆಯುತ್ತಾರೆ: "ನಮ್ಮ ಕುಟುಂಬಕ್ಕೆ ಅಹ್ಮದಿಯತ್ ನಮ್ಮ ಮುತ್ತಜ್ಜ, ಅಬ್ಸಾರ್ ಚೂರ್‌ನ ಮಕ್ರಾಮ್ ಮಿಯಾನ್ ಅಲ್ಲಾ ದಿತಾ ಸಾಹಿಬ್‌ರ ಮೂಲಕ ಬಂದಿತು, ನಂತರ ಅವರ ಕುಟುಂಬದಲ್ಲಿ ಅಹ್ಮದಿಯತ್ ಹರಡಿತು. ರಶೀದ್ ಅಯಾಝ್ ಸಾಹಿಬ್ ಅಹ್ಮದಿಯಾದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು, ನಿವೃತ್ತಿಯ ನಂತರ ಬೇರೆ ಕೆಲಸಗಳನ್ನೂ ಮಾಡಿದರು. ನಿಯಮಿತವಾಗಿ ನಫಲ್ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು, ಐದು ಹೊತ್ತಿನ ನಮಾಝ್‌ಗಳನ್ನು ತಪ್ಪದೆ ನಿರ್ವಹಿಸುತ್ತಿದ್ದರು. ಝಿಕ್ರ್ ಬಹಳ ಹೆಚ್ಚಾಗಿ ಮಾಡುತ್ತಿದ್ದರು. ಪ್ರಾರ್ಥನೆಗಳನ್ನು ಬಹಳವಾಗಿ ಮಾಡುತ್ತಿದ್ದರು. ಖಿಲಾಫತಿನ ಮೇಲೆ ಆಳವಾದ ಭಕ್ತಿ ಹೊಂದಿದ್ದ ವ್ಯಕ್ತಿಯಾಗಿದ್ದರು. ಪವಿತ್ರ ಖುರ್‌ಆನನ್ನು ನಿಯಮಿತವಾಗಿ ಪಠಿಸುತ್ತಿದ್ದರು. ಚಂದಾಗಳಲ್ಲಿ ಬಹಳ ನಿಯಮಿತರಾಗಿದ್ದರು. ಅದರ ಸಂಪೂರ್ಣ ದಾಖಲೆಯನ್ನು ಇಡುತ್ತಿದ್ದರು. ಮೂಸಿಯಾಗಿದ್ದರಿಂದ, ತಮ್ಮ ಜೀವಿತಾವಧಿಯಲ್ಲೇ ಹಿಸ್ಸಾ ಜಾಯಿದಾದ್ ಪಾವತಿಸಿದ್ದರು." ಅಲ್ಲಾಹನು ಅವರೊಂದಿಗೆ ಕ್ಷಮೆ ಮತ್ತು ಕರುಣೆಯಿಂದ ವರ್ತಿಸಲಿ.

----------*****----------



**ಓದುಗರೇ! ದಯವಿಟ್ಟು ಗಮನಹರಿಸಿ**
**ಬದರ್ ವಾರಪತ್ರಿಕೆಯ ಸಹಾಯಕ್ಕಾಗಿ ಮನವಿ**

**ಬದರ್ ವಾರಪತ್ರಿಕೆ**ಗೆ ಈ ವಿಶಿಷ್ಟ ಗೌರವ ಲಭಿಸಿದೆ: ಇದು ಯುಗದ ದೈವಿಕವಾಗಿ ನಿಯುಕ್ತರಾದವರು, ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರ ಸತ್ಯಸೇವಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಆಶ್ರಯ ಮತ್ತು ಪೋಷಣೆಯಲ್ಲಿ ಬೆಳೆದು ಬಂದ ಪತ್ರಿಕೆಯಾಗಿದೆ. ಆರಂಭದಿಂದ ಇಂದಿನವರೆಗೂ, ಮೊದಲು ನಬುವ್ವತ್ (ಪ್ರವಾದಿತ್ವದ) ಮತ್ತು ನಂತರ ಖಿಲಾಫತ್ ಅಲಾ ಮಿನ್‌ಹಾಜೆ ನಬುವ್ವತ್‌ನ (ಪ್ರವಾದಿತ್ವದ ಮಾರ್ಗದರ್ಶನದಂತೆ ನಡೆಯುವ ಖಿಲೀಫಾತ್‌ನ) ಪವಿತ್ರ ನೆರಳಿನಲ್ಲಿ ಈ ಪತ್ರಿಕೆಯು ತನ್ನ ಧಾರ್ಮಿಕ ಪ್ರಚಾರ ಮತ್ತು ನೈತಿಕ–ಆಧ್ಯಾತ್ಮಿಕ ತರಬೇತಿಯ ಕರ್ತವ್ಯಗಳನ್ನು ನಿರಂತರವಾಗಿ ನಿರ್ವಹಿಸುತ್ತಾ ಬಂದಿದೆ. ಈ ಪತ್ರಿಕೆಯ ಮೂಲಕ ಅನೇಕ ಸತ್ಯಾನ್ವೇಷಕ ಮತ್ತು ಸತ್ಯುಲದ ಆತ್ಮಗಳು ಅಹ್ಮದಿಯ್ಯತ್ ಅನ್ನು ಸ್ವೀಕರಿಸಿ ಅದರ ಅನುಯಾಯಿಗಳಾದವು. ಈ ಪತ್ರಿಕೆಯ ಮೂಲಕ ಅಹ್ಮದಿಯ್ಯತ್‌ನ ಖಿಲೀಫರ ಮಾರ್ಗದರ್ಶನಗಳು ಮತ್ತು ಉಪದೇಶಗಳ ಬೆಳಕಿನಲ್ಲಿ ಅಹ್ಮದಿ ಕುಟುಂಬಗಳ ಧಾರ್ಮಿಕ ಹಾಗೂ ನೈತಿಕ ತರಬೇತಿ ನಡೆಯುತ್ತಿದೆ. ಮುಂದೆಯೂ ಸಹ, ದೇವರ ಇಚ್ಛೆಯಿದ್ದರೆ, ಈ ಸೇವೆ ನಿರಂತರವಾಗಿ ಮುಂದುವರಿಯಲಿದೆ.

ಪತ್ರಿಕೆಯ ತಯಾರಿ, ಮುದ್ರಣ, ಪ್ರಕಟಣೆ, ಪ್ಯಾಕಿಂಗ್ ಮತ್ತು ಓದುಗರಿಗೆ ತಲುಪಿಸುವ ಕಾರ್ಯಗಳಲ್ಲಿ ಬಹಳಷ್ಟು ವೆಚ್ಚವಾಗುತ್ತದೆ. ಕೇವಲ ಸಾಮಾನ್ಯ ಚಂದಾದಾರಿಕೆ ಶುಲ್ಕದಿಂದ ಈ ಎಲ್ಲಾ ವೆಚ್ಚಗಳನ್ನು ಪೂರೈಸುವುದು ಸಾಧ್ಯವಿಲ್ಲ. ಆದ್ದರಿಂದ, ಈ ದೈವಿಕವಾಗಿ ನಿಯುಕ್ತರಾದವರ ಪತ್ರಿಕೆಯ ವೆಚ್ಚಗಳನ್ನು ಭರಿಸಲು ಸಹಾಯ ಮಾಡುವ ವಿಶೇಷ ಸಹಾಯಕರ ಅಗತ್ಯ ಅತ್ಯಂತ ತೀವ್ರವಾಗಿದೆ. ಈ ಪತ್ರಿಕೆಗೆ ಸಹಾಯ ಮಾಡುವವರನ್ನು ಪರಮಾತ್ಮನು ಎಂದಿಗೂ ನಿರಾಶೆಗೊಳಿಸುವುದಿಲ್ಲ. ಏಕೆಂದರೆ ಪರಮಾತ್ಮನ ವಾಗ್ದಾನವೇನೆಂದರೆ: **ಇನ್ನಿ ಮುಈನುನ್ ಮನ್ ಇರಾದ ಇಆನತುಕ**– "ನಿನಗೆ ಸಹಾಯ ಮಾಡುವವನಿಗೆ ನಾನು ಸಹಾಯ ಮಾಡುತ್ತೇನೆ." ಈ ಸಹಾಯಕರ ಎಲ್ಲಾ ವ್ಯವಹಾರಗಳ ರಕ್ಷಕನಾಗಿ ಪರಮಾತ್ಮನೇ ಸ್ವತಃ ಇರುವನು. ತನ್ನ ವಾಗ್ದಾನದಂತೆ, ಅವರ ವ್ಯಾಪಾರ, ಉದ್ಯೋಗ, ತೋಟ, ಬೆಳೆ ಮತ್ತು ಸಂಪತ್ತಿನಲ್ಲಿ ಅನೇಕ ಪಟ್ಟು ಹೆಚ್ಚಳ ಮತ್ತು ಸಮೃದ್ಧಿಯನ್ನು ಅನುಗ್ರಹಿಸುವನು, ಇನ್‌ಶಾಅಲ್ಲಾಹ್.

ಆದ್ದರಿಂದ, ಈ ಬರ್ಕತಪೂರ್ಣ ಸೇವೆಯಲ್ಲಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಹಕರಿಸಿ, ಈ ಪತ್ರಿಕೆಯ ಪ್ರಕಟಣೆ ಮತ್ತು ಪ್ರಸಾರವನ್ನು ಮುಂದುವರಿಸಲು ನೆರವಾಗುವಂತೆ ಎಲ್ಲಾ ಸಹೃದಯ ಓದುಗರಲ್ಲಿ ಹೃತ್ಪೂರ್ವಕ ಮನವಿ ಮಾಡಲಾಗಿದೆ.

**ಯಾವುದೇ ರೀತಿಯ ಮಾಹಿತಿ ಅಥವಾ ಮಾರ್ಗದರ್ಶನಕ್ಕಾಗಿ ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರನ್ನು ಸಂಪರ್ಕಿಸಿರಿ.**
**ಸಂಪರ್ಕ ಸಂಖ್ಯೆ: 9815639670**



# ಖುತ್‌ಬ ಜುಮುಅ

## ತವಕ್ಕಲ ಅಲಲ್ಲಾಹ್ ಕುರಿತು ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನ ಚರಿತ್ರೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **04–09–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನು ಹಝ್ರತ್ ಪೈಗಂಬರ್(ಸ)ರನ್ನು ಪರಿಪೂರ್ಣ ಮನುಷ್ಯನನ್ನಾಗಿ ಮಾಡಿ ಇಡೀ ಮಾನವಕುಲಕ್ಕೆ ಅತ್ಯುತ್ತಮ ಮಾದರಿಯನ್ನಾಗಿಸಿದಾಗ, ಪ್ರತಿಯೊಂದು ನೈತಿಕ ಗುಣವನ್ನು ಅವರ ವ್ಯಕ್ತಿತ್ವದಲ್ಲಿ ಹುಟ್ಟುಹಾಕಿ ಅದನ್ನು 'ಶ್ರೇಷ್ಠ ನೈತಿಕತೆ'ಯನ್ನಾಗಿಸಿದ್ದಾನೆ. ತಮ್ಮೊಳಗೆ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಮತ್ತು ನೈತಿಕತೆಯ ಅತ್ಯುನ್ನತ ಮಟ್ಟವನ್ನು ತಲುಪಲು ಬಯಸುವುದಾದರೆ, ಈ ಶ್ರೇಷ್ಠ ಪ್ರವಾದಿಯನ್ನು ಅನುಸರಿಸಬೇಕು, ಮತ್ತು ಇದುವೇ ಅಲ್ಲಾಹನ ಸಂಪ್ರೀತಿಯನ್ನು ಪಡೆಯುವ ಮಾರ್ಗವಾಗಿದೆ ಎಂದು ಸತ್ಯವಿಶ್ವಾಸಿಗಳನ್ನು ಉಪದೇಶಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಅಲ್ಲಾಹನ ಆಜ್ಞೆಯಂತೆ ಪ್ರತಿಯೊಂದು ನೈತಿಕ ಗುಣವನ್ನು ಅತ್ಯುನ್ನತ ಮಟ್ಟಕ್ಕೆ ತಲುಪಿಸಿದ್ದಲ್ಲದೆ, ಸತ್ಯವಿಶ್ವಾಸಿಗಳಿಗೂ ಈ ಉನ್ನತ ಗುಣಮಟ್ಟವನ್ನು ಸಾಧಿಸಲು ಪ್ರಯತ್ನಿಸುವಂತೆ ತಾಕೀತು ಮಾಡಿದ್ದರು. ಇತ್ತೀಚೆಗೆ ನಬಿ(ಸ)ರ ಜೀವನ ಚರಿತ್ರೆಯ ವಿವಿಧ ಮಗ್ಗುಲುಗಳನ್ನು ಪ್ರಸ್ತಾಪಿಸುತ್ತಿರುವುದರಿಂದ, ಇಂದು ನಾನು 'ತವಕ್ಕುಲ್ ಅಲಲ್ಲಾಹ್' (ಅಲ್ಲಾಹನ ಮೇಲಿನ ಭರವಸೆ) ಎಂಬ ವಿಷಯದಲ್ಲಿ ನಬಿ(ಸ)ರ ಜೀವನ ಚರಿತ್ರೆಯ ಮಗ್ಗುಲು, ಅವರ ಸ್ಥಾನಮಾನ, ಸತ್ಯವಿಶ್ವಾಸಿಗಳಿಗೆ ಅವರು ನೀಡಿದ ಉಪದೇಶ ಮತ್ತು ಅವರ ಸ್ವಂತ ಕಾರ್ಯಗಳನ್ನು ವಿವರಿಸುತ್ತೇನೆ.

ಅಲ್ಲಾಹನು 'ತವಕ್ಕುಲ್' ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಉಲ್ಲೇಖಗಳೊಂದಿಗೆ ಮತ್ತು ವಿವಿಧ ಸಂದರ್ಭಗಳಲ್ಲಿ ಆದೇಶಿಸಿದ್ದಾನೆ. ಒಂದು ಕಡೆ ನಬಿ(ಸ)ರನ್ನು ಉದ್ದೇಶಿಸುತ್ತಾ ಅಲ್ಲಾಹನು ಹೀಗೆ ಹೇಳುತ್ತಾನೆ: **"ಯಾ ಅಯ್ಯುಹನ್ನಬಿಯ್ಯು ಇನ್ನಾ ಅರ್‌ಸಲ್‌ನಾಕ ಶಾಹಿದನ್ ವ ಮುಬಶ್ಶಿರನ್ ವ ನಝೀರಾ. ವ ದಾಯಿಅನ್ ಇಲಲ್ಲಾಹಿ ಬಿ ಇಝ್ನಿಹೀ ವ ಸಿರಾಜಮ್ ಮುನೀರಾ. ವ ಬಶ್ಶಿರಿಲ್ ಮುಅ್‌ಮಿನೀನ ಬಿ ಅನ್ನ ಲಹುಮ್–ಮಿನಲ್ಲಾಹಿ ಫಝ್ಲನ್ ಕಬೀರಾ. ವಲಾ ತುತಿಇಲ್ ಕಾಫಿರೀನ ವಲ್ ಮುನಾಫಿಕೀನ ವ ದಅ್‌ಅಝಾಹುಮ್ ವ ತವಕ್ಕಲ್ ಅಲಲ್ಲಾಹ್. ವ ಕಫಾ ಬಿಲ್ಲಾಹಿ ವಕೀಲಾ."** ಅಂದರೆ, ಹೇ ಪ್ರವಾದಿ, ನಾವು ನಿನ್ನನ್ನು ಲೋಕದ ಮೇಲ್ನೋಟಗಾರನನ್ನಾಗಿ, ಸತ್ಯವಿಶ್ವಾಸಿಗಳಿಗೆ ಶುಭಸುದ್ದಿ ನೀಡುವವನನ್ನಾಗಿ, ಸತ್ಯನಿಷೇಧಿಗಳಿಗೆ ಎಚ್ಚರಿಕೆ ನೀಡುವವನನ್ನಾಗಿ, ಅಲ್ಲಾಹನ ಆಜ್ಞೆಯಂತೆ ಅವನ ಕಡೆಗೆ ಕರೆಯುವವನನ್ನಾಗಿ ಹಾಗೂ ಬೆಳಗುವ ಸೂರ್ಯನನ್ನಾಗಿ ಮಾಡಿ ಕಳುಹಿಸಿದ್ದೇವೆ. ಸತ್ಯವಿಶ್ವಾಸಿಗಳಿಗೆ ಅಲ್ಲಾಹನ ಕಡೆಯಿಂದ ಬಹುದೊಡ್ಡ ಅನುಗ್ರಹವಿದೆ ಎಂಬ ಶುಭವಾರ್ತೆ ನೀಡಿರಿ. ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳ ಮಾತನ್ನು ಕೇಳಬೇಡಿರಿ, ಅವರು ನೀಡುವ ತೊಂದರೆಗಳನ್ನು ಕಡೆಗಣಿಸಿರಿ ಮತ್ತು ಅಲ್ಲಾಹನ ಮೇಲೆ ಭರವಸೆ ಇಡಿರಿ; ಸಂರಕ್ಷಕನಾಗಿ ಅಲ್ಲಾಹನು ಸಾಕು.

ಇಲ್ಲಿ ನಬಿ(ಸ)ರಿಗೆ ಶುಭವಾರ್ತೆಯಿರುವಂತೆಯೇ, ಸತ್ಯವಿಶ್ವಾಸಿಗಳಿಗೂ ಒಂದು ಶುಭವಾರ್ತೆಯಿದೆ: ಅವರು ಸತ್ಯವಿಶ್ವಾಸದಲ್ಲಿ ನೆಲೆನಿಂತರೆ, ಅಲ್ಲಾಹನ ಆಜ್ಞೆಗಳನ್ನು ಪಾಲಿಸಿದರೆ ಮತ್ತು ಅವನ ಮೇಲೆ ಸಂಪೂರ್ಣ ಭರವಸೆ ಇಟ್ಟರೆ, ಆಗ ಪ್ರತಿಯೊಂದು ಸಂಕಷ್ಟದ ಸಮಯದಲ್ಲೂ ಅಲ್ಲಾಹನೇ ಅವರಿಗೆ ಸಾಕು.

ನಂತರ ಸತ್ಯವಿಶ್ವಾಸಿಗಳ ಗಮನವನ್ನು ಸೆಳೆಯುತ್ತಾ ಅಲ್ಲಾಹನು ಹೇಳುತ್ತಾನೆ: **"ಅಲ್ಲಾಹು ಲಾ ಇಲಾಹ ಇಲ್ಲಾ ಹೂವ ವ ಅಲಲ್ಲಾಹಿ ಫಲ್ ಯತವಕ್ಕಲಿಲ್ ಮುಅ್‌ಮಿನೂನ್."** ಅಂದರೆ, ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆ ಇಡಬೇಕು.

ಹಾಗಾಗಿ, ಅಲ್ಲಾಹನ ಆರಾಧನೆಯ ಹಕ್ಕನ್ನು ಪೂರೈಸಿದರೆ ಮತ್ತು ಅಲ್ಲಾಹನ ಮೇಲೆ ಭರವಸೆ ಇಟ್ಟರೆ, ಆಗ ನಿದರ್ಶನಗಳನ್ನು ನೋಡುತ್ತಾರೆ. ಇದರ ಅತ್ಯುನ್ನತ ಮಾದರಿಯು ಹಝ್ರತ್‌ಪೈಗಂಬರ್(ಸ)ರ ವ್ಯಕ್ತಿತ್ವದಲ್ಲಿ ನಮಗೆ ಸಿಗುತ್ತದೆ ಮತ್ತು ಕೃಪೆಯಿಂದ ಅವರ ಸಹಾಬಿಯರು ಇದರಿಂದ ಪ್ರಯೋಜನ ಪಡೆದರು ಮತ್ತು ನಮ್ಮ ಮುಂದೆ ಉದಾಹರಣೆಗಳನ್ನು ಪ್ರಸ್ತುತಪಡಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಹಝ್ರತ್ ಪೈಗಂಬರ್(ಸ)ರ ಜೀವನದ ಘಟನೆಗಳನ್ನು ಗಮನಿಸಿದರೆ ಈ ವಿಷಯವು ಅತ್ಯಂತ ಸ್ಪಷ್ಟವಾಗುತ್ತದೆ; ಹಝ್ರತ್ ಪೈಗಂಬರ್(ಸ) ಅತ್ಯುನ್ನತ ಮಟ್ಟದ ನಿಷ್ಠಾವಂತ, ಪರಿಶುದ್ಧ ಮನಸ್ಸಿನವರು, ದೇವನಿಗಾಗಿ ಪ್ರಾಣ ಮುಡಿಪಾಗಿಡುವವರು ಹಾಗೂ ಸೃಷ್ಟಿಗಳ ಭಯ ಮತ್ತು ನಿರೀಕ್ಷೆಗಳಿಂದ ಸಂಪೂರ್ಣವಾಗಿ ಮುಖ ತಿರುಗಿಸಿಕೊಂಡು ಕೇವಲ ದೇವನ ಮೇಲೆಯೇ ಭರವಸೆ ಇಡುವವರಾಗಿದ್ದರು. ಪ್ರವಾದಿಗಳ ಜೀವನದ ಘಟನೆಗಳಲ್ಲಿ ಅಪಾಯದ ಸಂದರ್ಭಗಳಲ್ಲೂ ದೇವನ ಮೇಲೆ ಭರವಸೆಯಿಡುತ್ತಾ ಇಷ್ಟೊಂದು ದೃಢತೆ ಹಾಗೂ ಸ್ಥಿರತೆ ತೋರಿಸಿದ ಮತ್ತು ಬಾಹ್ಯ ಶಿರ್ಕ್ ಹಾಗೂ ಸೃಷ್ಟಿ ಪೂಜೆಯನ್ನು ನಿಷೇಧಿಸಿದ ಉದಾಹರಣೆ ಬೇರೆಲ್ಲೂ ಸಿಗುವುದಿಲ್ಲ."
(ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಇನ್ ಸಂಪುಟ–1, ಪುಟ–111–112)

ಪ್ರವಾದಿಗಳ ಸ್ಥಾನಮಾನವೂ ದೊಡ್ಡದಾಗಿದೆ, ಆದರೆ ಹಝ್ರತ್ ಪೈಗಂಬರ್(ಸ) ತೋರಿಸಿದಂತಹ 'ತವಕ್ಕುಲ್'ನ ಮಾದರಿಗಳು ಅಲ್ಲಿಯೂ ಸಿಗುವುದಿಲ್ಲ.

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ತಬತ್ತುಲ್ ಎಂದರೆ ದೇವನೊಂದಿಗೆ ಹೃದಯವನ್ನು ಜೋಡಿಸಿಡುವುದು ಮತ್ತು ಲೌಕಿಕತೆಯನ್ನು ತ್ಯಜಿಸುವುದು, ಇದರ ಪ್ರಾಯೋಗಿಕ ಮಾದರಿ ಹಝ್ರತ್ ಪೈಗಂಬರ್(ಸ) ಆಗಿರುವರು. ಅವರಿಗೆ ಯಾರ ಹೊಗಳಿಕೆ ಅಥವಾ ನಿಂದನೆಯ ಪರಿವೆ ಇರಲಿಲ್ಲ. ಅವರಿಗೆ ಲೆಕ್ಕವಿಲ್ಲದಷ್ಟು ಸಂಕಷ್ಟಗಳು ಎದುರಾದವು, ಆದರೆ ದೇವನ ಕಡೆಯಿಂದ ಮಾಡಲು ಹೇಳಲಾದ ಕಾರ್ಯದಿಂದ ಅವರನ್ನು ಯಾವುದೇ ಆಮಿಷ ಅಥವಾ ದುರಾಸೆಗೆ ತಡೆಯಲು ಸಾಧ್ಯವಾಗಲಿಲ್ಲ. ಮನುಷ್ಯನು ಈ ಸ್ಥಿತಿಯನ್ನು ತನ್ನೊಳಗೆ ಕಾಣುವವರೆಗೂ ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣನಾಗುವವರೆಗೂ ಎಂದಿಗೂ ನಿರಾತಂಕನಾಗಿರಬಾರದು." ಈ ಸ್ಥಾನಮಾನವನ್ನು ಸಾಧಿಸಲು ಪ್ರಯತ್ನಿಸಬೇಕು. ನಿರಾತಂಕನಾಗಿರಬಾರದು, ಅಲ್ಲಾಹನ ಮೇಲೆ ಭರವಸೆ ಇಡುವ ಈ ಅತ್ಯುನ್ನತ ಮಟ್ಟವನ್ನು ತಲುಪಬೇಕು, ಕೇವಲ ಅಲ್ಲಾಹನ ಅಸ್ತಿತ್ವವೇ ಗುರಿಯಾಗಿರಬೇಕು.

ನಂತರ ಹೇಳುತ್ತಾರೆ: "ಮತ್ತೊಂದು ವಿಷಯ ನೆನಪಿನಲ್ಲಿಡಬೇಕು, ಯಾರು 'ಮುತಬತ್ತಿಲ್' ಆಗಿರುತ್ತಾನೋ, ಅವನು 'ಮುತವಕ್ಕಿಲ್' ಸಹ ಆಗಿರುತ್ತಾನೆ. ಅಂದರೆ, 'ಮುತವಕ್ಕಿಲ್' ಆಗಲು 'ಮುತಬತ್ತಿಲ್' ಆಗಬೇಕು ಎಂಬುದು ಷರತ್ತಾಗಿದೆ. ಅಂದರೆ, ತವಕ್ಕುಲ್ ಮಾಡಬೇಕಾದರೆ, ಅಲ್ಲಾಹನ ಕಡೆಗೆ ವಾಲಿಕೊಳ್ಳುವುದು ಕೂಡ ಅತ್ಯಗತ್ಯವಾಗಿದೆ, ಏಕೆಂದರೆ ಮನುಷ್ಯನು ಎಲ್ಲಿಯ ವರೆಗೆ ಇತರರ ಮೇಲೆ ಭರವಸೆ ಮತ್ತು ಆಧಾರವನ್ನು ಇಟ್ಟಿರುತ್ತಾನೋ, ಅಲ್ಲಿಯ ವರೆಗೆ ಸಂಪೂರ್ಣವಾಗಿ ಅಲ್ಲಾಹನ ಮೇಲೆ ಭರವಸೆ ಇಡಲು ಸಾಧ್ಯವಿಲ್ಲ. ದೇವನತ್ತ ಸಂಪೂರ್ಣವಾಗಿ ವಾಲುವವನು ಲೌಕಿಕತೆಯನ್ನು ಬಿಟ್ಟು ದೇವನೊಂದಿಗೆ ಸಂಬಂಧ ಬೆಳೆಸಿಕೊಳ್ಳುತ್ತಾನೆ.

ಇದು ಸಂಪೂರ್ಣ ತವಕ್ಕಲ್ ಇದ್ದರೆ ಮಾತ್ರ ಸಂಭವಿಸುತ್ತದೆ, ನಮ್ಮ ನಬಿ(ಸ) ಪರಿಪೂರ್ಣ 'ಮುತಬತ್ತಿಲ್' ಆಗಿದ್ದರು ಮತ್ತು ಪರಿಪೂರ್ಣ 'ಮುತವಕ್ಕಿಲ್' ಸಹ ಆಗಿದ್ದರು. ಇದೇ ಕಾರಣದಿಂದಾಗಿ, ಅಷ್ಟೊಂದು ಪ್ರತಿಷ್ಠಿತರು ಮತ್ತು ಜನಾಂಗ–ಗೋತ್ರಗಳ ನಾಯಕರ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಳ್ಳಲಿಲ್ಲ ಮತ್ತು ಅವರ ವಿರೋಧದಿಂದ ಸ್ವಲ್ಪವೂ ಪ್ರಭಾವಿತರಾಗಲಿಲ್ಲ. ಅಲ್ಲಾಹನ ಅಸ್ತಿತ್ವದ ಮೇಲೆ ಅವರಿಗೆ ಒಂದು ಅಸಾಮಾನ್ಯ ನಂಬಿಕೆಯಿತ್ತು, ಅದಕ್ಕಾಗಿಯೇ ನಬಿ(ಸ) ಇಷ್ಟೊಂದು ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಂಡರು ಮತ್ತು ಇಡೀ ಲೋಕದ ವಿರೋಧವನ್ನು ಎದುರಿಸಿದರು, ಅವರ ಅಸ್ತಿತ್ವವನ್ನು ಸ್ವಲ್ಪವೂ ಲೆಕ್ಕಿಸಲಿಲ್ಲ. ಇದು ತವಕ್ಕುಲ್‌ನ ಒಂದು ದೊಡ್ಡ ಮಾದರಿಯಾಗಿದ್ದು, ಇದರ ಉದಾಹರಣೆ ಲೋಕದಲ್ಲಿ ಸಿಗುವುದಿಲ್ಲ. ಏಕೆಂದರೆ ಇದರಲ್ಲಿ ದೇವನಲ್ಲಿ ವಿಶ್ವಾಸ ಕೈಗೊಂಡು ಪ್ರಪಂಚವನ್ನು ವಿರೋಧಿಯನ್ನಾಗಿ ಮಾಡಿಕೊಳ್ಳಲಾಗುತ್ತದೆ. ಆದರೆ, ದೇವನನ್ನು ನೋಡುವವರೆಗೆ, ಇದರ ನಂತರ ಇನ್ನೊಂದು ಬಾಗಿಲು ತೆರೆಯಲಿದೆ ಎಂಬ ನಿರೀಕ್ಷೆಯಿಲ್ಲದವರೆಗೆ ಈ ಸ್ಥಿತಿ ಉಂಟಾಗುವುದಿಲ್ಲ. ಈ ನಿರೀಕ್ಷೆ ಮತ್ತು ನಂಬಿಕೆ ಉಂಟಾದರೆ, ಅವನು ತನ್ನ ಆಪ್ತರನ್ನು ದೇವನ ಹಾದಿಯಲ್ಲಿ ಶತ್ರುಗಳನ್ನಾಗಿ ಮಾಡಿಕೊಳ್ಳುತ್ತಾನೆ. ಏಕೆಂದರೆ ದೇವನು ಇನ್ನೂ ಹೆಚ್ಚು ಸ್ನೇಹಿತರನ್ನು ನೀಡುತ್ತಾನೆ ಎಂದು ಅವನಿಗೆ ತಿಳಿದಿರುತ್ತದೆ. ಆಸ್ತಿಯನ್ನು

ಕಳೆದುಕೊಳ್ಳುತ್ತಾನೆ, ಏಕೆಂದರೆ ಅದಕ್ಕಿಂತ ಉತ್ತಮವಾದುದು ಸಿಗುತ್ತದೆ ಎಂಬ ನಂಬಿಕೆಯಿರುತ್ತದೆ. ಸಾರಾಂಶವೇನೆಂದರೆ, ದೇವನ ಸಂಪ್ರೀತಿಗೆ ಆದ್ಯತೆ ನೀಡುವುದೇ 'ತಬತ್ತುಲ್' ಆಗಿದೆ, ಮತ್ತು ತಬತ್ತುಲ್ ಹಾಗೂ ತವಕ್ಕುಲ್ ಅವಳಿ–ಜವಳಿಗಳಾಗಿವೆ (ಒಂದಕ್ಕೊಂದು ಬೆಸೆದುಕೊಂಡಿವೆ).

ತಬತ್ತುಲ್‌ನ ರಹಸ್ಯವೇ ತವಕ್ಕುಲ್, ಮತ್ತು ತವಕ್ಕುಲ್‌ನ ಷರತ್ತು ತಬತ್ತುಲ್ ಆಗಿದೆ. ಈ ವಿಷಯದಲ್ಲಿ ನಮ್ಮ ಧರ್ಮವು ಇದೇ ಆಗಿದೆ.
(ಮಲ್‌ಫೂಝ್‌ಾತ್, ಸಂಪುಟ–2, ಪುಟ–302, 2022)

ಅಲ್ಲಾಹನ ಕಡೆಗೆ ಸಂಪೂರ್ಣವಾಗಿ ವಾಲಿಕೊಂಡರೆ, ಪ್ರಪಂಚದ ಮೇಲಿನ ಅವಲಂಬನೆಯನ್ನು ಕೊನೆಗೊಳಿಸಿದರೆ ಮಾತ್ರ ನೈಜ ತವಕ್ಕುಲ್‌ನ ಸ್ಥಿತಿ ಉಂಟಾಗುತ್ತದೆ ಮತ್ತು ನಾನು ಹೇಳಿದಂತೆ ಹಾಗೂ ನಮಗೆಲ್ಲರಿಗೂ ತಿಳಿದಿರುವಂತೆ, ಇದರ ಅತ್ಯುನ್ನತ ಉದಾಹರಣೆಯು ನಮ್ಮ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಆಗಿದ್ದಾರೆ." ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಅಲ್ಲಾಹನು ದುರ್ಬಲನೆಂದು ಭಾವಿಸದಿರಿ, ಅವನು ಮಹಾ ಶಕ್ತಿಶಾಲಿಯಾಗಿದ್ದಾನೆ. ಯಾವುದೇ ವಿಷಯದಲ್ಲಿ ನೀವು ಅವನ ಮೇಲೆ ಭರವಸೆ ಇಡುವಾಗ, ಅವನು ಖಂಡಿತವಾಗಿಯೂ ನಿಮಗೆ ಸಹಾಯ ಮಾಡುತ್ತಾನೆ. **ವ ಮನ್ ಯತವಕ್ಕಲ್ ಅಲಲ್ಲಾಹಿ ಫಹುವ ಹಸ್ಬುಹೂ**. (ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ, ಅಲ್ಲಾಹನು ಅವನಿಗೆ ಸಾಕು). ಆದರೆ ಈ ಆಯತ್‌ಗಳ ಮೊದಲ ಸಂಬೋಧಕರು ಧಾರ್ಮಿಕ ಜನರಾಗಿದ್ದರು. ಅವರ ಎಲ್ಲ ಚಿಂತೆಗಳೂ ಕೇವಲ ಧಾರ್ಮಿಕ ವಿಷಯಗಳಿಗಾಗಿಯೇ ಇದ್ದವು ಮತ್ತು ಅವರ ಲೌಕಿಕ ವಿಷಯಗಳು ದೇವನಿಗೆ ಬಿಡಲ್ಪಟ್ಟಿದ್ದವು. ಅದಕ್ಕಾಗಿಯೇ ಅಲ್ಲಾಹನು ಅವರಿಗೆ, ನಾನು ನಿಮ್ಮೊಂದಿಗಿದ್ದೇನೆ ಎಂದು ಸಮಾಧಾನಪಡಿಸಿದನು. ಒಟ್ಟಿನಲ್ಲಿ, ತಖ್ವಿದ ಅನುಗ್ರಹಗಳಲ್ಲಿ ಒಂದೇನೆಂದರೆ, ಧಾರ್ಮಿಕ ಕಾರ್ಯಗಳಿಗೆ ಅಡ್ಡಿಯಾಗುವಂತಹ ಸಂಕಷ್ಟಗಳಿಂದ ಅಲ್ಲಾಹನು ದೇವಭಯವುಳ್ಳವನನ್ನು ಮುಕ್ತಗೊಳಿಸುತ್ತಾನೆ.

ಅದೇ ರೀತಿ ಅಲ್ಲಾಹನು ದೇವಭಯವುಳ್ಳವನಿಗೆ ವಿಶೇಷ ರೀತಿಯಲ್ಲಿ ಜೀವನಾಧಾರವನ್ನು ನೀಡುತ್ತಾನೆ. ಇಲ್ಲಿ ನಾನು 'ಅರಿವಿನ ರಿಝ್ಕ್' ಬಗ್ಗೆ ಹೇಳುತ್ತೇನೆ (ಹಝ್ರತ್ ಮಸೀಹ್ ಮೌಊದ್(ಅ) ಭೌತಿಕ ರಿಝ್ಕ್ ಬಗ್ಗೆ ಹೇಳುತ್ತಿಲ್ಲ, ಬದಲಾಗಿ ಅರಿವಿನ ರಿಝ್ಕ್ ಬಗ್ಗೆ ಹೇಳುತ್ತಿದ್ದಾರೆ). ಹಝ್ರತ್ ಪೈಗಂಬರ್(ಸ) ಅನಕ್ಷರಸ್ಥರಾಗಿದ್ದರೂ (ಉಮ್ಮಿ) ಇಡೀ ಲೋಕವನ್ನು ಎದುರಿಸಬೇಕಾಗಿತ್ತು; ಅದರಲ್ಲಿ ಅಹ್ಲೇ ಕಿತಾಬಿನವರು (ಗ್ರಂಥಾನುಸಾರಿಗಳು), ತತ್ವಜ್ಞಾನಿಗಳು, ಉನ್ನತ ಮಟ್ಟದ ಶೈಕ್ಷಣಿಕ ಅಭಿರುಚಿಯುಳ್ಳವರು ಮತ್ತು ಜ್ಞಾನಿಗಳು ನಬಿ(ಸ)ರ ಎದುರಾಳಿಗಳಾಗಿದ್ದರು; ಆದರೆ ನಬಿ(ಸ)ರಿಗೆ ಎಷ್ಟೊಂದು ಆಧ್ಯಾತ್ಮಿಕ ಅರಿವು ಲಭಿಸಿತೆಂದರೆ, ಅವರೆಲ್ಲರ ಮೇಲೂ ನಬಿ(ಸ) ವಿಜಯಶಾಲಿಯಾದರು ಮತ್ತು ಅವರೆಲ್ಲರ ತಪ್ಪುಗಳನ್ನು ತೋರಿಸಿಕೊಟ್ಟರು. ಇದು ಆಧ್ಯಾತ್ಮಿಕ ರಿಝ್ಕ್ ಆಗಿತ್ತು, ಇದಕ್ಕೆ ಉದಾಹರಣೆಯಿಲ್ಲ." (ಮಲ್‌ಫೂಝ್‌ಾತ್, ಸಂಪುಟ–1, ಪುಟ–11, 2022)

ಈ ಬಗ್ಗೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್(ಸ) ಹೀಗೆ ಹೇಳಿದರು: "ನೀವು ಅಲ್ಲಾಹನ ಮೇಲೆ ಭರವಸೆ ಇರಿಸಬೇಕಾದ ರೀತಿಯಲ್ಲಿ ಭರವಸೆ ಇರಿಸಿದರೆ, ಪಕ್ಷಿಗಳಿಗೆ ಆಹಾರ ನೀಡಲಾಗುವಂತೆಯೇ ನಿಮಗೂ ಆಹಾರ ನೀಡಲಾಗುವುದು. (ಇಲ್ಲಿ ಭೌತಿಕ ರಿಝ್ಕ್ ಬಗ್ಗೆಯೂ ಹೇಳಿದ್ದಾರೆ, ತವಕ್ಕುಲ್ ಮಾಡಿದರೆ ಸಿಗುತ್ತದೆ). ಅವು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಹೊರಡುತ್ತವೆ ಮತ್ತು ಸಂಜೆ ಹೊಟ್ಟೆ ತುಂಬಿಸಿಕೊಂಡು ಮರಳಿ ಬರುತ್ತವೆ." (ಸುನನ್ ಅತ್ತಿಮಿರ್ದ್ಹಿ, ಅಬ್ವಾಬುರ್ರುಹ್ದ್, ಬಾಬ್ ಫೀ ತವಕ್ಕಲ್ ಅಲಲ್ಲಾಹ್, ಹದೀಸ್–2344)

ಹಝ್ರತ್ ಅಬೂದರ್(ರ)ರಿಂದ ವರದಿಯಾಗಿದೆ, ನಬಿ(ಸ) ಹೀಗೆ ಹೇಳಿದರು: "ಲೋಕದ ಬಗ್ಗೆ ನಿರಾಸಕ್ತಿ ಎಂದರೆ, ಹಲಾಲನ್ನು ಹರಾಮ್ ಮಾಡುವುದಾಗಲಿ ಅಥವಾ ಸಂಪತ್ತನ್ನು ವ್ಯರ್ಥ ಮಾಡುವುದಾಗಲಿ ಅಲ್ಲ. ನಮಗೆ ಸಂಪತ್ತಿನ ಬಗ್ಗೆ ಯಾವುದೇ ಆಸಕ್ತಿಯಿಲ್ಲ, ಹಲಾಲ್ ಆದ ವಸ್ತುಗಳನ್ನೂ ಹರಾಮ್ ಎಂದು ಹೇಳುವುದು, ಇಂದಿನ ಕಾಲದ ಕೆಲವು ಪೀರ್–ಫಕೀರರ ರೀತಿಯಂತೆ ಹೇಳುವುದು ಸರಿಯಲ್ಲ. ಬದಲಾಗಿ ಲೋಕದ ಬಗ್ಗೆ ನಿರಾಸಕ್ತಿ ಎಂದರೆ, ನಿಮ್ಮ ಎರಡು ಕೈಗಳಲ್ಲಿ ಇರುವ ವಸ್ತುಗಳಿಗಿಂತ ಹೆಚ್ಚಿನ ಭರವಸೆ ಅಲ್ಲಾಹನ ಕೈಯಲ್ಲಿರುವ ವಸ್ತುವಿನ ಮೇಲೆ ಇರಿಸುವುದಾಗಿದೆ. ಇದು ನಿರಾಸಕ್ತಿಯಾಗಿದೆ, ಅಂದರೆ ನಿಮ್ಮ ಬಳಿ ಇರುವ ಸ್ವಂತ ಸಂಪತ್ತಿಗಿಂತ, ಅಲ್ಲಾಹನ ಬಳಿ ಇರುವ ವಸ್ತುವಿನಿಂದ ನನಗೆ ಹೆಚ್ಚಿನ ಲಾಭ ಸಿಗುತ್ತದೆ ಎಂಬ ನಂಬಿಕೆ ಇರುವುದಾಗಿದೆ. ಕಷ್ಟದ ಪ್ರತಿಫಲದ ಬಗ್ಗೆ ನೀವು ಹೇಗಿರಬೇಕೆಂದರೆ, ನಿಮಗೆ ಕಷ್ಟ ಬಂದರೆ, ಅದು ನಿಮಗಾಗಿ ಉಳಿಯಲಿ ಎಂಬ ಆಸೆ ಹೆಚ್ಚಾಗಿರಬೇಕು.
(ಸುನನ್ ಅತ್ತಿಮಿರ್ದ್ಹಿ, ಅಬ್ವಾಬುರ್ರುಹ್ದ್, ಬಾಬ್ ಮಾಜಾಸ ಫಿರ್ರುಹ್ದ ಫಿದ್ದುನಿಯಾ, ಹದೀಸ್–2340)

ಹಾಗಾಗಿ ಇದು ತವಕ್ಕುಲ್ ಆಗಿದೆ, ಅಂದರೆ ತನ್ನ ಬಳಿ ಇರುವ ವಸ್ತುವಿಗಿಂತಲೂ, ಅಲ್ಲಾಹನು ನನ್ನ ಅಗತ್ಯವನ್ನು ಪೂರೈಸುತ್ತಾನೆ ಎಂಬ ನಂಬಿಕೆ ಇರಬೇಕು. ನನ್ನ ಕೆಲವು ವಸ್ತುಗಳು ನಾಶವಾಗಬಹುದು, ಆದರೆ ಅಲ್ಲಾಹನ ಬಳಿ ಇರುವುದು ಎಂದಿಗೂ ನಾಶವಾಗುವುದಿಲ್ಲ ಮತ್ತು ಅಗತ್ಯಕ್ಕೆ ತಕ್ಕಂತೆ ತವಕ್ಕುಲ್ ಮಾಡುವವನಿಗೆ, ಸತ್ಕಾರ್ಯಗಳನ್ನು ಮಾಡುವವನಿಗೆ ಸಿಗುತ್ತಲೇ ಇರುತ್ತದೆ."

ಹಝ್ರತ್ ಅಮ್ರ್ ಬಿನ್ ಆಸ್(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು, ಆದಮ್‌ನ ಮಗನ ಹೃದಯದಿಂದ ಪ್ರತಿಯೊಂದು ಕಣಿವೆಗೂ ಒಂದೊಂದು ದಾರಿಯಿದೆ. ಯಾವ ವ್ಯಕ್ತಿಯ ಹೃದಯವು ಅದರ ಎಲ್ಲ ದಾರಿಗಳನ್ನು ಅನುಸರಿಸುತ್ತದೆಯೋ, ಅಲ್ಲಾಹನು ಅವನನ್ನು ಯಾವ ಕಣಿವೆಯಲ್ಲಿ ನಡೆಸುತ್ತಾನೋ ಅಥವಾ ನಾಶಮಾಡುತ್ತಾನೋ ಎಂಬ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ, ವಿವಿಧ ದಾರಿಗಳಲ್ಲಿ ನಡೆಯಲು ಅವನಿಗೆ ಅಲ್ಲಾಹನು ಸಾಕು.
(ಸುನನ್ ಇಬ್ನೆ ಮಾಜ್ಜ, ಕಿತಾಬ್ ಅಝ್ಝುಹ್ದ್, ಬಾಬ್ ಅತ್ತವಕ್ಕುಲ್ ವಲ್ ಯಖೀನ್, ಹದೀಸ್–4166)

ಈ ಹದೀಸ್‌ನ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಇದರ ಅರ್ಥವೇನೆಂದರೆ, ಯಾರು ತನ್ನ ಹೃದಯವನ್ನು ವಿವಿಧ ಆಸೆಗಳು, ಚಿಂತೆಗಳು ಮತ್ತು ಲೌಕಿಕ ಸಮಸ್ಯೆಗಳಿಗೆ ಅಧೀನಗೊಳಿಸುತ್ತಾನೋ ಮತ್ತು ಅವನ ಗಮನವು ಎಲ್ಲೆಡೆ ಹರಿದುಹೋಗುತ್ತದೆಯೋ, ಅಲ್ಲಾಹನಿಗೆ ಅವನ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ. ಅವನು ಯಾವ ಕಣಿವೆಗೆ ಹೋಗಿ ನಾಶವಾಗುತ್ತಾನೋ, ಎಲ್ಲಿ ಬದುಕುತ್ತಾನೋ, ಎಲ್ಲಿ ಸಾಯುತ್ತಾನೋ, ಅಲ್ಲಾಹನಿಗೆ ಅವನ ಬಗ್ಗೆ ಕಾಳಜಿಯಿಲ್ಲ. 'ವ ಮನ್ ಯತವಕ್ಕಲ್ ಅಲಲ್ಲಾಹಿ' ಅಂದರೆ ಅಲ್ಲಾಹನು ಅವನ ವಿವಿಧ ಮತ್ತು ಹಂಚಿಹೋದ ಅಗತ್ಯಗಳು, ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಪೂರೈಸುತ್ತಾನೆ, ಯಾರು ಅಲ್ಲಾಹನ ಕಡೆಗೆ ವಾಲಿಕೊಳ್ಳುತ್ತಾನೋ ಅವನ ಅಗತ್ಯಗಳನ್ನು ಪೂರೈಸುತ್ತಾನೆ. ಈ ಅರ್ಥವು ಈ ವರದಿಯಿಂದಲೂ ಬೆಂಬಲಿತವಾಗಿದೆ: ರಸೂಲುಲ್ಲಾಹ್(ಸ) ಹೇಳಿದರು, ಯಾರು ತನ್ನ ಎಲ್ಲ ಚಿಂತೆಗಳನ್ನು ಕೇವಲ ಒಂದೇ ಚಿಂತೆಯನ್ನಾಗಿ, ಅಂದರೆ ಧರ್ಮದ ಚಿಂತೆಯನ್ನಾಗಿ ಮಾಡುತ್ತಾನೋ, ತನ್ನ ಧರ್ಮ ಏನಾಗಿದೆ ಎಂದು ನೋಡುತ್ತಾನೋ, ಅಲ್ಲಾಹನೊಂದಿಗಿನ ಸಂಬಂಧ ಏನಾಗಿದೆ ಎಂದು ನೋಡುತ್ತಾನೋ, ತನ್ನ ಆಧ್ಯಾತ್ಮಿಕ ಸ್ಥಿತಿ ಏನಾಗಿದೆ ಎಂದು ನೋಡುತ್ತಾನೋ, ಆಗ ಅವನಿಗಾಗಿ ಇಹಲೋಕ ಮತ್ತು ಪರಲೋಕದ ಉಳಿದೆಲ್ಲ ಚಿಂತೆಗಳಿಗೂ ಅಲ್ಲಾಹನೇ ಸಾಕು. (ಮಿಖ್ಯಾತುಲ್ ಮಫ಼್ಾತೀಹ್, ಸಂಪುಟ–9, ಪುಟ–498, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2001)

ಈ ಹದೀಸ್‌ನ ಅರ್ಥ ಇದಾಗಿದೆ.

ಹಝ್ರತ್ ಪೈಗಂಬರ್(ಸ) ತಮ್ಮ ದಿನನಿತ್ಯದ ವ್ಯವಹಾರಗಳಲ್ಲೂ ಅಲ್ಲಾಹನ ಮೇಲಿನ ಭರವಸೆಯನ್ನು ಮುಂದಿಟ್ಟುಕೊಂಡು ಎಷ್ಟೊಂದು ಸೂಕ್ಷ್ಮವಾಗಿ ದುಆ ಮಾಡುತ್ತಿದ್ದರು.

ಹಝ್ರತ್ ಉಮ್ಮು ಸಲ್ಮಾ(ರ) ವರದಿ ಮಾಡುತ್ತಾರೆ: ನಬಿ(ಸ) ತಮ್ಮ ಮನೆಯಿಂದ ಹೊರಡುವಾಗ ಹೀಗೆ ಹೇಳುತ್ತಿದ್ದರು: "ಅಲ್ಲಾಹನ ಹೆಸರಿನೊಂದಿಗೆ, ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟಿನು. ಹೇ ಅಲ್ಲಾಹ್, ನಾವು ಎಡವಿ ಬೀಳುವುದರಿಂದ ಅಥವಾ ದಾರಿ ತಪ್ಪುವುದರಿಂದ, ದೌರ್ಜನ್ಯವೆಸಗುವುದರಿಂದ ಅಥವಾ ನಮ್ಮ ಮೇಲೆ ದೌರ್ಜನ್ಯವೆಸಗಲ್ಪಡುವುದರಿಂದ, ಅಜ್ಞಾನದಿಂದ ವರ್ತಿಸುವುದರಿಂದ ಅಥವಾ ನಮ್ಮೊಂದಿಗೆ ಅಜ್ಞಾನದಿಂದ ವರ್ತಿಸಲ್ಪಡುವುದರಿಂದ ನಿನ್ನಲ್ಲಿ ಆಶ್ರಯ ಯಾಚಿಸುತ್ತೇವೆ." (ಸುನನ್ ತಿರ್ಮಿಝಿ, ಅಬ್ವಾಬುದ್ದಾವಾತ್, ಹದೀಸ್–3427)

ಅದೇ ರೀತಿ ಮತ್ತೊಂದು ವರದಿಯೂ ಇದೆ, ಹಝ್ರತ್ ಬುರೈದಾ(ರ) ವರದಿ ಮಾಡುತ್ತಾರೆ: ನಬಿ(ಸ) ತಮ್ಮ ಮನೆಯಿಂದ ಹೊರಗೆ ಬರುವಾಗ ಹೀಗೆ ಹೇಳುತ್ತಿದ್ದರು: "ಅಲ್ಲಾಹನ ಹೆಸರಿನೊಂದಿಗೆ ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟೆನು, ಅಲ್ಲಾಹನ ಸೌಭಾಗ್ಯದಿಂದಲೇ ಒಳಿತು ಮಾಡುವ ಶಕ್ತಿ ಹಾಗೂ ಕೆಡುಕಿನಿಂದ ಪಾರಾಗುವ ಶಕ್ತಿ ಲಭಿಸುತ್ತದೆ. ಹೇ ಅಲ್ಲಾಹ್, ನಾನು ದಾರಿತಪ್ಪುವುದರಿಂದ ಅಥವಾ ದಾರಿತಪ್ಪಿಸಲ್ಪಡುವುದರಿಂದ, ನಾನು ಎಡವಿ ಬೀಳುವುದರಿಂದ ಅಥವಾ ನನ್ನನ್ನು ಎಡವಿ ಬೀಳುವಂತೆ ಮಾಡಲ್ಪಡುವುದರಿಂದ, ನಾನು ಯಾರ ಮೇಲಾದರೂ ದೌರ್ಜನ್ಯವೆಸಗುವುದರಿಂದ ಅಥವಾ ನನ್ನ ಮೇಲೆ ದೌರ್ಜನ್ಯವೆಸಗಲ್ಪಡುವುದರಿಂದ, ನಾನು ಅಜ್ಞಾನದ ಕೃತ್ಯವೆಸಗುವುದರಿಂದ ಅಥವಾ ನನ್ನೊಂದಿಗೆ ಅಜ್ಞಾನದ ವರ್ತನೆ ತೋರಲ್ಪಡುವುದರಿಂದ, ನಾನು ಯಾರ ಮೇಲಾದರೂ ಅತಿಕ್ರಮಣ ಮಾಡುವುದರಿಂದ ಅಥವಾ ನನ್ನ ವಿರುದ್ಧ ಅತಿಕ್ರಮಣ ಮಾಡಲ್ಪಡುವುದರಿಂದ ನಿನ್ನಲ್ಲಿ ಅಭಯ ಯಾಚಿಸುತ್ತೇನೆ." ಈ ಎಲ್ಲ ವಿಷಯಗಳೂ ಇದರಲ್ಲಿ ಒಳಗೊಂಡಿವೆ.

ಅದೇ ರೀತಿ ಮನೆಗೆ ಪ್ರವೇಶಿಸುವ ದುಆದ ಉಲ್ಲೇಖವೂ ಸಿಗುತ್ತದೆ. ಹಝ್ರತ್ ಅಬೂ ಮಾಲಿಕ್ ಅಶ್‌ಅರಿ(ರ) ವಿವರಿಸಿದರು: ರಸೂಲುಲ್ಲಾಹ್(ಸ) ಹೇಳಿದರು, ಯಾರಾದರೂ ತನ್ನ ಮನೆಗೆ ಪ್ರವೇಶಿಸುವಾಗ ಹೀಗೆ ಹೇಳಬೇಕು:

'ಹೇ ಅಲ್ಲಾಹ್, ನಾನು ನಿನ್ನಲ್ಲಿ ಮನೆಗೆ ಪ್ರವೇಶಿಸುವ ಒಳಿತನ್ನು ಮತ್ತು ಮನೆಯಿಂದ ಹೊರಬರುವ ಒಳಿತನ್ನು ಬೇಡುತ್ತೇನೆ. ಅಲ್ಲಾಹನ ಹೆಸರಿನೊಂದಿಗೆ ನಾವು ಪ್ರವೇಶಿಸುತ್ತೇವೆ ಮತ್ತು ಅಲ್ಲಾಹನ ಹೆಸರಿನೊಂದಿಗೆ ನಾವು ಹೊರಬರುತ್ತೇವೆ ಮತ್ತು ನಮ್ಮ ಪ್ರಭುವಾಗಿರುವ ಅಲ್ಲಾಹನ ಮೇಲೆ ನಾವು ಭರವಸೆ ಇಡುತ್ತೇವೆ.' ನಂತರ ಅವನು ತನ್ನ ಮನೆಯವರಿಗೆ ಸಲಾಮ್ ಮಾಡಬೇಕು. (ಸುನನ್ ಅಬುದಾವುದ್, ಕಿತಾಬುಲ್ ಆದಬ್, ಬಾಬ್ ಮಾ ಯಖೂಲುರ್ರಜುಲ್ ಇಝಾ ದಖಲು ಬೈತಿಹಿ, ಹದೀಸ್–5096)

ಈ ದುಆವನ್ನು ಓದಬೇಕು ಮತ್ತು ನಂತರ ಮನೆಗೆ ಪ್ರವೇಶಿಸಿ ಮನೆಯವರಿಗೆ ಸಲಾಮ್ ಮಾಡಬೇಕು.

ನಂತರ ನಬಿ(ಸ)ರ ತವಕ್ಕುಲ್ ಮತ್ತು ದೇವಭಯದ ಬಗ್ಗೆ ಒಂದು ವರದಿಯಿದೆ. ಹಝ್ರತ್ ಅಬೂಹುರೈರಾ(ರ)ರಿಂದ ವರದಿಯಾಗಿದೆ: ರಸೂಲುಲ್ಲಾಹ್(ಸ) ಹಝ್ರತ್ ಬಿಲಾಲ್(ರ)ರ ಬಳಿಗೆ ತೆರಳಿದರು. ಅವರ ಬಳಿ ಖರ್ಜೂರಗಳ ಒಂದು ರಾಶಿಯನ್ನು ನೋಡಿ ಅವರೊಡನೆ ನಬಿ(ಸ) ಹೀಗೆ ಕೇಳಿದರು: "ಹೇ ಬಿಲಾಲ್ ಇದೇನು?" ಹಝ್ರತ್ ಬಿಲಾಲ್(ರ) ಹೇಳಿದರು: "ಇವು ನಿಮಗಾಗಿ ನಾನು ಕೂಡಿಟ್ಟಿರುವ ಕೆಲವು ಖರ್ಜೂರಗಳಾಗಿವೆ." ನಬಿ(ಸ) ಹೇಳಿದರು: "ಹೇ ಬಿಲಾಲ್, ಪುನರುತ್ಥಾನದ ದಿನದಂದು ಇದರ ಹೊಗೆ ನರಕದಲ್ಲಿ ಏಳಬಹುದೆಂಬ (ಅಂದರೆ ಶಿಕ್ಷೆಗೆ ಕಾರಣವಾಗಬಹುದೆಂಬ) ಭಯ ನಿನಗಿಲ್ಲವೇ? ಹೇ ಬಿಲಾಲ್, ಖರ್ಚು ಮಾಡು ಮತ್ತು ಸಿಂಹಾಸನದ ಒಡೆಯನು ಇರುವಾಗ ಬಡತನದ ಬಗ್ಗೆ ಭಯ ಪಡಬೇಡ. ಅವನ ಮೇಲೆ ಭರವಸೆ ಇಡು." (ಅಲ್‌ಮುಜಮುಲ್ ಅವ್‌ಸತ್, ಭಾಗ–3, ಪುಟ–86, ಹದೀಸ್–2572, ದಾರುಲ್ ಹರ್ಮೈನ್ ಅಲ್‌ಖಾಹಿರಃ)

ಹಝ್ರತ್ ಮಸೀಹ್ ಮೌಊದ್(ಅ) ಈ ಬಗ್ಗೆ ಹೇಳುತ್ತಾರೆ: ಮನುಷ್ಯನು ದೇವನ ಆಜ್ಞೆಗಳ ಪ್ರಕಾರ ನಡೆಯುವಾಗ ಮತ್ತು ದೇವನ ಮೇಲೆ ತನ್ನ ಭರವಸೆಯನ್ನು ಇರಿಸುವಾಗ ಮಾತ್ರ ಅವನ ಈಮಾನ್ ಪ್ರಗತಿ ಹೊಂದಲು ಸಾಧ್ಯ. ಒಮ್ಮೆ ಹಝ್ರತ್ ರಸೂಲ್ ಕರೀಮ್(ಸ) ಬಿಲಾಲ್ ಕೆಲವು ಖರ್ಜೂರಗಳನ್ನು ಒಟ್ಟುಗೂಡಿಸುತ್ತಿರುವುದನ್ನು ನೋಡಿ, ಏತಕ್ಕಾಗಿ ಹೀಗೆ ಮಾಡುತ್ತಿದ್ದೀಯಾ? ಎಂದು ಕೇಳಿದರು. ನಾಳೆಗಾಗಿ ಒಟ್ಟುಗೂಡಿಸುತ್ತಿದ್ದೇನೆ ಎಂದು ಅವರು ಹೇಳಿದರು. ಆಗ ನಾಳೆಯ ದೇವನ ಮೇಲೆ ನಿನಗೆ ನಂಬಿಕೆಯಿಲ್ಲವೇ? ಇಂದು ನಿನಗೆ ನೀಡುತ್ತಿರುವ ದೇವನು ನಾಳೆ ನೀಡುವುದಿಲ್ಲವೇ, ಇದರ ಮೇಲೆ ನಿನಗೆ ನಂಬಿಕೆಯಿಲ್ಲವೇ? ಎಂದು ನಬಿ(ಸ) ಕೇಳಿದರು. ಆದರೆ ಈ ಉಪದೇಶದ ಅರ್ಥ, ದುಂದುವೆಚ್ಚ ಮಾಡಬೇಕು ಎಂದಲ್ಲ. 'ಈ ಮಾತನ್ನು ಬಿಲಾಲ್ ಅವರಿಗೆ ಹೇಳಲಾಗಿದೆ, ಎಲ್ಲರಿಗೂ ಅಲ್ಲ, ಪ್ರತಿಯೊಬ್ಬರಿಗೂ ಅವರ ಸಹನಾಶಕ್ತಿಗೆ ಅನುಗುಣವಾಗಿ ಉಪದೇಶ ಮತ್ತು ಬುದ್ಧಿವಾದ ಹೇಳಲಾಗುತ್ತದೆ.'

(ಮಲ್‌ಫೂಝಾತ್, ಸಂಪುಟ–9, ಪುಟ–210, 2022)

ಖಂಡಿತವಾಗಿಯೂ ಇದು ಹಝ್ರತ್ ಪೈಗಂಬರ್(ಸ)ರ ಬಗ್ಗೆ ಒಂದು ಉಪದೇಶವಾಗಿದೆ. ಏಕೆಂದರೆ ಹದೀಸ್‌ನಲ್ಲಿ ಸ್ಪಷ್ಟವಾಗಿ ಬಂದಿದೆ, 'ನಾನು ನಿಮಗಾಗಿ ಒಟ್ಟುಗೂಡಿಸುತ್ತಿದ್ದೇನೆ' ಎಂದು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಲಾದಾಗ, 'ನನಗಂತೂ ಅಲ್ಲಾಹನನ ಮೇಲೆ ಭರವಸೆಯಿದೆ. ನನಗಾಗಿ ಇಟ್ಟಿದ್ದರೆ, ಅದರ ಹೊಗೆ ನನಗೆ ತಟ್ಟುತ್ತದೆ' ಎಂದು ನಬಿ(ಸ) ಹೇಳಿದರು. ಆದರೆ ಇತರರಿಗೆ ಮತ್ತು ಪವಿತ್ರ ಖುರ್‌ಆನ್‌ನ ಆದೇಶದ ಪ್ರಕಾರ, 'ಇಷ್ಟೊಂದು ದುಂದುವೆಚ್ಚ ಮಾಡಬೇಡಿ, ನಿಮ್ಮ ಅಗತ್ಯಗಳಿಗಾಗಿ ಸ್ವಲ್ಪವಾದರೂ ವ್ಯವಸ್ಥೆ ಮಾಡಿಟ್ಟುಕೊಳ್ಳಿ, ಅನಂತರ ಅಲ್ಲಾಹನ ಮೇಲೆ ಭರವಸೆ ಇಡಿ, ಅವನು ಈ ವಸ್ತುಗಳನ್ನು ಸಂರಕ್ಷಿಸುತ್ತಾನೆ ಮತ್ತು ಅವುಗಳಿಂದ ಪ್ರಯೋಜನ ಪಡೆಯುವ ಸೌಭಾಗ್ಯವನ್ನೂ ನೀಡುತ್ತಾನೆ' ಎಂಬ ಉಪದೇಶವೂ ಇದೆ.

ತವಕ್ಕುಲ್ ಎಂದರೆ ಎಚ್ಚರಿಕೆ ವಹಿಸದೇ ಇರುವುದು ಅಥವಾ ಸಾಧನಗಳನ್ನು ಬಳಸದಿರುವುದು ಎಂದಲ್ಲ. ಈ ವಿಷಯವೂ ಇಸ್ಲಾಮಿಕ ಬೋಧನೆಗೆ ವಿರುದ್ಧವಾಗಿದೆ. ಅದರಂತೆ ಹಝ್ರತ್ ಅನಸ್ ಬಿನ್ ಮಾಲಿಕ್(ರ) ವಿವರಿಸುತ್ತಾರೆ: ಒಬ್ಬ ವ್ಯಕ್ತಿ ಹೇಳಿದನು, "ಯಾ ರಸೂಲಲ್ಲಾಹ್(ಸ), ನಾನು ಒಂಟೆಯನ್ನು ಕಟ್ಟಿ ಹಾಕಿ ತವಕ್ಕುಲ್ ಇರಿಸಬೇಕೇ ಅಥವಾ ಅದನ್ನು ಬಿಚ್ಚಿಟ್ಟು ತವಕ್ಕುಲ್ ಇರಿಸಬೇಕೇ?" ನಬಿ(ಸ) ಹೇಳಿದರು: "ಅದರ ಮೊಣಕಾಲನ್ನು ಕಟ್ಟಿ ತವಕ್ಕುಲ್ ಮಾಡು." (ಸುನನ್ ಅತ್ತಿಮಿರ್ಝಿ, ಅಬ್ವಾಬ್ ಸಿಫ್ಫತುಲ್ ಖಿಯಾಮ, ಹದೀಸ್–2517)

ಇದೊಂದು ಉದಾಹರಣೆಯಾಗಿದೆ, ಉಳಿದ ವಿಷಯಗಳಲ್ಲೂ ಈ ಉದಾಹರಣೆಯನ್ನು ಅನ್ವಯಿಸಬಹುದು. ವರದಿಯಲ್ಲಿದೆ: ಒಮ್ಮೆ ಒಬ್ಬ ಗ್ರಾಮೀಣ (ಅಥವಾ ಒಂದು ವರದಿಯ ಪ್ರಕಾರ ಹಝ್ರತ್ ಅಮ್ರ್ ಬಿನ್ ಉಮಯ್ಯಾ) ತನ್ನ ಒಂಟೆಯನ್ನು ರಸೂಲುಲ್ಲಾಹ್(ಸ)ರ ಮಸೀದಿಯ ಬಾಗಿಲಿನಲ್ಲಿ ಬಿಚ್ಚಿಟ್ಟು ನಮಾಝ್ ನಿರ್ವಹಿಸಲು ಒಳಗೆ ಹೋದಾಗ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು. (ತಖ್ರೀಜ್ ಅಹಾದೀಸ್ ವ ಆಸಾರ್ ಕಿತಾಬ್ ಫಿ ಝಿಲಾಲಿಲ್ ಖುರ್‌ಆನ್, ಪುಟ–342, ಹದೀಸ್–660, ದಾರುಲ್ ಹಿಜ್ರಃ ಲಿನ್ನಶರ್ ವತ್ತವಾಝೀಃ 1995) (ಅಲ್‌ಜಾಮಿ ಲಿಶುಅಬಿಲ್ ಈಮಾನ್, ಸಂಪುಟ–2, ಪುಟ–427, ಹದೀಸ್ ಸಂಖ್ಯೆ–1159, ಮಕ್ತಬ ಅರ್ರುಶುದ್)

ಇದರ ವಿವರಣೆಯನ್ನು ಹಝ್ರತ್ ಮಸೀಹ್ ಮೌಊದ್(ಅ) ಈ ರೀತಿ ನೀಡಿದ್ದಾರೆ:

"ಮನುಷ್ಯನು ತಖ್ವಿವನ್ನು ಕೈಬಿಡಬಾರದು ಮತ್ತು ದೇವನ ಮೇಲೆ ಭರವಸೆ ಇಡಬೇಕು, ಆಗ ಅವನಿಗೆ ಯಾವುದೇ ರೀತಿಯ ಕಷ್ಟವಾಗುವುದಿಲ್ಲ. ದೇವನ ಮೇಲಿನ ತವಕ್ಕುಲ್ ಎಂದರೆ ಮನುಷ್ಯನು ಉಪಾಯ ಮತ್ತು ಪ್ರಯತ್ನವನ್ನು ಕೈಬಿಡಬೇಕು ಎಂದರ್ಥವಲ್ಲ, ಬದಲಾಗಿ ಉಪಾಯವನ್ನು ಸಂಪೂರ್ಣವಾಗಿ ಮಾಡಿದ ನಂತರ ಫಲಿತಾಂಶವನ್ನು ದೇವನಿಗೆ ಬಿಡುವುದೇ ತವಕ್ಕುಲ್ ಆಗಿದೆ. ಅವನು ಉಪಾಯ ಮಾಡದೆ ಕೇವಲ ತವಕ್ಕುಲ್ ಇಟ್ಟರೆ, ಅವನ ತವಕ್ಕುಲ್ ಟೊಳ್ಳಾಗಿರುತ್ತದೆ; ಅದೇ ರೀತಿಯಲ್ಲಿ, ಕೇವಲ ಉಪಾಯ ಮಾಡಿ ಅದರ ಮೇಲೆಯೇ ವಿಶ್ವಾಸವಿಟ್ಟು ದೇವನ ಮೇಲೆ ಭರವಸೆ ಇಡದಿದ್ದರೆ, ಅಂದರೆ 'ನಾನು ಉಪಾಯ ಮಾಡಿದ್ದೇನೆ, ಈಗ ಸಾಕು, ಅಲ್ಲಾಹನ ಮೇಲೆ ಭರವಸೆ ಇಡುವ ಅಗತ್ಯವಿಲ್ಲ' ಎಂದುಕೊಂಡರೆ, ಅದು ದೇವನ ಮೇಲಿನ ತವಕ್ಕುಲ್ ಅಲ್ಲ, ಆಗ ಆ ಉಪಾಯ ಕೂಡ ಟೊಳ್ಳಾಗಿರುತ್ತದೆ, ಆ ಉಪಾಯವೂ ವ್ಯರ್ಥವಾಗುತ್ತದೆ. ಒಬ್ಬ ವ್ಯಕ್ತಿ ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದನು, ಹಝ್ರತ್ ಪೈಗಂಬರ್(ಸ)ರನ್ನು ನೋಡಿ ಗೌರವ ಸೂಚಿಸಲು ಕೆಳಗಿಳಿದನು. ಅವನು ತವಕ್ಕುಲ್ ಮಾಡಲು ನಿರ್ಧರಿಸಿದನು ಮತ್ತು ಉಪಾಯ ಮಾಡಲಿಲ್ಲ, ಹಾಗಾಗಿ ಅವನು ತನ್ನ ಒಂಟೆಯ ಮೊಣಕಾಲನ್ನು ಕಟ್ಟಲಿಲ್ಲ. ರಸೂಲುಲ್ಲಾಹ್(ಸ) ಅವರನ್ನು ಭೇಟಿಯಾಗಿ ಹಿಂದಿರುಗಿದಾಗ ಒಂಟೆ ಇರಲಿಲ್ಲ. ಹಿಂದಿರುಗಿ ಬಂದು ಹಝ್ರತ್ ಪೈಗಂಬರ್(ಸ)ರ ಬಳಿ, 'ನಾನು ತವಕ್ಕುಲ್ ಮಾಡಿದ್ದೆ, ಆದರೆ ನನ್ನ ಒಂಟೆ ಕಳೆದುಹೋಯಿತು' ಎಂದು ದೂರು ನೀಡಿದನು. ನಬಿ(ಸ) ಹೇಳಿದರು: 'ನೀನು ತಪ್ಪು ಮಾಡಿದೆ. ಮೊದಲು ಒಂಟೆಯ ಮೊಣಕಾಲನ್ನು ಕಟ್ಟಿ, ನಂತರ ತವಕ್ಕುಲ್ ಮಾಡಿದ್ದರೆ ಸರಿಯಾಗುತ್ತಿತ್ತು'."

(ಮಲ್‌ಫೂಝಾತ್, ಸಂಪುಟ–6, ಪುಟ–58–59, 2022)

ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ)ರ ಬಳಿ ಕೆಲವು ದೀನಾರ್‌ಗಳು ಬಂದವು. ನಬಿ(ಸ) ಅವುಗಳಲ್ಲಿ ಎಲ್ಲವನ್ನೂ ಹಂಚಿಬಿಟ್ಟರು. ಕೇವಲ ಆರು ದೀನಾರ್‌ಗಳು ಮಾತ್ರ ಉಳಿದಿದ್ದವು, ಅವುಗಳನ್ನು ನಬಿ(ಸ) ತಮ್ಮ ಪರಿಶುದ್ಧ ಪತ್ನಿಯರ ಪೈಕಿ ಒಬ್ಬರ ಬಳಿ ಇಡಲು ಕೊಟ್ಟರು. ಇನ್ನೊಂದು ವರದಿಯಲ್ಲಿದೆ: ರಸೂಲುಲ್ಲಾಹ್(ಸ) ತಮ್ಮ ಕೊನೆಯ ಕಾಯಿಲೆಯ ಸಮಯದಲ್ಲಿ ಹಝ್ರತ್ ಆಯಿಶಾ(ರ)ರ ಎದೆಗೆ ಒರಗಿಕೊಂಡಿದ್ದಾಗ, ನಬಿ(ಸ) 'ಹೇ ಆಯಿಶಾ, ಆ ಚಿನ್ನದ ದೀನಾರ್‌ಗಳು ಎಲ್ಲಿವೆ?' ಎಂದು ಕೇಳಿದರು. ಹಝ್ರತ್ ಆಯಿಶಾ(ರ), 'ಅವು ನನ್ನ ಬಳಿ ಸುರಕ್ಷಿತವಾಗಿವೆ' ಎಂದು ಹೇಳಿದರು. ನಬಿ(ಸ), 'ಅವುಗಳನ್ನು ಅಲ್ಲಾಹನ ಹಾದಿಯಲ್ಲಿ ಖರ್ಚು ಮಾಡು' ಎಂದು ಹೇಳಿದರು. ಇದರ ನಂತರ ರಸೂಲುಲ್ಲಾಹ್(ಸ)ರಿಗೆ ಕಾಯಿಲೆಯ ತೀವ್ರತೆಯಿಂದಾಗಿ ಪ್ರಜ್ಞೆ ತಪ್ಪಿತು. ತಾವು ಇಡಲು ಕೊಟ್ಟಿದ್ದ ದೀನಾರ್‌ಗಳು ಹಂಚುವುದಕ್ಕಾಗಿಯೇ ಇದ್ದವು. ಆ ಸಮಯದಲ್ಲಿ ನಬಿ(ಸ) ಹಝ್ರತ್ ಆಯಿಶಾ(ರ)ರ ಎದೆಗೆ ಒರಗಿಕೊಂಡಿದ್ದರು. ರಸೂಲುಲ್ಲಾಹ್(ಸ) ಎಚ್ಚರಗೊಂಡಾಗ ಮತ್ತೆ ವಿಚಾರಿಸಿದರು. 'ಹೇ ಆಯಿಶಾ, ಆ ಚಿನ್ನದ ದೀನಾರ್‌ಗಳನ್ನು ಖರ್ಚು ಮಾಡಿದ್ದೀಯಾ?' 'ಇಲ್ಲ, ಅಲ್ಲಾಹನ ಆಣೆ, ಯಾ ರಸೂಲಲ್ಲಾಹ್, ಇನ್ನೂ ಮಾಡಿಲ್ಲ' ಎಂದು ಹಝ್ರತ್ ಆಯಿಶ(ರ) ಹೇಳಿದರು. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಆ ದೀನಾರ್‌ಗಳನ್ನು ತರಿಸಲಾಯಿತು. ಅವುಗಳನ್ನು ತಂದಾಗ, ನಬಿ(ಸ) ಅವುಗಳನ್ನು ತಮ್ಮ ಅಂಗೈಯಲ್ಲಿಟ್ಟುಕೊಂಡು ಎಣಿಸಿದಾಗ ಅವು ಆರು ದೀನಾರ್‌ಗಳು ಇದ್ದವು, ಆಗ ನಬಿ(ಸ) ಹೇಳಿದರು: "ಮುಹಮ್ಮದ್ ತನ್ನ ದೇವನನ್ನು ಭೇಟಿಯಾಗುವಾಗ ಮತ್ತು ಲೋಕದಿಂದ ನಿರ್ಗಮಿಸುವಾಗ ಈ ದೀನಾರ್‌ಗಳು ಅವನ ಬಳಿಯಿದ್ದರೆ, ಅವನು ತನ್ನ ಪ್ರಭುವಿನ ಮೇಲೆ ಇಟ್ಟ ಭರವಸೆಯಾದರೂ ಎಂಥದ್ದು?". ನಂತರ ನಬಿ(ಸ) ಆ ಎಲ್ಲ ದೀನಾರ್‌ಗಳನ್ನು ಅಲ್ಲಾಹನ ಮಾರ್ಗದಲ್ಲಿ ದಾನ ಮಾಡಿಬಿಟ್ಟರು ಮತ್ತು ಅದೇ ದಿನ ನಬಿ(ಸ) ನಿಧನ ಹೊಂದಿದರು.

(ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–182–183, ದಾರುಲ್ ಕುತುಬ್ ಇಲ್ಮಿಯಾ)

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ಕುಲ್ಲನ್ ಯುಸೀಬನಾ ಇಲ್ಲಾ ಮಾ ಕತಬಲ್ಲಾಹು ಲನಾ. ಹುವ ಮೌಲಾನಾ, ವ ಅಲಲ್ಲಾಹಿ ಫಲ್ ಯತವಕ್ಕಲಿಲ್ ಮುಅ್‌ಮಿನೂನ್**. ಅಂದರೆ, ಅಲ್ಲಾಹನು ನಮಗಾಗಿ ಏನನ್ನು ನಿಗದಿಪಡಿಸಿದ್ದಾನೋ ಅದು ಮಾತ್ರ ನಮಗೆ ತಲುಪುತ್ತದೆ ಎಂದು ನೀನು ಅವರಿಗೆ ಹೇಳು. ಅವನೇ ನಮ್ಮ ಕಾರ್ಯನಿರ್ವಾಹಕನಾಗಿದ್ದಾನೆ ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆ ಇಡಬೇಕು. ಒಂದು ಸಂದರ್ಭದಲ್ಲಿ ನಬಿ(ಸ) ತವಕ್ಕುಲ್‌ನ ಉನ್ನತ ಮಾದರಿಯನ್ನು ಹೇಗೆ ಪ್ರಸ್ತುತಪಡಿಸಿದ್ದರು, ಅಲ್ಲಾಹನ ಮೇಲೆ ಭರವಸೆ ಇಡುವ ಆದೇಶವಿದೆ, ಅದರ ಪ್ರಕಾರ ನಬಿ(ಸ) ಸ್ವತಃ ಹೇಗೆ ಕಾರ್ಯನಿರ್ವಹಿಸುತ್ತಿದ್ದರು ಎಂದು ಹಝ್ರತ್ ಪೈಗಂಬರ್(ಸ)ರ ಮಾದರಿಯಲ್ಲಿ ನಾವು ನೋಡೋಣ. ಮುಸೈಲಮಾ ಕದ್ದಾಬ್ ತನ್ನ ಸೈನ್ಯದೊಂದಿಗೆ ನಬಿ(ಸ)ರ ವಿಧೇಯತೆಯನ್ನು ಒಪ್ಪಿಕೊಳ್ಳುವುದಾಗಿ

ಹೇಳಿದಾಗ, ಅವನು ಷರತ್ತು ವಿಧಿಸಿದನು. ಆಗ ಹಝ್ರತ್ ಪೈಗಂಬರ್(ಸ), 'ಯಾವುದೇ ಷರತ್ತು ಸ್ವೀಕಾರಾರ್ಹವಲ್ಲ' ಎಂದು ಕಟ್ಟುನಿಟ್ಟಾಗಿ ನಿರಾಕರಿಸಿದರು.

ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ವರದಿಯಾಗಿದೆ, ಅವರು ಹೇಳಿದರು: ಮುಸೈಲಮಾ ಕದ್ದಾಬ್ ರಸೂಲುಲ್ಲಾಹ್(ಸ)ರ ಕಾಲದಲ್ಲಿ ಬಂದು ಹೀಗೆ ಹೇಳಿದನು: "ಮುಹಮ್ಮದ್ ತಮ್ಮ ನಂತರ ನನ್ನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದರೆ, ನಾನು ಅವರ ಅನುಯಾಯಿಯಾಗುತ್ತೇನೆ." ಅವನು ಮದೀನಾಕ್ಕೆ ತನ್ನ ಸೈನ್ಯ ಮತ್ತು ಅನೇಕ ಜನರೊಂದಿಗೆ ಬಂದಿದ್ದನು. ಕೆಲವು ವರದಿಗಳ ಪ್ರಕಾರ, ಒಂದು ಲಕ್ಷ ಜನರಿದ್ದರು, ಅಂದರೆ ಅವನ ಅನುಯಾಯಿಗಳಿದ್ದರು. ಬಂದವರ ಸಂಖ್ಯೆ ಕಡಿಮೆಯೇ ಇರಬಹುದು. ರಸೂಲುಲ್ಲಾಹ್(ಸ) ಅವನ ಬಳಿಗೆ ತೆರಳಿದರು. ಹಝ್ರತ್ ಸಾಬಿತ್ ಬಿನ್ ಖೈಸ್ ಬಿನ್ ಶಮ್ಮಾಸ್(ರ) ನಬಿ(ಸ)ರ ಜೊತೆಯಲ್ಲಿದ್ದರು. ರಸೂಲುಲ್ಲಾಹ್(ಸ)ರ ಕೈಯಲ್ಲಿ ಖರ್ಜೂರದ ಗರಿಯ ಒಂದು ತುಂಡಿತ್ತು. ಮುಸೈಲಮಾ ತನ್ನ ಸಹಚರರೊಂದಿಗೆ ಕುಳಿತಿದ್ದಾಗ, ಅವನ ಮುಂದೆ ನಿಂತು ನಬಿ(ಸ) ಹೀಗೆ ಹೇಳಿದರು: "ನೀನು ನನ್ನೊಡನೆ ಈ ಮರದ ತುಂಡನ್ನು ಕೇಳಿದರೆ ಕೂಡ ನಾನು ನಿನಗೆ ಅದನ್ನು ಕೊಡಲಾರೆ. ದೇವನು ನಿನಗಾಗಿ ಏನನ್ನು ನಿಗದಿಪಡಿಸಿದ್ದಾನೋ ಅದಕ್ಕಿಂತ ಮುಂದೆ ನೀನು ಹೋಗಲಾರೆ. ನೀನು ಬೆನ್ನು ತಿರುಗಿಸಿ ಹೋದರೆ, ಅಲ್ಲಾಹನು ನಿನ್ನ ಬೇರನ್ನು ಕತ್ತರಿಸುವನು. ನನಗೆ ಕನಸಿನಲ್ಲಿ ತೋರಿಸಲಾದ ಆ ವ್ಯಕ್ತಿಯನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ." 'ಈ ಗರಿಗೆ ಸಮಾನವಾದುದೂ ನಿನಗೆ ಸಿಗುವುದಿಲ್ಲ. 'ಸಾಬಿತ್' ಎಂಬ ಸಹಾಬಿ ಹಝ್ರತ್ ಪೈಗಂಬರ್(ಸ) ರ ಜೊತೆಯಲ್ಲಿದ್ದರು. ನಬಿ(ಸ) ಹೇಳಿದರು: ಇವರು ಸಾಬಿತ್, ಅಂದರೆ ನನ್ನ ಪ್ರತಿನಿಧಿ ಅವರು ನನ್ನ ಪರವಾಗಿ ನಿನಗೆ ಉತ್ತರಿಸುತ್ತಾರೆ.' ಇದನ್ನು ಹೇಳಿ ನೀವು ಅವನನ್ನು ಬಿಟ್ಟು ಹಿಂತಿರುಗಿದರು. ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಿದ್ದರು: ರಸೂಲುಲ್ಲಾಹ್(ಸ)ರ ಈ ಆದೇಶದ ಬಗ್ಗೆ, ಅಂದರೆ 'ನನಗೆ ಕನಸಿನಲ್ಲಿ ತೋರಿಸಲಾದ ಆ ವ್ಯಕ್ತಿಯನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ' ಎಂಬುದರ ಬಗ್ಗೆ ನಾನು ಕೇಳಿದೆ. ಹಝ್ರತ್ ಅಬೂ ಹುರೈರಾ(ರ) ನನಗೆ ಹೇಳಿದರು, ರಸೂಲುಲ್ಲಾಹ್(ಸ) ಹೇಳಿದ್ದರು: 'ಒಮ್ಮೆ ನಾನು ಮಲಗಿದ್ದಾಗ, ನನ್ನ ಕೈಯಲ್ಲಿ ಎರಡು ಚಿನ್ನದ ಬಳೆಗಳನ್ನು ನೋಡಿದೆ. ಅವುಗಳ ಸ್ಥಿತಿಯು ನನ್ನನ್ನು ಚಿಂತೆಗೀಡುಮಾಡಿತು. ನಂತರ ನಾನು ಅವುಗಳ ಮೇಲೆ ಊದಬೇಕೆಂದು ನನಗೆ ಕನಸಿನಲ್ಲಿ ದಿವ್ಯವಾಣಿಯಾಯಿತು, ಅದರಂತೆ ನಾನು ಅವುಗಳ ಮೇಲೆ ಊದಿದೆ ಮತ್ತು ಅವು ಹಾರಿಹೋದವು. ಇದರ ಅರ್ಥ, ನನ್ನ ನಂತರ ಕಾಣಿಸಿಕೊಳ್ಳುವ ಇಬ್ಬರು ಸುಳ್ಳುಗಾರರು ಎಂದು ನಾನು ತಿಳಿದುಕೊಂಡೆ.' ಅವರಲ್ಲಿ ಒಬ್ಬ ಅನ್ಸಿ ಮತ್ತು ಇನ್ನೊಬ್ಬ ಮುಸೈಲಮಾ.

(ಸಹೀಹ್ ಅಲ್‌ಬುಖಾರಿ ಕಿತಾಬ್ ಅಲ್‌ಮಗಾಝಿ, ವಫ್ದ್ ಬನೀ ಹನ್‌ಫೀಯಾ, ಹದೀಸ್–4373–4374, ಅನುವಾದ ಸಂಪುಟ–9, ಪುಟ–257–258, ನಝಾರತ್ ಇಶಾಅತ್) (ಅಲ್‌ಬಿದಾಯ ವನ್ನಿಹಾಯ, ಭಾಗ–9, ಪುಟ–333, 1998 ಹಿಜ್ರಿ)

ಅಸ್ವದ್ ಅನ್ಸಿ ಮತ್ತು ಮುಸೈಲಮಾ ಇಬ್ಬರೂ ಬಂಡಾಯದ ಮನೋಭಾವವನ್ನು ಹೊಂದಿದ್ದರು ಮತ್ತು ಆ ಸಮಯದಲ್ಲಿ ಅಲ್ಲಿಂದ ಹೊರಟುಹೋದರು. ನಂತರ ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಅವರು ಯುದ್ಧವನ್ನೂ ಮಾಡಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಬಗ್ಗೆ ಬಹಳ ವಿವರವಾಗಿ ಬರೆಯುತ್ತಾರೆ:

"ನಬಿ(ಸ) ಯಾವುದೇ ಕೆಲಸದಲ್ಲೂ ಲೋಕ ಮತ್ತು ಲೌಕಿಕ ಜನರ ಕಡೆಗೆ ಗಮನವಿರಿಸಲಿಲ್ಲ, ಭೌತಿಕ ಸಾಧನಗಳ ಕಡೆಗೆ ನಬಿ(ಸ) ಕಣ್ಣೆತ್ತಿಯೂ ನೋಡುತ್ತಿರಲಿಲ್ಲ; ಬದಲಾಗಿ ಪ್ರತಿಯೊಂದು ಕಾರ್ಯದಲ್ಲೂ ನಬಿ(ಸ)ರ ದೃಷ್ಟಿ ದೇವನ ಕಡೆಗೇ ನೆಟ್ಟಿರುತ್ತಿತ್ತು, ಅವನೇ ಎಲ್ಲವನ್ನೂ ಮಾಡುವವನಾಗಿದ್ದಾನೆ ಎಂಬ ಭರವಸೆ ಹೊಂದಿದ್ದರು. ನಬಿ(ಸ) ತವಕ್ಕುಲಿನ ಒಂದು ಪರಿಪೂರ್ಣ ಮಾದರಿಯಾಗಿದ್ದರು, ಅವರಂತಹ ಉದಾಹರಣೆ ಹಿಂದಿನ ಪ್ರವಾದಿಗಳಲ್ಲಿ ಸಿಗುವುದಿಲ್ಲ, ಅಥವಾ ಅವರ ನಂತರ ಅವರಂತಹ ತವಕ್ಕುಲ್ ಉಳ್ಳ ಮನುಷ್ಯನೂ ಹುಟ್ಟಿಲ್ಲ."

"ಅದರಂತೆ ಚರಿತ್ರೆ ನಮಗೆ ಹೇಳುತ್ತದೆ, ನಬಿ(ಸ)ರ ಜೀವಿತಾವಧಿಯಲ್ಲಿ ಮುಸೈಲಮಾ ಒಂದು ಬೃಹತ್ ಸೈನ್ಯದೊಂದಿಗೆ ಮದೀನಾಕ್ಕೆ ಬಂದು ನಬಿ(ಸ)ರ ಬಳಿ ಹೀಗೆ ಹೇಳಿದನು: 'ನೀವು ನನ್ನನ್ನು ನಿಮ್ಮ ನಂತರ ಖಲೀಫನನ್ನಾಗಿ ಮಾಡಿದರೆ, ನಾನು ನನ್ನ ಗುಂಪಿನೊಂದಿಗೆ ನಿಮ್ಮನ್ನು ಅನುಸರಿಸುತ್ತೇನೆ.' ಮತ್ತು ಆ ಸಮಯದಲ್ಲಿ ಇಸ್ಲಾಮಿನ ಸ್ಥಿತಿಯು, ಅಂದರೆ ಇಸ್ಲಾಮ್ ದುರ್ಬಲ ಸ್ಥಿತಿಯಲ್ಲಿದ್ದ ಕಾರಣ, ನಬಿ(ಸ) ಈ ಮಾರ್ಗವನ್ನು ಆರಿಸಿಕೊಂಡು ಅವನ ಸಹಾಯದಿಂದ ಲಾಭ ಪಡೆಯಬಹುದಾಗಿತ್ತು. ಆದರೆ ಯಾವ ಪವಿತ್ರ ಅಸ್ತಿತ್ವಕ್ಕೆ ದೇವನ ಶಕ್ತಿಯ ಮೇಲೆ ಭರವಸೆ ಮತ್ತು ತವಕ್ಕುಲ್ ಇತ್ತೋ ಮತ್ತು ಮಾನವ ಯೋಜನೆಗಳ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲವೋ, ಅವರು ಅವನ ವಿನಂತಿಯನ್ನು ತಕ್ಷಣವೇ ತಿರಸ್ಕರಿಸಿದರು. ಇದು ಸಾಧ್ಯವಿಲ್ಲ. ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ:

"ರಸೂಲುಲ್ಲಾಹ್(ಸ)ರ ಕಾಲದಲ್ಲಿ ಮುಸೈಲಮಾ ಕದ್ದಾಬ್ ಬಂದು, ಮುಹಮ್ಮದ್(ಸ) ತಮ್ಮ ನಂತರ ನನ್ನನ್ನು ಆಡಳಿತಗಾರನನ್ನಾಗಿ ಮಾಡಿದರೆ, ನಾನು ಅವರನ್ನು ಅನುಸರಿಸುತ್ತೇನೆ ಎಂದು ಹೇಳಿದನು. ಆ ಸಮಯದಲ್ಲಿ ಅವನು ತನ್ನ ಜನಾಂಗದ ಒಂದು ದೊಡ್ಡ ಗುಂಪಿನೊಂದಿಗೆ ಬಂದಿದ್ದನು. ರಸೂಲುಲ್ಲಾಹ್(ಸ) ಈ ಮಾತನ್ನು ಕೇಳಿ ಅವನ ಬಳಿಗೆ ಬಂದರು ಮತ್ತು ಸಾಬಿತ್ ಬಿನ್ ಖೈಸ್ ಬಿನ್ ಶಮ್ಮಾಸ್(ರ) ನಬಿ(ಸ)ರ ಜೊತೆಯಲ್ಲಿದ್ದರು. ರಸೂಲುಲ್ಲಾಹ್(ಸ)ರ ಕೈಯಲ್ಲಿ ಖರ್ಜೂರದ ಗರಿಯ ಒಂದು ತುಂಡಿತ್ತು. ನಬಿ(ಸ) ಬಂದು ಮುಸೈಲಮಾನ ಮುಂದೆ ನಿಂತಾಗ, ಅವನು ತನ್ನ ಸಹಚರರೊಂದಿಗೆ ಕುಳಿತಿದ್ದನು. ನಬಿ(ಸ) ಹೇಳಿದರು, 'ನೀನು ನನ್ನೊಡನೆ ಈ ಗರಿಯನ್ನು ಕೇಳಿದರೂ ನಾನು ನಿನಗೆ ಅದನ್ನು ಕೊಡುವುದಿಲ್ಲ. ದೇವನು ನಿನಗಾಗಿ ಏನನ್ನು ನಿಗದಿಪಡಿಸಿದ್ದಾನೋ ಅದಕ್ಕಿಂತ ಮುಂದೆ ನೀನು ಹೋಗಲಾರೆ. ನೀನು ಬೆನ್ನು ತಿರುಗಿಸಿ ಹೋದರೆ, ಅಲ್ಲಾಹನು ನಿನ್ನ ಹಿಮ್ಮಡಿಯನ್ನು ಕತ್ತರಿಸುವನು. ನನಗೆ ಕನಸಿನಲ್ಲಿ ತೋರಿಸಲಾದ ಆ ವ್ಯಕ್ತಿಯನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ. ಇವರು ಸಾಬಿತ್, ನನ್ನ ಪರವಾಗಿ ನಿನಗೆ ಉತ್ತರಿಸುತ್ತಾರೆ.' ನಂತರ ನಬಿ(ಸ) ಅಲ್ಲಿಂದ ಹೊರಟುಹೋದರು. ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ, ನಾನು ಮೊದಲೇ ಹೇಳಿದಂತೆ, 'ನನಗೆ ಕನಸಿನಲ್ಲಿ ತೋರಿಸಲಾದ ಆ ವ್ಯಕ್ತಿಯನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ' ಎಂದು ರಸೂಲುಲ್ಲಾಹ್(ಸ) ಹೇಳಿದ ಮಾತಿನ ಅರ್ಥವೇನು ಎಂದು ನಾನು ಕೇಳಿದೆ. ಅದಕ್ಕೆ ಹಝ್ರತ್ ಅಬೂ ಹುರೈರಾ(ರ) ನನಗೆ ಹೇಳಿದರು, ರಸೂಲುಲ್ಲಾಹ್(ಸ) ಹೇಳಿದ್ದರು: 'ಒಮ್ಮೆ ನಾನು ಮಲಗಿದ್ದಾಗ, ನನ್ನ ಎರಡೂ ಕೈಗಳಲ್ಲಿ ಚಿನ್ನದ ಎರಡು ಬಳೆಗಳನ್ನು ನೋಡಿದೆ. ಅವು ಇರುವುದು ನನಗೆ ಇಷ್ಟವಾಗಲಿಲ್ಲ. ನಾನು ಅವುಗಳ ಮೇಲೆ ಊದಬೇಕೆಂದು ಆಗ ನನಗೆ ಕನಸಿನಲ್ಲಿ ದಿವ್ಯವಾಣಿಯಾಯಿತು, ನಾನು ಊದಿದಾಗ, ಅವೆರಡೂ ಹಾರಿಹೋದವು. ಆದ್ದರಿಂದ, ನನ್ನ ನಂತರ ಇಬ್ಬರು ಸುಳ್ಳುಗಾರರು ಹುಟ್ಟಿಕೊಳ್ಳುತ್ತಾರೆ ಎಂದು ನಾನು ಅರ್ಥೈಸಿದೆ. ಅವರಲ್ಲಿ ಒಬ್ಬ ಅನ್ಸಿ ಮತ್ತು ಇನ್ನೊಬ್ಬ ಮುಸೈಲಮಾ.' ಈ ಘಟನೆಯಿಂದ, ಹಝ್ರತ್ ಪೈಗಂಬರ್(ಸ)ರಿಗೆ ದೇವನ ಮೇಲೆ ಎಂತಹ ನಂಬಿಕೆಯಿತ್ತು ಮತ್ತು ದೇವನ ಸಹಾಯದ ಬಗ್ಗೆ ಅವರು ಎಷ್ಟೊಂದು ನಿಶ್ಚಿಂತರಾಗಿದ್ದರು ಎಂಬುದು ತಿಳಿಯುತ್ತದೆ. ನಬಿ(ಸ)ರ ಸುತ್ತಲೂ ಸತ್ಯನಿಷೇಧಿಗಳ ಪ್ರಾಬಲ್ಯವಿತ್ತು, ಅವರು ಸದಾ ನಬಿ(ಸ)ರಿಗೆ ತೊಂದರೆ ಮತ್ತು ಕಿರುಕುಳ ನೀಡುವಲ್ಲಿ ಮಗ್ನರಾಗಿದ್ದರು ಮತ್ತು ಸಾಧ್ಯವಾದಷ್ಟು ಎಲ್ಲ ರೀತಿಗಳಿಂದ ನಬಿ(ಸ)ರಿಗೆ ತೊಂದರೆ ನೀಡುತ್ತಿದ್ದರು. ಇರಾನ್ ಮತ್ತು ರೋಮಿನ ಆಡಳಿತಗಾರರು ಕೂಡ ತಮ್ಮ ಅಧಿಕಾರಿಗಳಿಗೆ ನಬಿ(ಸ)ರನ್ನು ಎದುರಿಸಲು ಆದೇಶಗಳ ಮೇಲೆ ಆದೇಶಗಳನ್ನು ಕಳುಹಿಸುತ್ತಿದ್ದರು, ಬನೂ ಗಸ್ಸಾನ್‌ರು ಯುದ್ಧದ ಸಿದ್ಧತೆಗಳನ್ನು ಮಾಡುತ್ತಿದ್ದರು, ಇರಾನಿಯನ್ನರು ಈ ಬೆಳೆಯುತ್ತಿರುವ ಶಕ್ತಿಯನ್ನು ಹೊಟ್ಟೆಕಿಚ್ಚು ಮತ್ತು ಆಶ್ಚರ್ಯದಿಂದ ನೋಡುತ್ತಿದ್ದರು, ಪ್ರತಿಯೊಂದು ಆಡಳಿತವೂ ಈ ಹೊಸ ಚಳುವಳಿಯನ್ನು ಅನುಮಾನದ ದೃಷ್ಟಿಯಿಂದ ನೋಡುತ್ತಿತ್ತು. ಇಂತಹ ಸಮಯದಲ್ಲಿ, ನಬಿ(ಸ)ರ ಸುತ್ತಲೂ ಒಂದು ಬೃಹತ್ ಸೈನ್ಯ ಸೇರದಿದ್ದರೆ, ಮೇಲ್ನೋಟಕ್ಕೆ ನಬಿ(ಸ) ಶತ್ರುಗಳ ದಾಳಿಯಿಂದ ಪಾರಾಗುವುದು ಕಷ್ಟ, ಅಷ್ಟೇ ಅಲ್ಲ ಅಸಾಧ್ಯವೆಂದು ತೋರುತ್ತಿತ್ತು. ಮದೀನಾದಿಂದ ಮಕ್ಕಾದವರೆಗಿನ ವಿಜಯಗಳು ನಬಿ(ಸ)ರನ್ನು ಸುತ್ತಮುತ್ತಲಿನ ಪ್ರತಿಯೊಂದು ಆಡಳಿತದ ಎದುರು ನಿಲ್ಲಿಸಿದ್ದವು, ದೂರದೃಷ್ಟಿಯುಳ್ಳವರು ಆರಂಭದಲ್ಲೇ ಈ ಬೆಳೆಯುತ್ತಿರುವ ಶಕ್ತಿಯನ್ನು ನಾಶಪಡಿಸುವ ಚಿಂತೆಯಲ್ಲಿದ್ದರು. ಏಕೆಂದರೆ, ಈ ಶಕ್ತಿ ಇನ್ನಷ್ಟು ಬೆಳೆದರೆ ನಮ್ಮ ದೊಡ್ಡ ದೊಡ್ಡ ಅರಮನೆಗಳನ್ನು ಧ್ವಂಸಗೊಳಿಸುತ್ತದೆ ಎಂಬ ನಂಬಿಕೆ ಅವರಿಗಿತ್ತು. ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಈ ಬೃಹತ್ ಬೆದರಿಕೆಗಳನ್ನು ಎದುರಿಸಲು ಏನೇ ಸಿದ್ಧತೆಗಳನ್ನು ಮಾಡಿದ್ದರೂ ಅದು ಕಡಿಮೆಯೇ ಇತ್ತು. ಮಾನವ ಬುದ್ಧಿ ಇಂತಹ ಪರಿಸ್ಥಿತಿಯಲ್ಲಿ ಸ್ನೇಹಿತರು ಮತ್ತು ಶತ್ರುಗಳನ್ನು ತಮ್ಮೊಂದಿಗೆ ಸೇರಿಸಿಕೊಳ್ಳಲು ಹೇಗೆ ಬಯಸುತ್ತದೆ, ಮತ್ತು ಯಾವ ಯಾವ ತಂತ್ರಗಳ ಮೂಲಕ ಅನ್ಯರನ್ನು ಕೂಡ ತನ್ನಲ್ಲಿ ಸೇರಿಸಿಕೊಳ್ಳಲು ಬಯಸುತ್ತದೆ ಎಂಬುದು ಇತಿಹಾಸವನ್ನು ಓದುವವರಿಗೆ ಸುಲಭವಾಗಿ ಅರ್ಥವಾಗುತ್ತದೆ. ಆದರೆ ನಬಿ(ಸ) ಲೌಕಿಕನಾಗಿರಲಿಲ್ಲ, ಬದಲಾಗಿ ಸ್ವರ್ಗೀಯರಾಗಿದ್ದನು. ಬೆಳೆಯುತ್ತಿರುವ ಸೈನ್ಯಗಳು, ಓಡುತ್ತಿರುವ ಕುದುರೆಗಳು, ಏಳುತ್ತಿರುವ ಈಟಿಗಳು ಮತ್ತು ಹೊಳೆಯುತ್ತಿರುವ ಖಡ್ಗಗಳು ಅವರ ಕಣ್ಣುಗಳಲ್ಲಿ ಯಾವುದೇ ಬೆಲೆ ಹೊಂದಿರಲಿಲ್ಲ. ಅವರು ಸ್ವರ್ಗೀಯ ದೇವದೂತರು ಇಳಿಯುತ್ತಿರುವುದನ್ನು ನೋಡುತ್ತಿದ್ದರು, ಭೂಮಿ–ಆಕಾಶದ ಸೃಷ್ಟಿಕರ್ತನು ಅವರ ಕಿವಿಯಲ್ಲಿ ಸದಾ ಸಾಂತ್ವನದ ಮಾತುಗಳನ್ನು ಹೇಳುತ್ತಿದ್ದನು. ಅವರ ಹೃದಯವು ದೃಢನಂಬಿಕೆಯಿಂದ ತುಂಬಿತ್ತು ಮತ್ತು ಎದೆಯು ಸತ್ಯವಿಶ್ವಾಸದಿಂದ ಭರಿತವಾಗಿತ್ತು. ಒಟ್ಟಿನಲ್ಲಿ ಲೌಕಿಕ ಸಾಧನಗಳ ಮೇಲೆ ಭರವಸೆ ಇಡುವ ಬದಲು ಅವರ ತವಕ್ಕುಲ್ ದೇವನ ಮೇಲಿತ್ತು. ಹೀಗಿರುವಾಗ ಅವರ ಈ ಕಷ್ಟಗಳಿಂದ ಹೇಗೆ ಹೆದರಲು ಸಾಧ್ಯವಿತ್ತು? ಮುಸೈಲಮಾ ಮತ್ತು ಅವನ ಸೈನ್ಯದ ಮೇಲೆ ಭರವಸೆ ಇಡುವುದನ್ನು ನಬಿ(ಸ) ಒಂದು ಕ್ಷಣಕ್ಕೂ ಸೂಕ್ತವೆಂದು ಭಾವಿಸಲಿಲ್ಲ, ಖಿಲಾಫತಿನ ಭ್ರಮೆ ಹುಟ್ಟಿಸಿ ನಿನ್ನನ್ನು ನನ್ನೊಂದಿಗೆ ಸೇರಿಸಿಕೊಳ್ಳುವುದು ಮತ್ತು ನಿನ್ನ ಜನಾಂಗದ ಬೆಂಬಲವನ್ನು ಪಡೆಯುವುದು ಬೇರೆಯದೇ ವಿಷಯ, ಖರ್ಜೂರದ ಒಂದು

ಗರಿಯ ಬದಲಿಗೆ ನಿನ್ನ ಬೆಂಬಲವನ್ನು ಪಡೆಯಬೇಕಾದರೂ, ನಾನು ಅದರ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಈ ಸ್ವಾಭಿಮಾನಿ ಹೃದಯದ ಸ್ಥಿತಿಯನ್ನು ಗಮನಿಸಿ. ಈ ತವಕ್ಕುಲ್ ಉಳ್ಳ ಮನುಷ್ಯನ ಘನತೆಯನ್ನು ನೋಡಿ. ಈ ದೃಢನಂಬಿಕೆಯಿಂದ ತುಂಬಿದ ಹೃದಯದ ಸ್ಥಿತಿಯನ್ನು ನಿಮ್ಮ ಹೃದಯಗಳಲ್ಲಿ ಮೂಡಿಸಿಕೊಂಡು ನೋಡಿ, ಯಾವ ನಂಬಿಕೆ ಮತ್ತು ತವಕ್ಕುಲ್‌ನ ಅಡಿಯಲ್ಲಿ ಅವರು ಮುಸೈಲಮಾನಿಗೆ ಉತ್ತರಿಸುತ್ತಾರೆ. ಯಾವುದೇ ರಾಜನು ಇಂತಹ ಸಮಯದಲ್ಲಿ ಈ ಧೈರ್ಯ ಮತ್ತು ಶೌರ್ಯವನ್ನು ತೋರಲು ಸಾಧ್ಯವೇ? ಮಾಂಸ ಮತ್ತು ಮೂಳೆಯಿಂದ ಮಾಡಲ್ಪಟ್ಟ ಮನುಷ್ಯನು ಇಂತಹ ಸಂದರ್ಭಗಳಿಂದ ಇಷ್ಟೊಂದು ಸುರಕ್ಷಿತವಾಗಿ ಪಾರಾಗಿಬಂದದ್ದನ್ನು ಇತಿಹಾಸವು ತೋರಿಸಬಲ್ಲದೇ? ಇಲ್ಲದಿದ್ದರೆ, ಅದಕ್ಕೆ ಕಾರಣವೇನು? ಅದಕ್ಕೆ ಕಾರಣವೊಂದೇ, ನಬಿ(ಸ)ರ ಜೀವನವನ್ನು ಹೋಲಿಸುವುದೇ ತಪ್ಪು, ಏಕೆಂದರೆ ನೀವು ಪ್ರವಾದಿಯಾಗಿದ್ದರು. ನಬಿ(ಸ)ರನ್ನು ಹೋಲಿಸುವುದಾದರೆ ಪ್ರವಾದಿಗಳೊಂದಿಗೆ ಮಾತ್ರ ಹೋಲಿಸಬಹುದು, ಆದರೆ ನಬಿ(ಸ)ರಿಗೆ ಲಭಿಸಿರುವ ಘನತೆಯು ಪ್ರವಾದಿಗಳಲ್ಲಿಯೂ ಸಿಗುವುದಿಲ್ಲ. ಏಕೆಂದರೆ ನಬಿ(ಸ)ರಿಗೆ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠತೆಯಿದೆ. ಇಲ್ಲಿ ಇದನ್ನೂ ನೆನಪಿನಲ್ಲಿಡಬೇಕು, ಮುಸೈಲಮಾನಿಗೆ ಉತ್ತರಿಸುವಾಗ ಹಝ್ರತ್ ಪೈಗಂಬರ್(ಸ)ರಿಗೆ ಆಡಳಿತದ ಹಕ್ಕನ್ನು ತಮ್ಮ ಮಕ್ಕಳಿಗಾಗಿ ಕಾಯ್ದಿರಿಸುವ ಉದ್ದೇಶವಿರಲಿಲ್ಲ. ಏಕೆಂದರೆ ಹಾಗಿದ್ದಿದ್ದರೆ, ನಬಿ(ಸ)ರ ನಿರಾಕರಣೆಯು 'ತವಕ್ಕುಲ್ ಅಲಲ್ಲಾಹ್' ಕಾರಣದಿಂದಲ್ಲ, ಬದಲಾಗಿ ಮಕ್ಕಳ ಮೇಲಿನ ಪ್ರೀತಿಯಿಂದ ಎಂದು ಹೇಳಲಾಗುತ್ತಿತ್ತು. ಆದರೆ ರಸೂಲುಲ್ಲಾಹ್(ಸ) ತಮ್ಮ ಮಕ್ಕಳನ್ನು ತಮ್ಮ ನಂತರ ಉತ್ತರಾಧಿಕಾರಿಯನ್ನಾಗಿ ಮಾಡಲಿಲ್ಲ, ಬದಲಾಗಿ ಹಝ್ರತ್ ಅಬೂಬಕರ್(ರ)ರ ಖಿಲಾಫತ್‌ನತ್ತ ಸೂಚನೆ ನೀಡಿದರು. ಇದರಿಂದ ತಿಳಿಯುವುದೇನೆಂದರೆ, ನಬಿ(ಸ)ರ ನಿರಾಕರಣೆಯು ಯಾವುದೇ ಲೌಕಿಕ ಉದ್ದೇಶಕ್ಕಾಗಿ ಆಗಿರಲಿಲ್ಲ, ಬದಲಾಗಿ ಒಂದು ಅಪಾರ ದೃಢನಂಬಿಕೆಯ ಫಲಿತಾಂಶವಾಗಿತ್ತು. ಅದೇ ರೀತಿ, ಮುಸೈಲಮಾ ಕದ್ದಾಬ್‌ನ ಸಹಾಯ ಪಡೆಯುವುದು ಧಾರ್ಮಿಕ ದೃಷ್ಟಿಯಿಂದಲೂ ಹಾನಿಕಾರಕವಾಗಿರಲಿಲ್ಲ ಎಂಬುದನ್ನೂ ನೆನಪಿನಲ್ಲಿಡಬೇಕು. ಏಕೆಂದರೆ ಅವನು, 'ನಾನು ನಿಮ್ಮನ್ನು ಈ ಷರತ್ತಿನ ಮೇಲೆ ಅನುಸರಿಸುತ್ತೇನೆ, ನೀವು ಕೆಲವು ಧಾರ್ಮಿಕ ವಿಷಯಗಳಲ್ಲಿ ನನ್ನ ಮಾತನ್ನು ಒಪ್ಪಬೇಕು' ಎಂದು ಷರತ್ತು ವಿಧಿಸಿದ್ದರೆ, ನಬಿ(ಸ) ತನ್ನ ಮಾತನ್ನು ಉಳಿಸಿಕೊಳ್ಳಲು ಅಥವಾ ತನ್ನ ಪರವಾಗಿರಲು ಅವನ ಬೇಡಿಕೆಯನ್ನು ನಿರಾಕರಿಸಿದರು ಎಂದು ಹೇಳಬಹುದಿತ್ತು. ಆದರೆ ಅವನು ಧರ್ಮದಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾನೆ ಎಂದು ತೋರಿಸುವಂತಹ ಯಾವುದೇ ಮಾತನ್ನು ಆಡಿರಲಿಲ್ಲ. ಹಾಗಾಗಿ, ನಬಿ(ಸ)ರ ನಿರಾಕರಣೆಯು ಕೇವಲ ದೇವನ ಮೇಲಿದ್ದ ತವಕ್ಕುಲ್ ಮತ್ತು ದೃಢನಂಬಿಕೆಯ ಫಲಿತಾಂಶವಾಗಿತ್ತು. ನೆನಪಿನಲ್ಲಿಡಬೇಕಾದ ಮತ್ತೊಂದು ವಿಷಯವೇನೆಂದರೆ, ನಬಿ(ಸ) ಬಯಸಿದ್ದರೆ ಆ ಸಮಯದಲ್ಲಿ ಮುಸೈಲಮಾನನ್ನು ಹಿಡಿದು ವಧಿಸಬಹುದಾಗಿತ್ತು. ಏಕೆಂದರೆ ಅವನು ಒಂದು ದೊಡ್ಡ ಗುಂಪಿನೊಂದಿಗೆ ಬಂದಿದ್ದರೂ, ಮದೀನಾದಲ್ಲಿದ್ದನು ಮತ್ತು ನಬಿ(ಸ)ರ ಅಧೀನದಲ್ಲಿ ಇದ್ದನು. ಆದರೆ ಈ ವಿಷಯದಲ್ಲೂ ನಬಿ(ಸ) ಅಲ್ಲಾಹನ ಮೇಲೆ ಭರವಸೆ ಇಟ್ಟರು; ಅವನೇ ಸ್ವತಃ ಈ ಪೀಡಕನನ್ನು ನಾಶಮಾಡುತ್ತಾನೆ ಎಂದು ಭರವಸೆ ಹೊಂದಿದ್ದರು. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್**.

(ಸೀರತುನ್ನಬೀ(ಸ), ಅನ್ವಾರುಲ್ ಉಲೂಮ್, ಸಂಪುಟ–1, ಪುಟ–500–504)

ಈಗ ನಾನು ಜುಮಾ ನಮಾಝ್ ನಂತರ ಕೆಲವು ಜನಾಝಾ ಗಾಯಿಬ್ ನಮಾಝ್ ನಿರ್ವಹಿಸುತ್ತೇನೆ, ಅವರಲ್ಲಿ ಮೊದಲನೆಯವರು, ಸನ್ಮಾನ್ಯ ಮಿರ್ಝಾ ಸಫ್‌ದರ್ ಮಹ್ಮೂದ್ ಸಾಹಿಬ್, ಸನ್ಮಾನ್ಯ ಗುಲಾಮ್ ರಸೂಲ್ ಸಾಹಿಬ್‌ರ ಪುತ್ರ, ಮಂಡಿ ಬಹಾವುದ್ದೀನ್ ನಿವಾಸಿ. ಇವರನ್ನು ಇತ್ತೀಚೆಗೆ ಸೆಪ್ಟೆಂಬರ್ 2ರಂದು ಮಂಡಿ ಬಹಾವುದ್ದೀನ್‌ನಲ್ಲಿ ಶಹೀದ್ ಮಾಡಲಾಯಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಯಾರೋ ಅಪರಿಚಿತ ವ್ಯಕ್ತಿಯೊಬ್ಬರು ಹಿಂಬಾಲಿಸಿ, ಹಿಂದಿನಿಂದ ಗುಂಡು ಹಾರಿಸಿ ಇವರನ್ನು ಶಹೀದ್ ಮಾಡಿದರು. ಹುತಾತ್ಮರಾಗುವಾಗ ಇವರ ವಯಸ್ಸು 65 ವರ್ಷವಾಗಿತ್ತು.

ವಿವರಗಳ ಪ್ರಕಾರ, ಘಟನೆ ನಡೆದ ದಿನ ಮಿರ್ಝಾ ಸಫ್‌ದರ್ ಮಹ್ಮೂದ್ ಸಾಹಿಬ್ ತಮ್ಮ ವರ್ಕ್‌ಶಾಪ್‌ನಿಂದ ಮಗ್ರಿಬ್ ನಮಾಝ್ ನಿರ್ವಹಿಸಲು ಮೋಟಾರ್ ಸೈಕಲ್‌ನಲ್ಲಿ ಹೊರಟಿದ್ದರು. ದಾರಿಯಲ್ಲಿ ಒಂದು ನಿರ್ಜನ ಪ್ರದೇಶವಿತ್ತು, ಅಲ್ಲಿಂದ ಹಾದುಹೋಗುವಾಗ ಯಾರೋ ಅಪರಿಚಿತ ವ್ಯಕ್ತಿ ಮೋಟಾರ್ ಸೈಕಲನ್ನು ಹಿಂಬಾಲಿಸಿ ಹಿಂದಿನಿಂದ ಗುಂಡು ಹಾರಿಸಿದನು. ದಿವಂಗತರಿಗೆ ಮೂರು ಗುಂಡುಗಳು ತಗುಲಿದವು, ಇದರಿಂದಾಗಿ ಅವರು ಸ್ಥಳದಲ್ಲೇ ಮೃತಪಟ್ಟರು. ಘಟನೆಯ ನಂತರ ದಾಳಿಕೋರ ಪರಾರಿಯಾದನು. ದಿವಂಗತ ಹುತಾತ್ಮರ ಕುಟುಂಬಕ್ಕೆ ಅಹ್ಮದಿಯತ್ ಇವರ ಅಜ್ಜಿ, ಗುಜರಾತ್ ಜಿಲ್ಲೆಯ ಖಾರಿಯಾನ್ ನಿವಾಸಿ, ಗೌರವಾನ್ವಿತ ಹುಸೇನ್ ಬೀಬಿ ಸಾಹಿಬರ ಮೂಲಕ ಬಂದಿತು. ಸಾಮಾನ್ಯವಾಗಿ ಕುಟುಂಬಗಳಲ್ಲಿ ಅಹ್ಮದಿಯತ್ ಪುರುಷರ ಮೂಲಕ ಬರುತ್ತದೆ, ಆದರೆ ಇಲ್ಲಿ ಒಬ್ಬ ಮಹಿಳೆಯ ಮೂಲಕ ಇವರ ಕುಟುಂಬಕ್ಕೆ ಅಹ್ಮದಿಯತ್ ಬಂದಿತು, ಅವರು ಎರಡನೇ ಖಿಲಾಫತಿನ ಆರಂಭಿಕ ದಿನಗಳಲ್ಲಿ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ನಂತರ, ಅಜ್ಜಿ ಹುಸೇನ್ ಬೀಬಿ ಸಾಹಿಬಾರ ಪ್ರೇರಣೆ ಮತ್ತು ಧರ್ಮಪ್ರಚಾರದಿಂದಾಗಿ, ದಿವಂಗತ ಹುತಾತ್ಮರ ಅಜ್ಜ, ಪರಸ್ಪರ ಸಂಬಂಧಿಯಾಗಿದ್ದ ಸನ್ಮಾನ್ಯ ನವಾಬ್ ದೀನ್ ಸಾಹಿಬ್ ಕೂಡ ಬೈಅತ್ ಮಾಡಿದರು. ಹುತಾತ್ಮರು ತಮ್ಮ ಪ್ರದೇಶದಲ್ಲಿ ಪ್ರಮುಖ ಅಹ್ಮದಿಯಾಗಿದ್ದರು ಮತ್ತು ತಮ್ಮ ವೃತ್ತಿ ಹಾಗೂ ಕೌಶಲ್ಯದಿಂದಾಗಿ ವಿಶೇಷ ಖ್ಯಾತಿಯನ್ನು ಹೊಂದಿದ್ದರು. ಅವರು ಮೆಕ್ಯಾನಿಕ್ ಆಗಿದ್ದರು ಮತ್ತು ತಮ್ಮದೇ ಆದ ವರ್ಕ್‌ಶಾಪ್ ಹೊಂದಿದ್ದರು. ಒಳ್ಳೆಯ ವ್ಯಾಪಾರವಿತ್ತು. ಸತ್ಯಸಂಧತೆ, ತತ್ವಗಳ ಪಾಲನೆ ಮತ್ತು ಸುಳ್ಳಿನ ಬಗೆಗಿನ ದ್ವೇಷವು ಅವರ ಪ್ರಮುಖ ಗುಣಲಕ್ಷಣಗಳಾಗಿದ್ದವು. ಬರುವ ಪ್ರತಿಯೊಬ್ಬರನ್ನೂ ಅತ್ಯಂತ ಉಲ್ಲಾಸ ಮತ್ತು ಪ್ರೀತಿಯಿಂದ ಸ್ವಾಗತಿಸುತ್ತಿದ್ದರು. ಬಹಳ ಆತ್ಮೀಯತೆಯಿಂದ ಸಲಾಮ್ ಮಾಡುತ್ತಿದ್ದರು. ಅವರ ಅಂಗಡಿಯಿಂದ ಯಾವುದೇ ಯಾಚಕನೂ ಎಂದಿಗೂ ಬರಿಗೈಯಲ್ಲಿ ಹಿಂತಿರುಗುತ್ತಿರಲಿಲ್ಲ.

ದಿವಂಗತ ಹುತಾತ್ಮರ ಪತ್ನಿ ನವೀದಾ ಸಾಹಿಬಾ ಹೇಳುತ್ತಾರೆ: ಖಿಲಾಫತಿನ ಮೇಲೆ ಅಪಾರ ಪ್ರೀತಿಯಿತ್ತು, ಐದು ಹೊತ್ತಿನ ನಮಾಝ್ ಜೊತೆಗೆ ತಹಜ್ಜುದ್ ನಿರ್ವಹಿಸುತ್ತಿದ್ದರು ಮತ್ತು ಎಂ.ಟಿ.ಎ. ಕಾರ್ಯಕ್ರಮಗಳಿಂದ ನಿಯಮಿತವಾಗಿ ಲಾಭ ಪಡೆಯುತ್ತಿದ್ದರು. ಪ್ರತಿ ತಿಂಗಳ 1 ನೇ ತಾರೀಖಿನಂದು ತಮ್ಮ ಆದಾಯದ ಲೆಕ್ಕವನ್ನು ಪೂರ್ಣಗೊಳಿಸಿ, ಮಾಲ್ ಸೆಕ್ರಟರಿಯನ್ನು ಸಂಪರ್ಕಿಸಿ ನಿಯಮಿತವಾಗಿ ಚಂದಾವನ್ನು ಪಾವತಿಸುತ್ತಿದ್ದರು. ಮಾಲ್ ಸೆಕ್ರಟರಿಯ ಮನೆಗೆ ಹೋಗಿ ಕೊಡುತ್ತಿದ್ದರು. ಪ್ರತಿದಿನ ನಿಯಮಿತವಾಗಿ ಸದಖ ಮಾಡುತ್ತಿದ್ದರು, ಪ್ರತಿ ತಿಂಗಳು ಸದಖವಾಗಿ ಆಡನ್ನು ನೀಡುತ್ತಿದ್ದರು. ಮಸೀದಿಯ ಮತ್ತು ಇತರ ಆರ್ಥಿಕ ಯೋಜನೆಗಳಲ್ಲಿ ಮೊದಲು ತಮ್ಮ ಪಾಲನ್ನು ನೀಡುತ್ತಿದ್ದರು. ವಸಿಯ್ಯತ್ ವ್ಯವಸ್ಥೆಯಲ್ಲಿ ಸೇರಿದ್ದರು ಮತ್ತು ಕುಟುಂಬದ ಎಲ್ಲರನ್ನೂ ವಸಿಯ್ಯತ್ ವ್ಯವಸ್ಥೆಯಲ್ಲಿ ಸೇರಿಸಿದ್ದರು. ನೌಕರರ ಬಗ್ಗೆಯೂ ಬಹಳ ಕಾಳಜಿ ವಹಿಸುತ್ತಿದ್ದರು, ಅವರಿಗೆ ಯಾವುದೇ ಆರ್ಥಿಕ ಅಗತ್ಯವಿದ್ದರೆ ಅಥವಾ ಯಾರಾದರೂ ಕಾಯಿಲೆ ಬಿದ್ದರೆ ಅದನ್ನು ಪೂರೈಸುತ್ತಿದ್ದರು. ಅವರ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಿದ್ದರು, ಅವರ ಖರ್ಚುಗಳನ್ನು ನಿಭಾಯಿಸಲು ಪ್ರಯತ್ನಿಸುತ್ತಿದ್ದರು. ವರ್ಕ್‌ಶಾಪ್ ಇತ್ತು, ಜನರು ಸಾಮಾನ್ಯವಾಗಿ ಸಂಪಾದನೆಯತ್ತ ಗಮನ ಹರಿಸುತ್ತಾರೆ, ಆದರೆ ಯಾವುದೇ ಪ್ರಯಾಣಿಕರ ವಾಹನ ಕೆಟ್ಟುಹೋದರೆ, ಬಹಳ ಕಡಿಮೆ ಶುಲ್ಕಕ್ಕೆ ಕೆಲಸ ಮಾಡುತ್ತಿದ್ದರು. ಕೆಲವೊಮ್ಮೆ ಕೆಲವರ ಕೆಲಸವನ್ನು ಉಚಿತವಾಗಿಯೂ ಮಾಡಿಕೊಡುತ್ತಿದ್ದರು. ಎಷ್ಟೇ ಕಾರ್ಯನಿರತರಾಗಿದ್ದರೂ ಜಮಾಅತಿನ ಕಾರ್ಯಕ್ರಮಗಳಿಗೆ ಆದ್ಯತೆ ನೀಡುತ್ತಿದ್ದರು. ಮಂಡಿ ಬಹಾವುದ್ದೀನ್ ಜಿಲ್ಲೆಯ ಅಮೀರ್ ಸಾಹಿಬ್ ಹೇಳುತ್ತಾರೆ: ಇವರು ಶಹೀದ್ ಆದ ಸಮಯದಲ್ಲಿ, ಜಮಾಅತಿನ ನಾಯಬ್ ಸದರ್ ಆಗಿದ್ದರು. ಜಾಯಿದಾದ್ ಸೆಕ್ರಟರಿ, ನಾಯಬ್ ಝಯೀಮ್ ಅನ್ಸಾರುಲ್ಲಾ, ಮಂಡಿ ಬಹಾವುದ್ದೀನ್ ನಗರದ ಮುಂತಝಿಮ್ ಮಾಲ್ ಅನ್ಸಾರುಲ್ಲಾ ಆಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆಯುತ್ತಿದ್ದರು. ಅವರಿಗೆ ಅನೇಕ ಜವಾಬ್ದಾರಿಗಳನ್ನು ವಹಿಸಲಾಗಿತ್ತು. ಮಸೀದಿಯ ನಿರ್ವಹಣೆ–ಅಂದರೆ ಆಡಳಿತವೂ ಅವರ ಜವಾಬ್ದಾರಿಯಾಗಿತ್ತು ಮತ್ತು ಕೀಲಿಗೈ ಅವರ ಬಳಿಯಿತ್ತು. ಪ್ರತಿ ನಮಾಝ್‌ಗೆ ಹೋಗಿ ಮಸೀದಿಯನ್ನು ತೆರೆಯುತ್ತಿದ್ದರು. ವ್ಯಾಪಾರಸ್ಥರು ಸಾಮಾನ್ಯವಾಗಿ ಈ ಕಡೆ ಗಮನ ಹರಿಸುವುದಿಲ್ಲ, ಆದರೆ ಇವರು ಪ್ರತಿ ನಮಾಝ್ ಸಮಯದಲ್ಲಿ ಹೋಗಿ ಮಸೀದಿಯನ್ನು ತೆರೆಯುತ್ತಿದ್ದರು. ಮುಝಫ್ಫರ್ ಮಹ್ಮೂದ್ ಸಾಹಿಬ್, ಒಬ್ಬ ಮುರಬ್ಬಿ, ಹೇಳುತ್ತಾರೆ: ಅವರು ನನಗೆ, 'ಕಳೆದ 25 ವರ್ಷಗಳಿಂದ ಪ್ರತಿದಿನ ವರ್ಕ್‌ಶಾಪ್‌ಗೆ ಬರುವ ಮೊದಲು ನಾನು ಎರಡು ನಫಲ್ ನಮಾಝ್ ನಿರ್ವಹಿಸುತ್ತೇನೆ' ಎಂದು ಹೇಳಿದ್ದರು.

ಹುತಾತ್ಮರ ಅಗಲಿದ ಕುಟುಂಬದಲ್ಲಿ, ಪತ್ನಿ ಸನ್ಮಾನ್ಯ ನವೀದಾ ಸಫ್‌ದರ್ ಸಾಹಿಬಾರಲ್ಲದೆ, ಇಬ್ಬರು ಪುತ್ರರಾದ ಕಾಮ್ರಾನ್ ಸಫ್‌ದರ್ ಮತ್ತು ಲುಕ್ಮಾನ್ ಸಫ್‌ದರ್ ಇದ್ದಾರೆ. ಇವರು ವಿವಾಹಿತರಾಗಿದ್ದಾರೆ. ಅಲ್ಲಾಹನು ದಿವಂಗತ ಹುತಾತ್ಮರ ಸ್ಥಾನಮಾನಗಳನ್ನು ಉನ್ನತಗೊಳಿಸಲಿ ಮತ್ತು ಜನ್ನತುಲ್ ಫಿರ್ದೌಸ್‌ನಲ್ಲಿ ಉನ್ನತ ಸ್ಥಾನವನ್ನು ಕರುಣಿಸಲಿ. ಎಲ್ಲ ಸಂಬಂಧಿಕರಿಗೂ ಉತ್ತಮ ತಾಳ್ಮೆಯನ್ನು ಕರುಣಿಸಲಿ ಮತ್ತು ಅವರಿಗೆ ಬೆಂಬಲಿಗ ಹಾಗೂ ಸಹಾಯಕರಾಗಿರಲಿ.

ಎರಡನೇ ಪ್ರಸ್ತಾಪ ಅಝೀಝಾ ಅಮತುಲ್ ಅಝೀಝ್‌ರದ್ದು. ಇವರೂ ಇತ್ತೀಚೆಗೆ 62ನೇ ವಯಸ್ಸಿನಲ್ಲಿ ನಿಧನರಾದರು. ಸ್ವಲ್ಪ ಸಮಯದಿಂದ ಬಹಳ ಕಾಯಿಲೆಯಿಂದ ಬಳಲುತ್ತಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಕೃಪೆಯಿಂದ ವಸಿಯ್ಯತ್ ಮಾಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತು ಹಝ್ರತ್ ಸೈಯದಾ ಉಮ್ಮೆ ತಾಹಿರ್ ಸಾಹಿಬಾರ ಮೊಮ್ಮಗಳಾಗಿದ್ದರು, ಸಾಹಿಬ್‌ಝಾದಿ ಅಮತುಲ್ ಹಕೀಮ್ ಸಾಹಿಬಾ ಹಾಗೂ ಸನ್ಮಾನ್ಯ ಸೈಯದ್ ದಾವೂದ್ ಮುಝಫ್ಫರ್ ಶಾಹ್ ಸಾಹಿಬ್‌ರ ಪುತ್ರಿಯಾಗಿದ್ದರು. ಸೈಯದ್ ದಾವೂದ್ ಮುಝಫ್ಫರ್ ಸಾಹಿಬ್,

ಉಮ್ಮೆ ತಾಹಿರ್‌ರ ಸೋದರಳಿಯ ಮತ್ತು ಸೈಯದ್ ಮಹಮೂದುಲ್ಲಾ ಶಾಹ್ ಸಾಹಿಬ್‌ರ ಮಗನಾಗಿದ್ದರು. ನನ್ನ ಸೋದರಮಾವನ ಮಗಳೂ ಆಗಿದ್ದರು ಮತ್ತು ನನ್ನ ಪತ್ನಿಯ ಅತ್ಯಂತ ಕಿರಿಯ ಸಹೋದರಿಯೂ ಆಗಿದ್ದರು. ಇವರ ನಿಕಾಹನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಖಾಲಿದ್ ಝಫರ್ ಸಾಹಿಬ್‌ರೊಂದಿಗೆ ನೆರವೇರಿಸಿದ್ದರು. ಅವರ ಮೊದಲ ಪತ್ನಿ ನಿಧನರಾಗಿದ್ದರು ಮತ್ತು ಅಝೀಝಾ ಅಮತುಲ್ ಅಝೀಝುರೊಂದಿಗೆ ಅವರ ಎರಡನೇ ವಿವಾಹವಾಗಿತ್ತು. ಅಲ್ಲಾಹನು ಅಝೀಝಾಗೆ ಇಬ್ಬರು ಗಂಡುಮಕ್ಕಳನ್ನು ಕರುಣಿಸಿದನು, ಮತ್ತು ಇಬ್ಬರೂ ಯೋಗ್ಯರಾಗಿದ್ದಾರೆ. ಒಬ್ಬ ವಕೀಲರಾಗಿದ್ದು ವಕ್ಫೆ ಝಿಂದಗಿ ಆಗಿದ್ದಾರೆ ಮತ್ತು ರಬ್ವಾದಲ್ಲಿ ನಿಝಾರತ್ ಉಮೂರೆ ಆಮ್ಮಾದಲ್ಲಿ ಕೆಲಸ ಮಾಡುತ್ತಿದ್ದಾರೆ ಹಾಗೂ ಉತ್ತಮ ಯೋಗ್ಯ ವಕೀಲನಾಗಿದ್ದಾರೆ. ಎರಡನೆಯವನು ಹಾಶಿರ್ ಝಫರ್, ಮೊದಲ ಮಗ ಮಹಮೂದ್ ಇಫ್ತಿಖಾರ್ ಮತ್ತು ಎರಡನೆಯವರು ಹಾಶಿರ್ ಅಹ್ಮದ್. ಇವರು ಜರ್ಮನಿಯಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಇಬ್ಬರೂ ಮಕ್ಕಳು ತಮ್ಮ ತಾಯಿಯ ಸೇವೆಯನ್ನು ತಮ್ಮ ಕೈಲಾದಷ್ಟು ಉತ್ತಮವಾಗಿ ಮಾಡಿದ್ದಾರೆ. ಅಲ್ಲಾಹನು ಅವರಿಗೂ ಪ್ರತಿಫಲ ನೀಡಲಿ ಮತ್ತು ಭವಿಷ್ಯದಲ್ಲೂ ತಾಯಿಯು ಪ್ರಾರ್ಥನೆಗಳ ವಾರಸುದಾರರನ್ನಾಗಿಸಲಿ ಹಾಗೂ ಸತ್ಕಾರ್ಯಗಳಲ್ಲಿ ದೃಢವಾಗಿರಿಸಲಿ.

ಅಝೀಝಾಳ ಜೀವನವು ಬಹಳ ಕಷ್ಟದಲ್ಲಿ ಕಳೆದಿದ್ದರೂ, ಅವರು ಬಹಳ ತಾಳ್ಮೆಯಿಂದ ಜೀವನ ಸಾಗಿಸಿದ್ದಾರೆ. ಅವರಂತೆ ತಾಳ್ಮೆ ವಹಿಸುವವರನ್ನು ನಾನು ಬಹಳ ವಿರಳವಾಗಿ ನೋಡಿದ್ದೇನೆ. ಅಝೀಝಾಳ ಸಹೋದರ ಸೈಯದ್ ಖಾಲಿದ್ ಅಹ್ಮದ್ ಶಾಹ್ ಸಾಹಿಬ್ ಹೇಳುತ್ತಾರೆ: "ನಮ್ಮ ಈ ಸಹೋದರಿ ತನ್ನ ಪೋಷಕರ ಬಹಳ ಸೇವೆ ಮಾಡಿದಳು. ತಾಯಿಯ ನಿಧನದ ನಂತರ ತಂದೆಯ ಬಹಳ ಸೇವೆ ಮಾಡಿದಳು. ಸಹಾನುಭೂತಿ ಮತ್ತು ಬಡವರ ಪೋಷಣೆಯಲ್ಲಿ ತನ್ನ ತಾಯಿಯ ಹಾದಿಯಲ್ಲಿಯೇ ನಡೆದಿದ್ದಳು. ಖಿಲಾಫತಿನ ಮೇಲಿನ ಪ್ರೀತಿ ಮತ್ತು ಭಕ್ತಿ ಅಸಾಟಿಯಾಗಿತ್ತು. ಮಕ್ಕಳ ತರಬೇತಿಯನ್ನೂ ಉತ್ತಮ ರೀತಿಯಲ್ಲಿ ಮಾಡಿದಳು. ಅವಳ ಒಂದು ಉತ್ತಮ ಗುಣವೇನೆಂದರೆ, ಯಾರ ವಿರುದ್ಧವೂ ಯಾವುದೇ ಮಾತು ಆಡುತ್ತಿರಲಿಲ್ಲ ಮತ್ತು ಕೇಳಿಸಿಕೊಳ್ಳುತ್ತಿರಲಿಲ್ಲ. ತನ್ನ ಹೃದಯವನ್ನು ಸದಾ ಸ್ವಚ್ಛವಾಗಿಟ್ಟುಕೊಳ್ಳುತ್ತಿದ್ದಳು. ಯಾರ ಕಷ್ಟವನ್ನೂ ಅವಳಿಂದ ನೋಡಲಾಗುತ್ತಿರಲಿಲ್ಲ. ತನ್ನ ಕಷ್ಟವನ್ನು ಸಹಿಸಿಕೊಳ್ಳುವ ಧೈರ್ಯ ಮತ್ತು ತಾಳ್ಮೆ ಬಹಳಷ್ಟಿತ್ತು." ನಾನು ಹೇಳಿದಂತೆ, ಅವಳು ಬಹಳ ತಾಳ್ಮೆ ವಹಿಸಿದಳು. "ಜಗಳಗಳಿಂದ ಪಾರಾಗಲು ತನ್ನನ್ನು ಲೌಕಿಕ ಜಂಜಾಟಗಳಿಂದ ದೂರವಿರಿಸಿಕೊಂಡಿದ್ದಳು. ಜನರು ಅವಳ ಬಗ್ಗೆ ತಪ್ಪು ಮಾತುಗಳನ್ನಾಡಿದರು ಮತ್ತು ಟೀಕೆಗಳನ್ನೂ ಮಾಡಿದರು, ಆದರೆ ಅವಳು ಯಾರೊಂದಿಗೂ ಜಗಳವಾಡಲಿಲ್ಲ. ಏನೇ ಇರಲಿ, ಅವಳು ಯಾರೊಂದಿಗೂ ಜಗಳವಾಡಲಿಲ್ಲ, ಉತ್ತರಿಸಲಿಲ್ಲ ಮತ್ತು ಯಾರಿಗೂ ಭಾವನಾತ್ಮಕವಾಗಿ ನೋವುಂಟುಮಾಡಲಿಲ್ಲ. ಇತರರ ಕಷ್ಟವನ್ನು ಅವಳಿಂದ ಸಹಿಸಿಕೊಳ್ಳಲಾಗುತ್ತಿರಲಿಲ್ಲ. ಅವರ ಸಹಾಯಕ್ಕಾಗಿ ತಹತಹಿಸುತ್ತಿದ್ದಳು. ಸಣ್ಣ ಮಕ್ಕಳನ್ನು ಬಹಳ ಪ್ರೀತಿಸುತ್ತಿದ್ದಳು. ಬಹಳ ಸ್ವಾಭಿಮಾನಿಯಾಗಿದ್ದಳು. ತನ್ನ ಅಗತ್ಯವನ್ನು ತನ್ನ ಮನಸ್ಸಿನಲ್ಲೇ ಬಚ್ಚಿಟ್ಟುಕೊಳ್ಳುತ್ತಿದ್ದಳು. ಯಾರಿಗೂ ವ್ಯಕ್ತಪಡಿಸುತ್ತಿರಲಿಲ್ಲ. ಅಸಾಧಾರಣ ತವಕ್ಕುಲ್ ಮತ್ತು ಅಲ್ಲಾಹನ ಮೇಲೆ ಭರವಸೆಯಿತ್ತು. ಅಲ್ಲಾಹನು ಕೂಡ ಅವಳ ಸ್ವಾಭಿಮಾನವನ್ನು ಕಾಪಾಡುತ್ತಿದ್ದನು ಮತ್ತು ಅದೃಶ್ಯವಾಗಿ ಅವಳ ಅಗತ್ಯಗಳನ್ನು ಪೂರೈಸುತ್ತಿದ್ದನು." ಅವರ ಸಹೋದರಿ ಅಮತುಲ್ ರವೂಫ್ ಸಾಹಿಬಾ, ದಿವಂಗತ ಡಾಕ್ಟರ್ ಕಸೀರ್ ಮುಜ್ತಬಾರ ಪತ್ನಿ. ಅವರು ಹೇಳುತ್ತಾರೆ: "ನಮ್ಮ ಸಹೋದರಿ ಬಹಳ ಮೌನಿ, ನಿರುಪದ್ರವಿ, ತಾಳ್ಮೆಯುಳ್ಳ, ಅತ್ಯಂತ ಸ್ವಾಭಿಮಾನಿ ಸ್ವಭಾವದವಳಾಗಿದ್ದಳು. ಬಡವರ ಬಗ್ಗೆ ಕಾಳಜಿ ವಹಿಸುವವಳು, ಬಹಳಷ್ಟು ದಾನ–ಧರ್ಮ ಮಾಡುವವಳಾಗಿದ್ದಳು. ಖಿಲಾಫತನ್ನು ಅಸಾಧಾರಣವಾಗಿ ಗೌರವಿಸುವವಳಾಗಿದ್ದಳು ಮತ್ತು ನಾನು ಏನಾದರೂ ಹೇಳಿದರೆ, ತಕ್ಷಣ ಒಪ್ಪಿಕೊಳ್ಳುತ್ತಿದ್ದಳು. ಆಸ್ಪತ್ರೆಯಲ್ಲಿ ಕಾಯಿಲೆ ಬಿದ್ದಾಗ, ತಾನು ಇಂತಹ ಕಾಯಿಲೆಯಲ್ಲಿದ್ದೇನೆ, ಇಲ್ಲಿಂದ ಬದುಕುಳಿಯುವುದು ಕಷ್ಟ, ಆಸ್ಪತ್ರೆಗೆ ಹೋಗುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅವಳಿಗೆ ತಿಳಿದಿತ್ತು. ಆದರೆ ನಾನು ಅವಳಿಗೆ, ನೀವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಿರಿ ಎಂದು ಹೇಳಿದಾಗ, ಮೊದಲು ನಿರಾಕರಿಸಿದ್ದರೂ ತಕ್ಷಣ ಒಪ್ಪಿಕೊಂಡಳು ಮತ್ತು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನೂ ಪಡೆದಳು."

ಅವರ ಮಗ ಮಹಮೂದ್ ಇಫ್ತಿಖಾರ್ ಹೇಳುತ್ತಾನೆ: "ತಾಯಿ ನನಗೆ ಉಪದೇಶಿಸುತ್ತಾ ಹೇಳುತ್ತಿದ್ದರು: 'ನೀನು ಹಝ್ರತ್ ಮಸೀಹ್‌ರ ಕುಟುಂಬಕ್ಕೆ ಸೇರಿದವನು, ಆದ್ದರಿಂದ ಜಮಾಅತಿನ ಸೇವೆ ಮಾಡುವುದು ನಿನ್ನ ದುಪ್ಪಟ್ಟು ಕರ್ತವ್ಯವಾಗಿದೆ.' ಅವರು ಹೇಳುತ್ತಿದ್ದರು: ಐದನೇ ಖಿಲಾಫತಿನ ಆರಂಭದಲ್ಲೇ, ನಾವು ಚಿಕ್ಕ ಮಕ್ಕಳಾಗಿದ್ದೆವು, ತಕ್ಷಣವೇ ನಮ್ಮಿಬ್ಬರಿಂದಲೂ ಖಲೀಫರಿಗೆ ಪತ್ರ ಬರೆಸಿದರು. ನಂತರ ನಮಗೆ ನಿಯಮಿತವಾಗಿ ಪತ್ರ ಬರೆಯುವಂತೆ ಉಪದೇಶಿಸುತ್ತಿದ್ದರು. ನಮಾಝ್ ಮತ್ತು ಖುತ್ಬಾ ಕೇಳುವಂತೆ ಯಾವಾಗಲೂ ಉಪದೇಶಿಸುತ್ತಿದ್ದರು. ಜಮಾಅತಿನ ವ್ಯವಸ್ಥೆಯ ಬಗ್ಗೆ ಬಹಳ ಸ್ವಾಭಿಮಾನವಿತ್ತು ಮತ್ತು ವ್ಯವಸ್ಥೆಯ ವಿರುದ್ಧ ಮಾತನಾಡುವುದನ್ನು ಅಥವಾ ಟೀಕಿಸುವುದನ್ನು ಸಹಿಸುತ್ತಿರಲಿಲ್ಲ. ಅವರ ಮಗ ಹೇಳುತ್ತಾನೆ: 'ತನ್ನ ಪೋಷಕರ ಮಕ್ಕಳ ಪೈಕಿ ಯಾರಾದರೂ ವಕ್ಫ್ ಮಾಡಿದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತು ಮತ್ತು ಅವರಿಗೆ ಎಂದಿಗೂ ಆರ್ಥಿಕ ಮುಗ್ಗಟ್ಟು ಉಂಟಾಗುವುದಿಲ್ಲ ಎಂದು ಹೇಳುತ್ತಿದ್ದರು. ತನ್ನ ಇಬ್ಬರು ಮಕ್ಕಳ ಬಗ್ಗೆಯೂ, ಇವರು ವಕ್ಫ್ ಮಾಡಬೇಕೆಂಬ ಆಸೆ ಅವರದಾಗಿತ್ತು. ಒಬ್ಬನಂತೂ ವಕ್ಫ್ ಮಾಡಿದನು. ಅವನು ಹೇಳುತ್ತಾನೆ, ನಾನು ವಕ್ಫ್ ಮಾಡಿದಾಗ, ನನಗೆ ಉಪದೇಶಿಸುತ್ತಾ ಹೇಳಿದರು, "ಈಗ ನೀನು ವಕ್ಫ್ ಮಾಡಿದ್ದೀಯಾ, ಆದರೆ ಅದನ್ನು ಚೆನ್ನಾಗಿ ನಿಭಾಯಿಸಬೇಕು." ಬಡ್ತಿ ಹೊಂದಿ ನಾಯಬ್ ನಾಝಿರ್ ಆದಾಗ, "ಈಗ ಈ ಬಗ್ಗೆ ಯಾವುದೇ ಹೆಮ್ಮೆ ಪಡಬಾರದು, ಬದಲಾಗಿ ವಿನಯದಿಂದ ಕೆಲಸ ಮಾಡಬೇಕು" ಎಂದರು.'

ಕಚೇರಿ ವಿಷಯಗಳ ಬಗ್ಗೆ ಅವನು ಹೇಳುತ್ತಾನೆ: "ನನಗಾಗಿ ಬಹಳ ಪ್ರಾರ್ಥಿಸುತ್ತಿದ್ದರು. ಜಮಾಅತಿನ ಪರಿಸ್ಥಿತಿಯ ಬಗ್ಗೆ ಕೇಳುತ್ತಲೇ ಇರುತ್ತಿದ್ದರು. ಶುಕ್ರವಾರದಂದು ಕ್ಷೇಮ ವಿಚಾರಿಸುತ್ತಿದ್ದರು ಮತ್ತು ಏನಾದರೂ ಕೆಲಸವಿದ್ದರೆ, 'ಏನು ಮಾಡುತ್ತಿದ್ದೀಯಾ?' ಎಂದು ಕೇಳುತ್ತಿದ್ದರು. ನಾನು, ಆ ಸಮಯದಲ್ಲಿ ಜಮಾಅತಿನ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರೆ, 'ಸರಿ, ಮೊದಲು ನಿನ್ನ ಜಮಾಅತಿನ ಕೆಲಸ ಮುಗಿಸು, ಆಮೇಲೆ ನನ್ನ ಈ ಕೆಲಸ ಮಾಡಿಕೊಡು' ಎಂದು ಹೇಳುತ್ತಿದ್ದರು. ತಮಗಿಂತ ಹೆಚ್ಚಾಗಿ ಜನರ ಬಗ್ಗೆ ಕಾಳಜಿಯಿತ್ತು ಮತ್ತು ಅವರ ಅಗತ್ಯಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಯಾರಾದರೂ ಸಹಾಯ ಕೇಳಿದರೆ ತಾಯಿ ಖಂಡಿತ ಸಹಾಯ ಮಾಡುತ್ತಿದ್ದರು. ಅವರಲ್ಲಿ ಸಹನಾಶಕ್ತಿ ಮತ್ತು ತಾಳ್ಮೆ ಬಹಳಷ್ಟಿತ್ತು. ತನ್ನ ಕಷ್ಟವನ್ನು ಸಹಿಸಿಕೊಳ್ಳುತ್ತಿದ್ದರು, ಆದರೆ ಬೇರೆಯವರ ಕಷ್ಟವನ್ನು ಸಹಿಸುತ್ತಿರಲಿಲ್ಲ ಮತ್ತು ಯಾರಿಗೂ ತೊಂದರೆಯಾಗಬಾರದು ಎಂದು ಬಯಸುತ್ತಿದ್ದರು ಅವರ ಕಷ್ಟವನ್ನು ದೂರ ಮಾಡಲು ಪ್ರಯತ್ನಿಸುತ್ತಿದ್ದರು. ತನ್ನ ಎಲ್ಲ ಸಹೋದರ–ಸಹೋದರಿಯರು, ಅವರ ಮಕ್ಕಳು ಮತ್ತು ನನ್ನ ತಂದೆಯ ಮೊದಲ ಪತ್ನಿಯ ಮಕ್ಕಳೊಂದಿಗೆ ಬಹಳ ಪ್ರೀತಿ ಮತ್ತು ವಿಶ್ವಾಸದ ಸಂಬಂಧ ಹೊಂದಿದ್ದರು ಮತ್ತು ಯಾವಾಗಲೂ ಅವರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ನಮಗೆ, ಅಂದರೆ ಸಹೋದರರಿಗೂ ಹೇಳುತ್ತಿದ್ದರು, 'ನೀವು ಯಾವಾಗಲೂ ಒಟ್ಟಿಗಿರಬೇಕು. ಇಬ್ಬರು ಮಕ್ಕಳು ತಾಯಂದಿರಾಗಿದ್ದರೂ, ನೀವು ಒಟ್ಟಿಗಿರಿ ಮತ್ತು ಒಂದೇ ಜೀವವಾಗಿರಿ, ಜಗಳವಾಡಲೇಬಾರದು.' ನನ್ನ ತಂದೆಯ ಮೊದಲ ಪತ್ನಿಯ ಮಕ್ಕಳು ಮತ್ತು ನಮ್ಮ ನಡುವೆ ಯಾವುದೇ ಭೇದಭಾವ ಮೂಡುವಂತಹ ಮಾತನ್ನು ಅವರು ಎಂದಿಗೂ ಆಡಿಲ್ಲ, ಬದಲಾಗಿ ಯಾವಾಗಲೂ ಪ್ರೀತಿ ಮತ್ತು ವಿಶ್ವಾಸದಿಂದ ಇರಲು ಉಪದೇಶಿಸುತ್ತಿದ್ದರು." ನಾನೂ ಅವರನ್ನು ಇಲ್ಲಿ ನೋಡಿದ್ದೇನೆ. ಚಿಕ್ಕ ಮಕ್ಕಳನ್ನು ಬಿಟ್ಟು ನಿಧನರಾಗಿದ್ದ ತನ್ನ ಪತಿಯ ಮೊದಲ ಪತ್ನಿಯ ಮಕ್ಕಳ ಬಗ್ಗೆ ಅವರು ಬಹಳ ಕಾಳಜಿ ವಹಿಸಿದ್ದಾರೆ. ಅವರನ್ನು ಸಂಪೂರ್ಣವಾಗಿ ತನ್ನ ಸ್ವಂತ ಮಕ್ಕಳಂತೆಯೇ ನೋಡಿಕೊಂಡಿದ್ದಾರೆ, ಎಷ್ಟರಮಟ್ಟಿಗೆ ಸಾಧ್ಯವೋ, ಎಂತಹ ಪರಿಸ್ಥಿತಿಯಿತ್ತೋ, ಅದಕ್ಕೆ ತಕ್ಕಂತೆ, ಅವರಿಗಾಗಿ ಏನು ಮಾಡಬಹುದೋ ಅದನ್ನು ಮಾಡಿದ್ದಾರೆ. ಈ ಮಗ ಬರೆಯುತ್ತಾನೆ: "ನಮ್ಮ ಬಾಲ್ಯದಲ್ಲಿ ನಮ್ಮ ಬಗ್ಗೆ ಅವರಿಗೆ ಅತಿ ದೊಡ್ಡ ಚಿಂತೆಯೆಂದರೆ ನಾವು ಪವಿತ್ರ ಖುರ್‌ಆನನ್ನು ಪೂರ್ಣಗೊಳಿಸಬೇಕು, ಓದಬೇಕು ಎಂಬುದಾಗಿತ್ತು. ಅದಕ್ಕಾಗಿ ನಮ್ಮನ್ನು ನಿಯಮಿತವಾಗಿ ಪವಿತ್ರ ಖುರ್‌ಆನ್ ಕಲಿಸುವವರ ಬಳಿ ಕರೆದೊಯ್ಯುತ್ತಿದ್ದರು ಮತ್ತು ಕರೆತರುತ್ತಿದ್ದರು. ನಮಾಝ್‌ನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸುವತ್ತ ಗಮನ ಸೆಳೆಯುತ್ತಿದ್ದರು. ತಮ್ಮ ಪೋಷಕರನ್ನು ಸ್ಮರಿಸಿದಾಗಲೆಲ್ಲ, ಅವರ ಸೇವೆಗಳನ್ನು ಬಹಳವಾಗಿ ನೆನಪಿಸಿಕೊಳ್ಳುತ್ತಿದ್ದರು. 'ಅವರು ಬದುಕಿದ್ದರೆ ನೋಡುತ್ತಿದ್ದರು, ಅವರು ಕಷ್ಟದ ಪರಿಸ್ಥಿತಿಯಲ್ಲಿ ಬದುಕಿದರು, ಆದರೆ ಇಂದು ನಮ್ಮ ಪರಿಸ್ಥಿತಿ ಬಹಳ ಉತ್ತಮವಾಗಿದೆ ಮತ್ತು ಅದಕ್ಕೆ ಹೋಲಿಸಿದರೆ ಸಮೃದ್ಧಿಯಾಗಿದೆ' ಎಂದು ಹೇಳುತ್ತಿದ್ದರು. ತಮ್ಮ ಪೋಷಕರಿಗೆ ಸೇವೆ ಸಲ್ಲಿಸಿದವರ ಸೇವೆಯನ್ನೂ ಬಹಳ ಮಾಡುತ್ತಿದ್ದರು ಮತ್ತು ಕೃತಜ್ಞತೆ ಸಲ್ಲಿಸುತ್ತಿದ್ದರು." ನಂತರ ಈ ಮಗ ಹೇಳುತ್ತಾನೆ: "ಅವರು ನಮಗೆ ಏನು ಹೇಳುತ್ತಿದ್ದರೋ, ಅದನ್ನು ಸ್ವತಃ ಪಾಲಿಸುತ್ತಿದ್ದರು ಮತ್ತು ಹಿರಿಯರ ಉಪದೇಶದ ಕಥೆಗಳನ್ನು ಹೇಳುತ್ತಿದ್ದರು. ಬಾಲ್ಯದಲ್ಲಿ ನಾವು ಓದಲು ಕಲಿತಾಗ, ನಮಗೆ ಓದಲು ನೀಡಿದ ಮೊದಲ ಪುಸ್ತಕ ಸೈಯದನಾ ಬಿಲಾಲ್ ಮತ್ತು ಶಹಝಾದಾ ಅಬ್ದುಲ್ ಲತೀಫ್ ಸಾಹಿಬ್‌ರದ್ದಾಗಿತ್ತು."

ಅದೇ ರೀತಿ, ಚಂದಾಗಳ ಬಗ್ಗೆ ಬಹಳ ಕಾಳಜಿಯಿತ್ತು. ಆರಂಭದಲ್ಲೇ ಪಾವತಿಯಾಗಬೇಕು ಮತ್ತು ಯಾವುದೇ ಚಂದಾ ತಡವಾಗಬಾರದು ಎಂದು ಬಯಸುತ್ತಿದ್ದರು. "ಒಮ್ಮೆ ನಾನು ವಾಗ್ದಾನ ಬರೆಸಿದ್ದೆ, ಆದರೆ ಹಣವಿರಲಿಲ್ಲ, ಬಹಳ ಚಿಂತೆಯಿತ್ತು. ಆಗ ಅಲ್ಲಾಹನಿಗೆ ಪ್ರಾರ್ಥಿಸಿದೆ, ಅಲ್ಲಾಹನು ಶೀಘ್ರದಲ್ಲೇ ವ್ಯವಸ್ಥೆ ಮಾಡಿದನು" ಎಂದು ಹೇಳುತ್ತಿದ್ದರು. "ನಮಗೂ ಚಂದಾಗಳನ್ನು ನಿಯಮಿತವಾಗಿ ಪಾವತಿಸಲು ಉಪದೇಶಿಸುತ್ತಿದ್ದರು" ನಿಜವಾದ ಕನಸುಗಳು ಬೀಳುತ್ತಿದ್ದವು. ಇತರರ ರಹಸ್ಯಗಳನ್ನು ಯಾವಾಗಲೂ ಕಾಪಾಡುತ್ತಿದ್ದರು. ಸ್ವಭಾವದಲ್ಲಿ ರಹಸ್ಯ ಕಾಪಾಡುವ ಗುಣ ಬಹಳಷ್ಟಿತ್ತು. ಅದೇ ರೀತಿ ಹೇಳುತ್ತಾನೆ, "ನಿಜವಾದ ಕನಸುಗಳ ಪೈಕಿ ಒಂದು ಕನಸು ಇದಾಗಿದೆ: ನನ್ನ ಹೆಸರು ಮಹಮೂದ್ ಇಫ್ತಿಖಾರ್ ಎಂಬುದನ್ನು ಅವರು ಕನಸಿನಲ್ಲಿ ನೋಡಿದ್ದರು.

*(ಪುಟ–07ರಲ್ಲಿ ಮುಂದುವರಿಸಲಾಗಿದೆ)*

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

## ಹಝ್ರತ್ ಪೈಗಂಬರರ(ಸ) ಮಕ್ಕದಿಂದ ಮದೀನಕ್ಕೆ ವಲಸೆ (ಹಿಜ್ರತ್)

ಹಝ್ರತ್ ಪೈಗಂಬರ್(ಸ) ಮತ್ತು ಅವರ ಶಿಷ್ಯರು ವಲಸೆ ಹೋಗಲು ಸಿದ್ಧತೆಗಳನ್ನು ಮಾಡಿದರು. ಒಂದರ ನಂತರ ಇನ್ನೊಂದು ಕುಟುಂಬ ಮಕ್ಕದಿಂದ ಅಪ್ರತ್ಯಕ್ಷವಾಗಲು ತೊಡಗಿತು. ಅಲ್ಲಾಹನ ಸಾಮ್ರಾಜ್ಯ ಸ್ಥಾಪಿತವಾಗಲು ನಿರೀಕ್ಷಿಸುತ್ತಾ ಇದ್ದವರು ಧೈರ್ಯಗೊಂಡರು. ಕೆಲವು ಸಾರಿ ಒಂದೇ ರಾತ್ರಿಯಲ್ಲಿ ಮಕ್ಕದ ಒಂದು ಗಲ್ಲಿ ಪೂರ್ಣವಾಗಿ ತೆರವಾಗಿ ಮನೆಗಳಿಗೆ ಬೀಗಗಳು ಜಡಿಯಲ್ಪಡುತ್ತಿದ್ದುವು. ಬೆಳಗ್ಗೆ ಓಣಿಯಲ್ಲಿ ಮೌನವು ವ್ಯಾಪಿಸಿರುವುದನ್ನು ಗಮನಿಸಿ ವಿಚಾರಿಸಿದಾಗ ಮಾತ್ರ ಮಕ್ಕದ ಜನರಿಗೆ ಆ ಕೇರಿಯ ಎಲ್ಲಾ ಜನರು ಮದೀನಕ್ಕೆ ವಲಸೆ ಹೋದುದಾಗಿ ತಿಳಿಯುತ್ತಿತ್ತು. ಮಕ್ಕದ ಜನರೊಳಗೆ ಇಸ್ಲಾಮ್ ಧರ್ಮವು ಬೀರುತ್ತಿದ್ದ ವ್ಯಾಪಕ ಪ್ರಭಾವವನ್ನು ನೋಡಿ ಅವಿಶ್ವಾಸಿಗಳು ಗಾಬರಿಗೊಳ್ಳುತ್ತಿದ್ದರು.

ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ), ಹಝ್ರತ್ ಅಲಿ(ರ) ಮತ್ತು ಕೆಲವು ಗುಲಾಮರ ಹೊರತು ಉಳಿದ ಎಲ್ಲಾ ಮುಸ್ಲಿಮರು ಮಕ್ಕದಿಂದ ಮದೀನಕ್ಕೆ ವಲಸೆ ಹೋದರು. ತಮ್ಮ ಬೇಟೆ ತಮ್ಮಿಂದ ತಪ್ಪಿಸಿಕೊಂಡು ಹೋಗುವುದನ್ನು ನೋಡಿದಾಗ ಮಕ್ಕದ ಮುಂದಾಳುಗಳು ಸಭೆ ಸೇರಿದರು ಮತ್ತು ಸಮಾಲೋಚನೆ ನಡೆಸಿ, ಈಗ ಮುಹಮ್ಮದ್ ಪೈಗಂಬರರನ್ನು(ಸ) ಕೊಲ್ಲುವುದೇ ಸೂಕ್ತ ಎಂದು ನಿರ್ಧರಿಸಿದರು. ಆದರೆ ಅವಿಶ್ವಾಸಿಗಳು ಹಝ್ರತ್ ಪೈಗಂಬರರನ್ನು ಕೊಲ್ಲಲು ನಿರ್ಧರಿಸಿದ ದಿನ ಮತ್ತು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋಗಲು ನಿರ್ಧರಿಸಿದ ದಿನ ಅಲ್ಲಾಹನ ವಿಶಿಷ್ಟ ವಿಧಿಯ ಪ್ರಕಾರ ಒಂದೇ ಆಗಿತ್ತು. ಮಕ್ಕದ ಜನರು ರಾತ್ರಿಯ ಅಂಧಕಾರದಲ್ಲಿ ಹಝ್ರತ್ ಪೈಗಂಬರರ(ಸ) ಮನೆಯ ಸುತ್ತುಮುತ್ತು ಜಮಾಯಿಸುತ್ತಾ ಇದ್ದಾಗ, ಹಝ್ರತ್ ಪೈಗಂಬರ್(ಸ) ರಾತ್ರಿಯ ಕತ್ತಲೆಯಲ್ಲಿ ವಲಸೆ ಹೋಗುವ ಉದ್ದೇಶದಿಂದ ಮನೆಯಿಂದ ಹೊರಗೆ ಹೊರಟು ಹೋಗುತ್ತಿದ್ದರು. ಮಕ್ಕದ ಜನರು ಹಝ್ರತ್ ಪೈಗಂಬರರ(ಸ) ಕುರಿತು ನಿಶ್ಚಯವಾಗಿಯೂ ಶಂಕಿಸುತ್ತಾ ಇದ್ದಿರಬಹುದು – ಅವರ ನಿರ್ಧಾರದ ಕುರಿತು ಹಝ್ರತ್ ಪೈಗಂಬರ್‌ರವರಿಗೂ ತಿಳಿದಿರಲೂಬಹುದು ಎಂದು. ಆದರೆ ಹಝ್ರತ್ ಪೈಗಂಬರ್ ಮಕ್ಕದ ಜನರು ನೋಡುತ್ತಿರುವಾಗ ಅವರ ಮುಂದೆಯೇ ದಾಟಿ ಹೋದಾಗ, ಇದು ಬೇರೆ ಯಾರೋ ಆಗಿರಬಹುದು ಎಂದು ಭಾವಿಸಿ ಅವರನ್ನು ಆಕ್ರಮಿಸದೆ ಅವರಿಗೆ ಕಾಣಿಸಿಕೊಳ್ಳದ ಹಾಗೆ ಅವಿತುಕೊಳ್ಳಲು ಅವಿಶ್ವಾಸಿಗಳು ಪ್ರಯತ್ನಿಸಿದರು. ತಮ್ಮ ನಿರ್ಧಾರದ ಸಮಾಚಾರ ಹಝ್ರತ್ ಪೈಗಂಬರರಿಗೆ(ಸ) ತಿಳಿಯದಿರಲಿ ಎಂದು ಅವಿಶ್ವಾಸಿಗಳು ಜಾಗರೂಕರಾಗಿದ್ದರು. ತಮ್ಮೊಂದಿಗೆ ವಲಸೆ ಹೋಗಲು ಸಿದ್ಧರಾಗಿರಲು ಹಝ್ರತ್ ಅಬೂಬಕರ್‌ರಿಗೆ ಹಝ್ರತ್ ಪೈಗಂಬರರು ಆ ರಾತ್ರಿಗೆ ಮೊದಲಿನ ಹಗಲಲ್ಲಿ ತಿಳಿಸಿದ್ದರು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರ(ಸ) ಬಳಿಗೆ ಬಂದು ಸೇರಿದಾಗ ಇಬ್ಬರೂ ಸ್ವಲ್ಪ ಹೊತ್ತಿನೊಳಗೆ ಮಕ್ಕದಿಂದ ಹೊರಟರು. ಅವರು ಮಕ್ಕದಿಂದ ಅಂದಾಜು 3–4 ಮೈಲು ದೂರವಿರುವ ಸೌರ್ ಎಂಬ ಪರ್ವತ ಶಿಖರದ ಗುಹೆಯಲ್ಲಿ ಆಶ್ರಯ ಪಡೆದರು.

ಮಕ್ಕದ ಜನರಿಗೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮಕ್ಕದಿಂದ ಹೊರಟುಹೋದರೆಂದು ತಿಳಿದಾಗ ಅವರು ಒಂದು ಸೇನಾದಳವನ್ನು ಜಮಾಯಿಸಿ ಅವರನ್ನು ಬೆನ್ನಟ್ಟಲು ಹೊರಟರು. ಒಬ್ಬ ಪತ್ತೇದಾರನನ್ನು ಅವರು ತಮ್ಮೊಂದಿಗೆ ಕರೆದುಕೊಂಡು ಹೋದರು. ಅವನು ಹಝ್ರತ್ ಪೈಗಂಬರ್(ಸ) ನಡೆದುಹೋದ ದಾರಿಯನ್ನು ಪತ್ತೆಹಚ್ಚುತ್ತಾ ಸೌರ್ ಪರ್ವತವನ್ನು ತಲಪಿದನು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಜೊತೆಯಲ್ಲಿ ಅಡಗಿಕೊಂಡಿದ್ದ ಗುಹೆಯ ಬಳಿಗೆ ಆ ಪತ್ತೇದಾರನು ಆಗಮಿಸಿ, **"ಮುಹಮ್ಮದ್ ಈ ಗುಹೆಯಲ್ಲಿದ್ದಾರೆ. ಅವರು ಇಲ್ಲಿರದಿದ್ದಲ್ಲಿ ಆಕಾಶವನ್ನೇರಿರಬಹುದು"** ಎಂದು ದೃಢವಾಗಿ ಹೇಳಿದನು.

ಅವನ ಮಾತನ್ನು ಆಲಿಸಿದ ಹಝ್ರತ್ ಅಬೂಬಕರ್‌ರ ಹೃದಯ ಧೈರ್ಯಗುಂದಿತು. ಆಗ ಅವರು ಮೆಲ್ಲನೆ ಹಝ್ರತ್ ಪೈಗಂಬರರೊಂದಿಗೆ(ಸ) ಹೇಳಿದರು: **"ಶತ್ರು ನಮ್ಮ ಸಮೀಪಕ್ಕೆ ಬಂದಿರುವನು. ಅವನು ಯಾವುದೇ ಕ್ಷಣದಲ್ಲಿ ಗುಹೆಯನ್ನು ಪ್ರವೇಶಿಸುವನು."**

ಹಝ್ರತ್ ಪೈಗಂಬರ್(ಸ) ಹೇಳಿದರು: **"ನೀವು ವ್ಯಾಕುಲಚಿತ್ತರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನು ನಮ್ಮ ಜೊತೆಗಿದ್ದಾನೆ."** ಹಝ್ರತ್ ಅಬೂಬಕರ್(ರ) ಹೇಳಿದರು: **"ಓ ಅಲ್ಲಾಹನ ಪೈಗಂಬರ್, ನಾನು ನನ್ನ ಜೀವದ ಬಗ್ಗೆ ಹೆದರಿಕೆ ಹೊಂದಿಲ್ಲ. ಏಕೆಂದರೆ ನಾನೊಬ್ಬ ಸಾಮಾನ್ಯ ಮನುಷ್ಯನಾಗಿದ್ದೇನೆ. ನಾನು ಕೊಲ್ಲಲ್ಪಟ್ಟರೆ ಒಬ್ಬ ಸಾಮಾನ್ಯ ವ್ಯಕ್ತಿ ಕೊಲ್ಲಲ್ಪಟ್ಟಂತೆ ಮಾತ್ರ ಆಗುವುದು. ಆದರೆ ನನಗೆ ನಿಮ್ಮ ಜೀವದ ಬಗ್ಗೆ ಮಾತ್ರ ಹೆದರಿಕೆ ಇದೆ. ನಿಮ್ಮ ಜೀವಕ್ಕೆ ಯಾವುದಾದರೂ ಅಪಾಯ ಉಂಟಾದರೆ ಲೋಕದಿಂದ ಆಧ್ಯಾತ್ಮಿಕತೆ ಮತ್ತು ಧರ್ಮ ನಾಮಾವಶೇಷವಾಗುವುದು."**

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: **"ಆ ರೀತಿ ಹೆದರಬೇಕಿಲ್ಲ. ಇಲ್ಲಿರುವುದು ನಾವಿಬ್ಬರು ಮಾತ್ರವಲ್ಲ. ನಮ್ಮೊಂದಿಗೆ ಮೂರನೆಯವನಾಗಿ ಅಲ್ಲಾಹನಿದ್ದಾನೆ."**

ಇಸ್ಲಾಮ್ ಧರ್ಮಕ್ಕೆ ಅಭಿವೃದ್ಧಿನೀಡಲು ಅಲ್ಲಾಹನು ನಿರ್ಧರಿಸಿದ ಸಮಯ ಸನ್ನಿಹಿತವಾದುದರಿಂದ ಮತ್ತು ಮಕ್ಕದ ಅವಿಶ್ವಾಸಿಗಳಿಗೆ ಸತ್ಯವಿಶ್ವಾಸ ಸ್ವೀಕರಿಸಲು ನೀಡಲಾದ ಕಾಲಾವಕಾಶವು ಕೊನೆಗೊಂಡುದರಿಂದ ಅಲ್ಲಾಹನು ಮಕ್ಕದವರ ಕಣ್ಣುಗಳಿಗೆ ಪರದೆ ಹಾಕಿದನು. ಅವರು ಪತ್ತೇದಾರನನ್ನು ಪರಿಹಾಸ ಮಾಡುತ್ತಾ ಹೀಗೆಂದರು:

**"ಏನು, ಮುಹಮ್ಮದ್ ಇಂತಹ ತೆರೆದಿರುವ ಪ್ರದೇಶದಲ್ಲಿ ಆಶ್ರಯಪಡೆಯಬೇಕಿತ್ತೇ. ಇದು ಅಡಗಿಕೊಳ್ಳಲು ಯೋಗ್ಯವಾದ ಸ್ಥಳವಲ್ಲ. ಇಲ್ಲಿ ಹಾವು, ಚೇಳುಗಳು ತುಂಬಿವೆ. ಇಲ್ಲಿ ಬುದ್ಧಿಯುಳ್ಳ ಯಾರಾದರೂ ಆಶ್ರಯ ಪಡೆಯುವರೇ?"**

ಅವರು ಗುಹೆಯೊಳಗೆ ಬಗ್ಗಿ ನೋಡದೆ ಪತ್ತೇದಾರನನ್ನು ಪರಿಹಾಸ ಮಾಡುತ್ತಾ ಅಲ್ಲಿಂದ ಹೊರಟು ಹೋದರು. ಎರಡು ದಿನಗಳ ಕಾಲ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರೊಂದಿಗೆ ಆ ಗುಹೆಯಲ್ಲಿ ಅಡಗಿ ಕುಳಿತುಕೊಂಡರು. ಅನಂತರ ಮೊದಲೇ ನಿರ್ಧರಿಸಿದ ಹಾಗೆ ಗುಹೆಯ ಬಳಿಗೆ ಅವರ ಸವಾರಿಗಾಗಿ ಎರಡು ಒಂಟೆಗಳು ತಲಪಿಸಲ್ಪಟ್ಟವು. ವೇಗದಿಂದ ಸಾಗುವ ಎರಡು ಹೆಣ್ಣು ಒಂಟೆಗಳನ್ನೇರಿ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ) ಹೊರಟರು. ಹಝ್ರತ್ ಪೈಗಂಬರ್(ಸ) ಮತ್ತು ರಸ್ತೆ ತೋರಿಸುವ ಇನ್ನೊಬ್ಬನು ಒಂದು ಒಂಟೆಯನ್ನೇರಿದ್ದರು. ಇನ್ನೊಂದು ಒಂಟೆಯ ಮೇಲೆ ಹಝ್ರತ್ ಅಬೂಬಕರ್(ರ) ಮತ್ತು ಅವರ ಸೇವಕ ಆಮಿರ್ ಬಿನ್ ಫಹೀರ ಸವಾರಿ ಮಾಡುತ್ತಾ ಹೊರಟರು.

ಮದೀನಕ್ಕೆ ಹೊರಡುವ ಮೊದಲು ಹಝ್ರತ್ ಪೈಗಂಬರ್(ಸ) ಮಕ್ಕ ನಗರದ ಕಡೆಗೆ ತನ್ನ ಮುಖವನ್ನು ತಿರುಗಿಸಿ ನೋಡಿದರು. ಅವರು ಆ ನಗರದಲ್ಲಿ ಜನಿಸಿದ್ದರು. ಆ ನಗರದಲ್ಲಿ ಅವರ ವಂಶದವರು ಹಝ್ರತ್ ಇಸ್ಮಾಈಲ್(ಅ) ರವರ ಕಾಲದಿಂದ ವಾಸಿಸುತ್ತಾ ಇದ್ದರು. ಅವರು ಕೊನೆಗೆ ಮಕ್ಕ ನಗರವನ್ನು ಅಭಿಮುಖೀಕರಿಸಿ ದುಃಖಾತಿರೇಕದಿಂದ ಹೇಳಿದರು: **"ಓ ಮಕ್ಕ (ನಗರ), ನೀನು ನನಗೆ ಎಲ್ಲಾ ಸ್ಥಳಗಳಿಗಿಂತ ಹೆಚ್ಚು ಪ್ರಿಯಕರವಾಗಿರುವೆ. ಆದರೆ ನಿನ್ನ ಜನರು ನನ್ನನ್ನು ಇಲ್ಲಿ ವಾಸಿಸಲು ಬಿಡುವುದಿಲ್ಲ."**

ಆಗ ಹಝ್ರತ್ ಅಬೂಬಕರ್(ರ) ಹೇಳಿದರು: **"ಈ ಜನರು ತಮ್ಮ ಪ್ರವಾದಿಯನ್ನು ಹೊರಗಟ್ಟಿರುವರು. ಈ ಜನರು ನಿಶ್ಚಯವಾಗಿಯೂ ನಾಶಹೊಂದುವರು."**

(ಮುಂದುವರಿಯುವುದು)

## 131ನೇ ಜಲ್ಸಾ ಸಾಲಾನ ಖಾದಿಯಾನ್ 25, 26, 27 ಡಿಸೆಂಬರ್ 2026ರಂದು ಆಯೋಜಿಸಲಾಗುವುದು

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 131ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 25, 26 ಮತ್ತು 27ನೇ ಡಿಸೆಂಬರ್ 2026 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಮರ್ಕಝಿಯ ಖಾದಿಯಾನ್)**

**"ತನ್ನಿಗಾಗಿ ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡುವವರೆಗೆ ಯಾರೂ ಪೂರ್ಣ ವಿಶ್ವಾಸಿಯಾಗುವುದಿಲ್ಲ"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed Saheb & Family, Bengaluru, Karnataka**

**"ಸೌಮ್ಯತೆ ಯಾವ ವಿಷಯದಲ್ಲಿದ್ದರೂ ಅದನ್ನು ಸುಂದರಗೊಳಿಸುತ್ತದೆ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**Late S.R Abdur Rauf Saheb & Family, Shimoga, Karnataka**

## ಹಝ್ರತ್ ಮಸೀಹ್ ಮೌಊದ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(49) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ವಾಲಿದಾ ಸಾಹಿಬಾ ಅವರು ನನಗೆ ತಿಳಿಸಿದಂತೆ, ಒಮ್ಮೆ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ತಮ್ಮ ಯೌವನದ ಕಾಲದಲ್ಲಿ ನಿಮ್ಮ ತಾತನವರ ಪಿಂಚಣಿಯನ್ನು ಪಡೆಯಲು ಹೋದರು. ಅವರ ಹಿಂದೆ ಹಿಂದೆ ಮಿರ್ಝಾ ಇಮಾಮುದ್ದೀನ್ ಕೂಡ ಹೋದನು. ಹಝ್ರತ್ ಸಾಹಿಬ್ ಅವರು ಪಿಂಚಣಿಯನ್ನು ಪಡೆದ ನಂತರ, ಅವನು ಅವರನ್ನು ಮೋಸಗೊಳಿಸಿ ಮತ್ತು ತಪ್ಪುದಾರಿಗೆಳೆದು ಖಾದಿಯಾನ್‌ಗೆ ಕರೆತರುವ ಬದಲು ಬೇರೆ ಕಡೆಗೆ ಕರೆದೊಯ್ದನು. ಅವನು ಅವರನ್ನು ಇಲ್ಲಿಂದ ಅಲ್ಲಿಗೆ ಸುತ್ತಾಡಿಸುತ್ತಾ ಇದ್ದನು. ಕೊನೆಗೆ ಅವನು ಎಲ್ಲಾ ಹಣವನ್ನು ಖರ್ಚು ಮಾಡಿ ಮುಗಿಸಿದ ನಂತರ ಹಝ್ರತ್ ಸಾಹಿಬ್ ಅವರನ್ನು ಬಿಟ್ಟು ಬೇರೆಡೆಗೆ ಹೋದನು. ಈ ಘಟನೆಯಿಂದ ಉಂಟಾದ ಸಂಕೋಚದಿಂದ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಮನೆಗೆ ಹಿಂದಿರುಗಲಿಲ್ಲ. ಮತ್ತು ನಿಮ್ಮ ತಾತನವರ ಆಶಯವು ನೀವು ಯಾವುದಾದರೂ ಉದ್ಯೋಗಕ್ಕೆ ಸೇರಬೇಕೆಂಬುದಾಗಿದ್ದುದರಿಂದ, ನೀವು ಸಿಯಾಲ್ಕೋಟ್ ನಗರದಲ್ಲಿನ ಡೆಪ್ಯುಟಿ ಕಮಿಷನರ್ ಅವರ ಕಚೇರಿಯಲ್ಲಿ ಕಡಿಮೆ ಸಂಬಳದ ಉದ್ಯೋಗವನ್ನು ಸ್ವೀಕರಿಸಿದರು ಮತ್ತು ಕೆಲವು ಕಾಲ ಅಲ್ಲಿ ಕೆಲಸ ಮಾಡಿದರು. ನಂತರ ನಿಮ್ಮ ಅಜ್ಜಿ ಅಸ್ವಸ್ಥರಾದಾಗ, ನಿಮ್ಮ ತಾತನವರು ಒಬ್ಬ ವ್ಯಕ್ತಿಯನ್ನು ಕಳುಹಿಸಿ ಉದ್ಯೋಗವನ್ನು ಬಿಟ್ಟು ಮರಳಿ ಬರಲು ಹೇಳಿದರು. ಆಗ ಹಝ್ರತ್ ಸಾಹಿಬ್ ಅವರು ತಕ್ಷಣವೇ ಹೊರಟರು. ಅಮೃತಸರ ತಲುಪಿದ ನಂತರ ಖಾದಿಯಾನ್‌ಗೆ ಹೋಗಲು ಒಂದು ಏಕ್ಕಾವನ್ನು ಬಾಡಿಗೆಗೆ ತೆಗೆದುಕೊಂಡರು. ಇದೇ ಸಂದರ್ಭದಲ್ಲಿ ಖಾದಿಯಾನ್‌ನಿಂದ ಇನ್ನೊಬ್ಬ ವ್ಯಕ್ತಿಯೂ ನಿಮ್ಮನ್ನು ಕರೆತರಲು ಅಮೃತಸರಕ್ಕೆ ಬಂದಿದ್ದನು. ಆ ವ್ಯಕ್ತಿಯು, "ಏಕ್ಕಾವನ್ನು ಬೇಗ ಓಡಿಸಿ, ಏಕೆಂದರೆ ಅವರ ಸ್ಥಿತಿ ಬಹಳ ಗಂಭೀರವಾಗಿದೆ" ಎಂದು ಹೇಳಿದನು. ಸ್ವಲ್ಪ ಸಮಯದ ನಂತರ ಮತ್ತೆ ಹೇಳಿದನು: "ಸ್ಥಿತಿ ಬಹಳವೇ ಗಂಭೀರವಾಗಿತ್ತು. ಬೇಗ ಹೋಗಿ, ಎಲ್ಲಾದರೂ ಅವರು ನಿಧನರಾಗಿರಬಹುದು." ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ಹಝ್ರತ್ ಸಾಹಿಬ್ ಅವರು ಹೇಳಿದಂತೆ, "ಅದೇ ಸಮಯದಲ್ಲಿ ನಾನು ಅರ್ಥಮಾಡಿಕೊಂಡೆ, ವಾಸ್ತವವಾಗಿ ವಾಲಿದಾ ಸಾಹಿಬಾ ನಿಧನರಾಗಿರಬೇಕು. ಏಕೆಂದರೆ ಅವರು ಜೀವಂತವಾಗಿದ್ದರೆ, ಆ ವ್ಯಕ್ತಿಯು ಇಂತಹ ಮಾತುಗಳನ್ನು ಹೇಳುತ್ತಿರಲಿಲ್ಲ." ಅದರಂತೆ ಖಾದಿಯಾನ್ ತಲುಪಿದಾಗ, ಅವರು ನಿಜವಾಗಿಯೂ ನಿಧನರಾಗಿರುವುದು ತಿಳಿಯಿತು. ವಾಲಿದಾ ಸಾಹಿಬಾ ಅವರು ಹೇಳುತ್ತಾರೆ: ಹಝ್ರತ್ ಸಾಹಿಬ್ ಅವರು ಹೇಳುತ್ತಿದ್ದರು, "ನಮ್ಮನ್ನು ಬಿಟ್ಟು ಹೋದ ನಂತರ ಮಿರ್ಝಾ ಇಮಾಮುದ್ದೀನ್ ಮತ್ತೆ ಇಲ್ಲಿಂದ ಅಲ್ಲಿಗೆ ಅಲೆದಾಡುತ್ತಿದ್ದನು. ಕೊನೆಗೆ ಅವನು ಚಹಾದ ಒಂದು ಕಾಫಿಲೆಯ ಮೇಲೆ ದಾಳಿ ಮಾಡಿ ದರೋಡೆ ಮಾಡಿದನು ಮತ್ತು ಬಂಧಿಸಲ್ಪಟ್ಟನು. ಆದರೆ ಮೊಕದ್ದಮೆಯಲ್ಲಿ ಅವನು ಬಿಡುಗಡೆಗೊಂಡನು." ಹಝ್ರತ್ ಸಾಹಿಬ್ ಅವರು ಹೇಳುತ್ತಿದ್ದರು: "ಅರ್ವಶಕ್ತನಾದ ಅಲ್ಲಾಹನು ನಮ್ಮ ಕಾರಣದಿಂದಲೇ ಅವನನ್ನು ಸೆರೆಮನೆಯಿಂದ ರಕ್ಷಿಸಿದ್ದಾನೆಂದು ತೋರುತ್ತದೆ. ಇಲ್ಲವಾದರೆ ಅವನು ಹೇಗೇ ವ್ಯಕ್ತಿಯಾಗಿದ್ದರೂ, ನಮ್ಮ ವಿರೋಧಿಗಳು 'ಅವರ ಒಬ್ಬ ಚಿಕ್ಕಪ್ಪನ ಮಗ ಜೈಲಿನಲ್ಲಿ ಇದ್ದನು' ಎಂದು ಹೇಳುತ್ತಿದ್ದರು." ನಾನು ವಿನಮ್ರವಾಗಿ ಹೇಳುವುದೇನೆಂದರೆ, ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರ ಸಿಯಾಲ್ಕೋಟ್ ಉದ್ಯೋಗದ ಅವಧಿ 1864ರಿಂದ 1868ರವರೆಗೆ ಆಗಿತ್ತು.

(ಸ್ಪಷ್ಟೀಕರಣ: ಈ ವರದಿಯಿಂದ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಸಿಯಾಲ್ಕೋಟ್‌ನಲ್ಲಿ ಉದ್ಯೋಗ ಸ್ವೀಕರಿಸಿದ್ದು ಮಿರ್ಝಾ ಇಮಾಮುದ್ದೀನ್ ಅವರು ನಿಮ್ಮ ತಾತನವರ ಪಿಂಚಣಿಯ ಹಣವನ್ನು ಮೋಸದಿಂದ ತೆಗೆದುಕೊಂಡು ಖರ್ಚು ಮಾಡಿದ್ದರಿಂದ ಎಂದು ಅರ್ಥಮಾಡಿಕೊಳ್ಳಬಾರದು. ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ತಮ್ಮ ಗ್ರಂಥಗಳಲ್ಲಿ ಸ್ಪಷ್ಟವಾಗಿ ವಿವರಿಸಿರುವಂತೆ, ಉದ್ಯೋಗ ಸ್ವೀಕರಿಸಲು ನಿಜವಾದ ಕಾರಣವೆಂದರೆ ನಿಮ್ಮ ತಂದೆಯವರು ಉದ್ಯೋಗ ಮಾಡಲು ಪದೇಪದೇ ಒತ್ತಾಯಿಸುತ್ತಿದ್ದರು. ಇಲ್ಲವಾದರೆ ಹಝ್ರತ್ ಸಾಹಿಬ್ ಅವರ ಸ್ವಂತ ಅಭಿಪ್ರಾಯ ಉದ್ಯೋಗದ ವಿರುದ್ಧವಾಗಿತ್ತು. ಅದೇ ರೀತಿಯಾಗಿ ಉದ್ಯೋಗವನ್ನು ತ್ಯಜಿಸುವ ನಿಜವಾದ ಕಾರಣವೂ ಇದೇ ಆಗಿತ್ತು. ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಉದ್ಯೋಗವನ್ನು ಇಷ್ಟಪಡುತ್ತಿರಲಿಲ್ಲ ಮತ್ತು ಉದ್ಯೋಗವನ್ನು ತ್ಯಜಿಸಲು ಅನುಮತಿ ನೀಡುವಂತೆ ತಮ್ಮ ತಂದೆಯವರಿಗೆ ಪದೇಪದೇ ಪತ್ರ ಬರೆಯುತ್ತಿದ್ದರು. ಆದರೆ ತಾತನವರು ಉದ್ಯೋಗ ತ್ಯಜಿಸಲು ಅನುಮತಿ ನೀಡುತ್ತಿರಲಿಲ್ಲ. ಕೊನೆಗೆ ಅಜ್ಜಿ ಅಸ್ವಸ್ಥರಾದಾಗ, ತಾತನವರು "ಉದ್ಯೋಗವನ್ನು ಬಿಟ್ಟು ಮರಳಿ ಬಾ" ಎಂದು ಅನುಮತಿ ಕಳುಹಿಸಿದರು.)

(50) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ನಾನು ವಿನಮ್ರವಾಗಿ ಹೇಳುವುದೇನೆಂದರೆ, ತಿಬ್ (ವೈದ್ಯಕೀಯ ಜ್ಞಾನ) ನಮ್ಮ ಕುಟುಂಬದ ಪೈತೃಕ ಜ್ಞಾನವಾಗಿದೆ. ನಮ್ಮ ಕುಟುಂಬವು ಯಾವಾಗಲೂ ಈ ಜ್ಞಾನದಲ್ಲಿ ಪರಿಣತಿಯಾಗಿತ್ತು. ತಾತನವರು ಅತ್ಯಂತ ಪರಿಣತ ಮತ್ತು ಪ್ರಸಿದ್ಧ ಹಾಝಿಕ್ ತಬೀಬ್ ಆಗಿದ್ದರು. ತಾಯಾ (ದೊಡ್ಡಪ್ಪ) ಸಾಹಿಬ್ ಅವರೂ ಸಹ ತಿಬ್ ವಿದ್ಯೆಯನ್ನು ಅಭ್ಯಾಸಿಸಿದ್ದರು. ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರಿಗೂ ಇಲ್ಮ್–ಎ–ತಿಬ್‌ನಲ್ಲಿ ಸಾಕಷ್ಟು ಪರಿಣತಿ ಇತ್ತು. ಅವರು ಮನೆಯಲ್ಲಿ ಔಷಧಿಗಳ ಒಂದು ಸಂಗ್ರಹವನ್ನು ಇಟ್ಟುಕೊಂಡಿದ್ದು, ಅದರಿಂದ ರೋಗಿಗಳಿಗೆ ಔಷಧಿ ನೀಡುತ್ತಿದ್ದರು. ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರೂ ತಿಬ್ ವಿದ್ಯೆಯನ್ನು ಅಭ್ಯಾಸಿಸಿದ್ದರು. ಮತ್ತು ಒಮ್ಮೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ರ.ಅ.) ಅವರು ನನಗೆ ಹೇಳಿದ್ದರು: ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ನನಗೂ ಇಲ್ಮ್–ಎ–ತಿಬ್ ಕಲಿಯುವಂತೆ ಒತ್ತಾಯಿಸಿದ್ದರು. ನಾನು ವಿನಮ್ರವಾಗಿ ಹೇಳುವುದೇನೆಂದರೆ, ಇಲ್ಮ್–ಎ–ತಿಬ್ ನಮ್ಮ ಕುಟುಂಬದ ವಿಶೇಷತೆಯಾಗಿದ್ದರೂ, ನಮ್ಮ ಕುಟುಂಬದಲ್ಲಿ ಯಾರೂ ಈ ಜ್ಞಾನವನ್ನು ತಮ್ಮ ಉದ್ಯೋಗ ಅಥವಾ ಜೀವನೋಪಾಯದ ಸಾಧನವನ್ನಾಗಿ ಮಾಡಿಕೊಂಡಿಲ್ಲ. ಹಾಗೆಯೇ ಚಿಕಿತ್ಸೆಯ ಪ್ರತಿಯಾಗಿ ಯಾರಿಂದಲೂ ಎಂದಿಗೂ ಯಾವುದೇ ಸಂಭಾವನೆಯನ್ನು ಸ್ವೀಕರಿಸಲಿಲ್ಲ.

**(ಮುಂದುವರಿಯುವುದು)**

### ಬದರ್ ಪತ್ರಿಕೆಯನ್ನು ನೀವೂ ಓದಿರಿ ಮತ್ತು ನಿಮ್ಮ ಸ್ನೇಹಿತರನ್ನೂ ಓದಲು ಪ್ರೋತ್ಸಾಹಿಸಿ.

ಡಿಸೆಂಬರ್ 2014 ರ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ತಮ್ಮ ಸಂದೇಶವನ್ನು ಕಳುಹಿಸುತ್ತಾ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಹೀಗೆ ಹೇಳಿದರು:

"ಬದರ್ ವಾರಪತ್ರಿಕೆಯ ಸಂಸ್ಥೆ ಮತ್ತು ಓದುಗರು ಈ ಪತ್ರಿಕೆಯನ್ನು ಜಮಾಅತ್‌ನ ಸದಸ್ಯರ ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಪ್ರಕಟಿಸಲಾಗಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ನಮ್ಮ ಹಿರಿಯರು ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅದನ್ನು ತಮ್ಮ ಎಲ್ಲಾ ಶಕ್ತಿಯಿಂದ ಮುಂದುವರಿಸಲು ಪ್ರಯತ್ನಿಸಿದರು ಮತ್ತು ಅವರ ಪ್ರಾರ್ಥನೆ ಮತ್ತು ಶುದ್ಧ ಪ್ರಯತ್ನಗಳ ಅನುಗ್ರಹಗಳಿಂದ ಮಾತ್ರ ಇದು ಇಂದಿಗೂ ಮುಂದುವರೆದಿದೆ ಮತ್ತು ಇದು ಸಾಧ್ಯವಾದಷ್ಟು ಅಹ್ಮದೀಯರು ಇದನ್ನು ಓದಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯಿಂದ, ವಿಶೇಷವಾಗಿ ಭಾರತದ ಅಹ್ಮದೀಯರಿಗೆ ಮತ್ತು ಸಾಮಾನ್ಯವಾಗಿ ಪ್ರಪಂಚದ ಉಳಿದ ಭಾಗಗಳಲ್ಲಿ ವಾಸಿಸುವ ಅಹ್ಮದೀಯರಿಗೆ ಇದನ್ನು ಅಧ್ಯಯನ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳನ್ನು ಪಡೆಯುವ ಸಾಮರ್ಥ್ಯವನ್ನು ನೀಡಲಿ. ಆಮೀನ್."

ಸಯ್ಯಿದುನಾ ಹಝ್ರತ್ ಅಖಿದ್ದಸ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಪ್ರತಿ ಮನೆಯೂ ಬದರ್ ವಾರಪತ್ರಿಕೆಯನ್ನು ಓದುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಅಹ್ಮದಿಯಾ ಜಮಾಅತ್ತಿಗೆ ಇಲ್ಲಿ ತಿಳಿಸಲಾಗಿದೆ. ಬದರ್ ಪತ್ರಿಕೆಯಲ್ಲಿ, ಪವಿತ್ರ ಖುರ್‌ಆನ್, ಹದೀಸ್ ಶರೀಫ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು, ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಖುತ್‌ಬ ಜುಮುಅಗಳು, ಭಾಷಣಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ದೇಶಗಳಿಗೆ ಮಾಡಿದ ಅನುಗ್ರಹದಾಯಕ ಭೇಟಿಗಳ ಕುತೂಹಲಕಾರಿ ಮತ್ತು ವಿಶ್ವಾಸವರ್ಧಕ ವರದಿಗಳನ್ನು ಬದರ್ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಲಾಗುತ್ತದೆ, ಇದು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕಾದ ವಿಷಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರ ಕರುಣೆಯಿಂದ, ಈ ಪತ್ರಿಕೆಯು ಈಗ ಉರ್ದು ಭಾಷೆಯ ಜೊತೆಗೆ ಹಿಂದಿ, ಬಂಗಾಳಿ, ತಮಿಳು, ತೆಲುಗು, ಮಲಯಾಳಂ, ಒರಿಯಾ ಮತ್ತು ಕನ್ನಡ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿದೆ. ಬದರ್ ಪತ್ರಿಕೆಗೆ ಇನ್ನೂ ಚಂದಾದಾರರಾಗದ ಅಹ್ಮದಿ ಸ್ನೇಹಿತರು ಇದಕ್ಕೆ ಚಂದಾದಾರರಾಗಲು ಮತ್ತು ಅದನ್ನು ಸ್ವತಃ ಓದಲು ಮತ್ತು ಅವರ ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಗೆ ಅದನ್ನು ಓದಲು ಅವಕಾಶವನ್ನು ಒದಗಿಸುವಂತೆ ವಿನಂತಿಸಲಾಗಿದೆ. ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್. ಬದರ್ ಪತ್ರಿಕೆ ಸಮಯಕ್ಕೆ ಸರಿಯಾಗಿ ಬರದಿದ್ದರೆ, ಅಥವಾ ದೇಣಿಗೆ ನೀಡಲು ಅಥವಾ ಯಾವುದೇ ರೀತಿಯ ಮಾಹಿತಿಗಾಗಿ, ದಯವಿಟ್ಟು ಬದರ್ ವಾರಪತ್ರಿಕೆಯು ಕಚೇರಿ ವ್ಯವಸ್ಥಾಪಕರಿಗೆ ಸಂಪರ್ಕಿಸಿ. ಜಝಾಕುಮುಲ್ಲಾಹ್. **(ಪತ್ರಿಕಾಂಗ)**

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 22-29 October 2026, Issue No. 43-44

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

* ಕೊಸೊವೊದ ಮುಬಲ್ಲಿಗ್ ಬರೆಯುತ್ತಾರೆ: ಓರ್ವ ಸ್ನೇಹಿತ, ಶ್ರೀ. ಶೈಪ್ ಜೆಕಿರಾಜ್, ಜರ್ಮನಿಯಲ್ಲಿ ನಡೆದ ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದು ಅವರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಶೈಪ್ ಸಾಹಿಬ್ ಜಲ್ಸದಲ್ಲಿ ಭಾಗವಹಿಸುವ ಬಲವಾದ ಬಯಕೆಯನ್ನು ಹೊಂದಿದ್ದರು, ಆದಾಗ್ಯೂ, ಕೊಸೊವೊದಲ್ಲಿ, ಜರ್ಮನಿಗೆ ಪ್ರಯಾಣಿಸಲು ವೀಸಾ ಪಡೆಯುವುದು ಕಷ್ಟಕರವಾದ ಹೆಜ್ಜೆಯಾಗಿದೆ. ಒಂದು ರಾತ್ರಿ, ಶೆಪ್ ಸಾಹಿಬ್ ಕನಸಿನಲ್ಲಿ ಜರ್ಮನಿಯಲ್ಲಿ ಭವ್ಯವಾದ ಮಸೀದಿಯನ್ನು ಕಂಡರು ಮತ್ತು ಅದರೊಳಗೆ ಪ್ರೀತಿಯ ಹುಝೂರ್ ಅನ್ನು ಸಹ ನೋಡಿದರು. ಕನಸು ಜ್ಞಾನೋದಯ ಮತ್ತು ಆಧ್ಯಾತ್ಮಿಕವಾಗಿ ಉನ್ನತಿಗೇರಿಸುವಂತಿತ್ತು, ಅದರ ಬಗ್ಗೆ ಶೆಪ್ ಸಾಹಿಬ್‌ಗೆ ಯಾವುದೇ ಸಂದೇಹವಿರಲಿಲ್ಲ. ಅತ್ಯಂತ ದೃಢನಿಶ್ಚಯದಿಂದ, ಅವರು ತಕ್ಷಣವೇ ವೀಸಾ ಅರ್ಜಿ ಪ್ರಕ್ರಿಯೆಯನ್ನು ಪ್ರಾರಂಭಿಸಿದರು ಮತ್ತು ಅವರ ಟಿಕೆಟ್ ಅನ್ನು ಸಹ ಖರೀದಿಸಿದರು. ವೀಸಾದ ಬಗ್ಗೆ ಅವರ ಕೆಲವು ಸಂಬಂಧಿಕರ ಕಳವಳಗಳು ಮತ್ತು ಅನುಮಾನಗಳ ಹೊರತಾಗಿಯೂ, ಶೆಪ್ ಸಾಹಿಬ್ ಜಲ್ಸ ಸಾಲಾನ ಜರ್ಮನಿಯಲ್ಲಿ ಹಾಜರಿರುತ್ತಾರೆ ಎಂಬ ನಂಬಿಕೆಯಲ್ಲಿ ದೃಢವಾಗಿ ಉಳಿದರು. ವೀಸಾ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮುಗಿದ ತಕ್ಷಣ, ಆತಂಕ ಹೆಚ್ಚಾಗಲು ಪ್ರಾರಂಭಿಸಿತು ಮತ್ತು ಕುಟುಂಬ ಸದಸ್ಯರು ವೀಸಾ ಸಿಗಲಿಲ್ಲ ಮತ್ತು ಟಿಕೆಟ್ ಬುಕ್ ಮಾಡಲಾಗಿದೆ ಎಂದು ಮಾತನಾಡಲು ಪ್ರಾರಂಭಿಸಿದರು. ಆದರೆ ಶೆಪ್ ಸಾಹಿಬ್ ಸ್ವಲ್ಪವೂ ಹಿಂಜರಿಯಲಿಲ್ಲ ಮತ್ತು ಜರ್ಮನಿಯಲ್ಲಿ ನಡೆಯುವ ಜಲ್ಸ ಸಾಲಾನದಲ್ಲಿ ಖಂಡಿತವಾಗಿಯೂ ಭಾಗವಹಿಸುವುದಾಗಿ ವಿಶ್ವಾಸದಿಂದ ಹೇಳಿದರು. ನಂತರ ಒಂದು ದಿನ, ವೀಸಾವನ್ನು ಅನುಮೋದಿಸಲಾಗಿದೆ ಎಂಬ ಸುದ್ದಿ ಬಂದಿತು! ಈ ಸುದ್ದಿ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದ ಮತ್ತು ಪ್ರಾರ್ಥನೆಯ ಕಡೆಗೆ ಒಲವು ಹೆಚ್ಚಿಸಿದ ದೊಡ್ಡ ವಿಜಯಕ್ಕಿಂತ ಕಡಿಮೆಯಿಲ್ಲ.

ಕೊಸೊವೊ ನಿಯೋಗದ ಭೇಟಿಯು ಬೆಳಿಗ್ಗೆ 11:22 ಕ್ಕೆ ಕೊನೆಗೊಂಡಿತು.

**ಬೋಸ್ನಿಯಾದಿಂದ ಆಗಮಿಸಿದ್ದ ನಿಯೋಗದ ಭೇಟಿ**

ನಂತರ, ಬೆಳಿಗ್ಗೆ 11:25 ಕ್ಕೆ, ಕಾರ್ಯಕ್ರಮದ ಪ್ರಕಾರ, ಬೋಸ್ನಿಯಾದಿಂದ ಬಂದ ನಿಯೋಗದ ಹುಝೂರ್ ಅನ್ವರ್(ಅತಬಿಅ) ಅವರೊಂದಿಗಿನ ಭೇಟಿ ಪ್ರಾರಂಭವಾಯಿತು. ಬೋಸ್ನಿಯಾದಿಂದ 41 ಜನರ ನಿಯೋಗವು ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದರು.

ಹುಝೂರ್ ಅನ್ವರ್(ಅತಬಿಅ) ಅತಿಥಿಗಳನ್ನು ಜಲ್ಸವನ್ನು ಹೇಗೆ ಇಷ್ಟಪಟ್ಟರು ಎಂದು ಕೇಳಿದರು. ಇದಕ್ಕೆ, ಸ್ನೇಹಿತರು ಸಭೆ ತುಂಬಾ ಚೆನ್ನಾಗಿತ್ತು ಎಂದು ಹೇಳಿದರು. ನಾವೆಲ್ಲರೂ ತೃಪ್ತರಾಗಿದ್ದೇವೆ.

ಹುಝೂರ್ ಅನ್ವರ್(ಅತಬಿಅ) ಕೇಳಿದರು: ಈ ಹಿಂದೆ ಜಲ್ಸಾಗೆ ಬಂದವರು ಹಿಂದಿನ ಜಲ್ಸದಿಂದ ಜಲ್ಸದಲ್ಲಿ ಯಾವುದೇ ಸುಧಾರಣೆಯನ್ನು ಕಂಡಿದ್ದಾರೆಯೇ?

ಇದಕ್ಕೆ, ಓರ್ವ ಸ್ನೇಹಿತ ಪ್ರತಿ ವರ್ಷದಂತೆ ಜಲ್ಸವು ತುಂಬಾ ಚೆನ್ನಾಗಿತ್ತು ಎಂದು ಹೇಳಿದರು. ಈ ಬಾರಿಯೂ, ಒಂದು ಹೊಸ ಸ್ಥಳ. ಇಲ್ಲಿಯೂ ಇದನ್ನು ಆಯೋಜಿಸಲಾಗಿತ್ತು. ನಮಗೆ ಯಾವುದೇ ಕೊರತೆ ಕಾಣಲಿಲ್ಲ. ಈ ಸ್ನೇಹಿತ ಬೋಸ್ನಿಯಾದ ತಬ್ಲಿಘ್‌ನ ರಾಷ್ಟ್ರೀಯ ಕಾರ್ಯದರ್ಶಿ ಆಗಿದ್ದಾರೆ.

ನಂತರ, ಕೆಲವು ಸ್ನೇಹಿತರು ತಮ್ಮ ಉಂಗುರಗಳನ್ನು ಅನುಗ್ರಹಿಸಿಕೊಂಡರು.

ಒಬ್ಬ ಸ್ನೇಹಿತ ಮುಂದಿನ ತಿಂಗಳು ಅವನಿಗೆ ಶಸ್ತ್ರಚಿಕಿತ್ಸೆ ಮಾಡಲಾಗುವುದು ಎಂದು ಹೇಳಿದನು. ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಹೇಳಿದರು. ಸರ್ವಶಕ್ತನಾದ ಅಲ್ಲಾಹನು ಕರುಣಿಸಲಿ.

ಓರ್ವ ಮಹಿಳೆ ಹೇಳಿದಳು, "ದಯವಿಟ್ಟು ನನಗಾಗಿ ಮತ್ತು ನನ್ನ ಕುಟುಂಬಕ್ಕಾಗಿ ಪ್ರಾರ್ಥಿಸಿ, ನಮಗೆ ನಾಲ್ಕು ವರ್ಷಗಳಿಂದ ಮಗುವಾಗಿಲ್ಲ." ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಅಲ್ಲಾಹನು ನಿಮ್ಮನ್ನು ಕರುಣಿಸಲಿ ಮತ್ತು ಅನುಗ್ರಹಿಸಲಿ."

* ಬೋಸ್ನಿಯಾದ ಇತಿಹಾಸ ಪ್ರಾಧ್ಯಾಪಕ ಹ್ಯಾರಿಸ್ ಹುಸಿಚ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು, "ಜಲ್ಸಾಗೆ ಬರುವ ಮೊದಲು, ಅಲ್ಲಿ ಸಾವಿರಾರು ಜನರು ಇರುತ್ತಾರೆ ಮತ್ತು ಗೌರವಾನ್ವಿತ ಖಲೀಫರು ನಮ್ಮನ್ನು ಉದ್ದೇಶಿಸಿ ಮಾತನಾಡುತ್ತಾರೆ ಎಂದು ನನಗೆ ತಿಳಿದಿತ್ತು. ನಾನು ಸ್ವಲ್ಪ ಹೆದರುತ್ತಿದ್ದೆ ಮತ್ತು ಕೆಲವು ಅನುಮಾನಗಳನ್ನು ಹೊಂದಿದ್ದೆ, ನನಗೆ ಎಲ್ಲದರ ಬಗ್ಗೆಯೂ ಸಂದೇಹವಿತ್ತು. ಅಹ್ಮದಿಗಳ ಬಗ್ಗೆ, ಇಷ್ಟು ದೊಡ್ಡ ಸಭೆ ಮತ್ತು ಅವರ ಧಾರ್ಮಿಕ ಆಚರಣೆಗಳ ಬಗ್ಗೆ ನನಗೆ ಹೆಚ್ಚು ತಿಳಿದಿಲ್ಲದ ಕಾರಣ, ನನಗೆ ಮೂಲಭೂತ ವಿಷಯಗಳ ಬಗ್ಗೆ ಗೊಂದಲವಿತ್ತು. ಅಂತಹ ಒಳ್ಳೆಯ ಜನರೊಂದಿಗೆ ಸಮಯ ಕಳೆಯಲು ನನಗೆ ಮೊದಲು ಅವಕಾಶ ಸಿಕ್ಕಿರಲಿಲ್ಲ. ಸಭೆಯಲ್ಲಿ ಎಲ್ಲವನ್ನೂ ಯೋಜಿಸಲಾಗಿತ್ತು ಮತ್ತು ಎಲ್ಲರೂ ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ಈ ಭವ್ಯ ಕಾರ್ಯಕ್ರಮವು ಉತ್ತಮವಾಗಿ ಸಂಘಟಿತ ಮತ್ತು ಸುಂದರವಾಗಿ ಆಯೋಜಿಸಲಾಗಿತ್ತು. ಖಲೀಫರ ಮೊದಲ ಭಾಷಣದ ನಂತರ, ನನ್ನ ಮನಸ್ಸು ಸ್ಪಷ್ಟವಾಗಿತ್ತು. ನಾನು ಜನರನ್ನು ಅನುಸರಿಸುತ್ತಿದ್ದೆ, ಅವರು ಹೇಗೆ ಮಾತನಾಡುತ್ತಿದ್ದರು ಮತ್ತು ಏನು ಹೇಳಿದರು, ಅವರ ಪರಸ್ಪರ ಸಂಬಂಧ ಹೇಗಿತ್ತು, ಇದನ್ನೆಲ್ಲಾ ಕೇಳುತ್ತಿದ್ದೆ ಮತ್ತು ನೋಡುತ್ತಿದ್ದೆ. ನನ್ನ ಮುಸ್ಲಿಂ ಸಹೋದರರಲ್ಲಿ ನಾನು ಸುರಕ್ಷಿತವಾಗಿದ್ದೆ, ಯಾರೂ ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡಲಿಲ್ಲ, ಅಥವಾ ಅವರು ನನ್ನನ್ನು ಅಸೂಯೆ ಅಥವಾ ದೂರವಾಗಿಸುವ ಕಣ್ಣುಗಳಿಂದ ನೋಡಲಿಲ್ಲ, ನಾನು ಏನನ್ನಾದರೂ ನೋಡಿದೆ ಅಥವಾ ಟೀಕಿಸಿದೆ ಎಂದು ನನಗೆ ಭಾಸವಾಯಿತು.

**(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)*

ವಿಷಯದಲ್ಲಿ ಅವನೊಂದಿಗೆ ನಾಚಿಕೆಪಟ್ಟು, ಅವನನ್ನು ಅವುಗಳಿಗಾಗಿ ಹಿಡಿಯುವುದಿಲ್ಲ.' ನಂತರ ಮತ್ತೊಬ್ಬ ವ್ಯಕ್ತಿ ಬಂದನು. ಅವನು ಕೂಡ ಮಜ್ಲಿಸ್‌ನಲ್ಲಿ ಕುಳಿತುಕೊಳ್ಳಲು ಸ್ಥಳವಿಲ್ಲವೆಂದು ಕಂಡನು. ಆದರೆ ಅವನು ಹುಡುಕುತ್ತಾ ಹೋಗಿ, ಧ್ವನಿಯನ್ನು ಕೇಳಲು ಸಾಧ್ಯವಾಗುವಂತಹ ಒಂದು ಸ್ಥಳದಲ್ಲಿ ಕುಳಿತುಕೊಂಡನು. ಅಲ್ಲಾಹನು ಹೇಳಿದನು: 'ಈ ವ್ಯಕ್ತಿಯು ಪ್ರಯತ್ನಪಟ್ಟು ಮುಂದೆ ಬಂದು ಕುಳಿತಂತೆ, ನಾನೂ ಅವನಿಗೆ ನನ್ನ ಸಾನ್ನಿಧ್ಯದಲ್ಲಿ ಸ್ಥಳವನ್ನು ನೀಡುತ್ತೇನೆ.' ನಂತರ ಮೂರನೆಯ ವ್ಯಕ್ತಿಯ ಕುರಿತು ಅಲ್ಲಾಹನು ತಿಳಿಸಿದನು. ಅವನು ಬಂದನು; ಆದರೆ ಧ್ವನಿಯು ತನ್ನವರೆಗೆ ತಲುಪುವುದಿಲ್ಲವೆಂದು ಕಂಡು ಹಿಂದಿರುಗಿ ಹೋದನು. ಅಲ್ಲಾಹನು ಹೇಳಿದನು: 'ಈ ವ್ಯಕ್ತಿಯು ಅಲ್ಲಾಹನ ಝಿಕ್ರ್‌ನ ಮಜ್ಲಿಸ್‌ನಿಂದ ಹಿಂದಿರುಗಿ ಹೋದಂತೆ, ನಾನೂ ಅವನಿಂದ ಮುಖ ತಿರುಗಿಸಿಕೊಳ್ಳುತ್ತೇನೆ ಮತ್ತು ಅವನಿಗಾಗಿ ನನ್ನ ರಹ್ಮತ್‌ನ ಬಾಗಿಲುಗಳನ್ನು ತೆರೆಯುವುದಿಲ್ಲ.'"

**(ಫರ್ಹೂಇಲುಲ್ ಖುರ್‌ಆನ್, ಪುಟ 264–265)**

----------*****----------

'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:
https://akhbarbadr.in/Kannada/#gsc.tab=0

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

MUSLIM TELEVISION AHMADIYYA INTERNATIONAL
www.mta.tv

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
NATIONAL TOLL FREE : 1800–103–2131
ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.